# ಹೊಸ ಮನುಷ್ಯ

**ಸಮಾಜವಾದಿ ಮಾಸಿಕ**

**ಜೂನ್, ೨೦೧೮** **ಸಂಪಾದಕ : ಡಿ.ಎಸ್.ನಾಗಭೂಷಣ** **ಸಂಪುಟ: ೭ ಸಂಚಿಕೆ: ೫**

**ಚಂದಾ ರೂ. ೧೫೦/-(ಮಾರ್ಚ್‌ನಿಂದ ಸೆಪ್ಟಂಬರ್, ೨೦೧೮ರ ಸಂಚಿಕೆಯವರೆಗೆ) ಬೆಲೆ:** ಬಿಡಿ ಪ್ರತಿ: ರೂ. ೨೦/- ಪುಟ: ೨೦



**ವಿಳಾಸ:** ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

'ಮಂತ್ರಕ್ಕೆ ಮಾವಿನಕಾಯಿ ಉದುರುವುದಿಲ್ಲ ಎಂಬ ಮಾತು ಕರ್ನಾಟಕದಲ್ಲಿ ಸುಳ್ಳಾಗಿದೆ. ಪೂಜೆ, ಹರಕೆ, ಯಂತ್ರ ಮಂತ್ರ ತಂತ್ರ ಹೋಮ ಹವನಗಳಿಂದ ಕೆಲಸ ಸಿದ್ಧಿಸುವುದಿಲ್ಲ ಎಂಬ ವಿಚಾರವಾದಿಗಳ 'ವೈಜ್ಞಾನಿಕ' ಮಾತು ಹಳತಾಗಲಿದೆ. ನನ್ನ ಮಗ ಮುಖ್ಯ ಮಂತ್ರಿ ಆಗುವುದನ್ನು ನೋಡದೆ ನಾನು ಸಾಯಬೇಕಲ್ಲ! ಎಂಬ ದೇವೇಗೌಡರ ಆರ್ತನಾದ ಅವರು ಪೂಜಿಸಿದ ನೂರಾರು ದೇವರುಗಳಿಗೆ ತಲುಪಿ ವರಪ್ರದಾನವಾದಂತೆ ಎಚ್. ಡಿ ಕುಮಾರಸ್ವಾಮಿಯವರು ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಮೇಲಾಗಿ ಅಧಿಕಾರದ ಬಾಗಿಲು ತೆರೆಯಲಾರಂಭಿಸಿದ ಘಳಿಗೆಯಿಂದ ಸಿಕ್ಕ ಸಿಕ್ಕ ದೇವರುಗಳಿಗೆ ಪೂಜೆ ಪುನಸ್ಕಾರಗಳ ಮೂಲಕ ಕೃತಜ್ಞತೆ ಅರ್ಪಿಸುವ ತರಾತುರಿ ಈ ಘಳಿಗೆಯವರೆಗೂ ನಡೆದಿದೆ! ಇದಕ್ಕೆ 'ವೈಜ್ಞಾನಿಕ'ವನ್ನು ಮೀರಿದ 'ಮನೋ ವೈಜ್ಞಾನಿಕ' ಕಾರಣಗಳಿದ್ದಂತಿವೆ. ಅಪ್ಪ-ಮಕ್ಕಳಿಗೂ ಪ್ರಾಮಾಣಿಕವಾಗಿ ಅನ್ನಿಸಿಬಿಟ್ಟಿದೆ, ಇದು ನಂಬಿದ ದೇವರುಗಳ ಕೈವಾಡವಲ್ಲದೆ ಮತ್ತೇನಲ್ಲ ಎಂದು! ಹಾಗನಿಸಲು ಕಾರಣ, ರಾಜ್ಯದ ಜನತೆ ತಮ್ಮ ಕೈಬಿಟ್ಟಿರುವುದು ಜನತೆ ಮತ್ತುಇತರ ಎರಡು ಪಕ್ಷಗಳ ಕಣ್ಣಿಗೆ ಕಾಣುತ್ತಿರುವಂತೆ ಅವರ ಕಣ್ಣಿಗೂ ಕಾಣುತ್ತಿದೆ. ಆದರೂ ಮುಖ್ಯಮಂತ್ರಿಪಟ್ಟ ತಾನಿರುವಲ್ಲಿಗೆ ಹುಡುಕಿಕೊಂಡು ಬರುವುದೆಂದರೆ? ಇದು ದೈವಶಕ್ತಿಯ ಕೈವಾಡವಲ್ಲದೆ ಮತ್ತೇನು?

ಸಿದ್ಧರಾಮಯ್ಯನವರ ಮೂಢನಂಬಿಕೆ ವಿರೋಧಿ ದಳ ತಲೆ ಮರೆಸಿಕೊಂಡು ಹೋಗಿದೆ. ಕೆಲವರು ತಮ್ಮ ಗೂಡುಗಳ ಬಾಗಿಲ ಮರೆಯಿಂದ ನಾವೇನೂ ಇವನ್ನೆಲ್ಲ ಮೂಢನಂಬಿಕೆಗಳ ಪಟ್ಟಿಯಲ್ಲಿ ಸೇರಿಸಿರಲಿಲ್ಲ ಎಂದು ಪಿಸುಗುಟ್ಟಿ ಹಿಂದಿನ ಸರ್ಕಾರ ದಯಪಾಲಿಸಿದ ತಮ್ಮ 'ಸ್ಥಾನ-ಮಾನ'ಗಳನ್ನು ಉಳಿಸಿಕೊಳ್ಳುವ ಹರಸಾಹಸದಲ್ಲಿದ್ದಾರೆ. ಇನ್ನು ಅತ್ತ ಬಿಜೆಪಿಯ ಯಡಿಯೂರಪ್ಪ ಮತ್ತು ಅವರ ಗೆಣೆಕಾರ-ಕಾತಿಯರು ನಮ್ಮಂತಹ ಧರ್ಮದುರಂಧರರಿಗೆ ಇನ್ನೂ ಐದು ವರ್ಷಗಳ ವನವಾಸದ ಶಿಕ್ಷೆ ಘೋಷಿತವಾಗಿರಬೇಕಾದರೆ ಇದು ದೈವಶಕ್ತಿಯಲ್ಲ, ದೆವ್ವಶಕ್ತಿಯೇ ಇರಬೇಕೆಂದು ಲೆಕ್ಕ ಹಾಕಿ ಅದರ ಪರಿಹಾರಕ್ಕಾಗಿ ದ.ಕನ್ನಡ-ಕೇರಳಗಳ ಕುಖ್ಯಾತ ಜ್ಯೋತಿಷಿ-ಮಂತ್ರವಾದಿಗಳನ್ನು ಸಂಪರ್ಕಿಸುವ ಆಲೋಚನೆಯಲ್ಲಿದ್ದಂತಿದೆ.

ಈ ಬಾರಿಯ ಸಂಪಾದಕೀಯ ಟಿಪ್ಪಣಿಗಳನ್ನು ಹೀಗೆ ಲಘು ಶೈಲಿಯಲ್ಲಿ ಪ್ರಹಸನವೊಂದರ ರೂಪದಲ್ಲಿ ಆರಂಭಿಸಿರುವುದೆಕ್ಕೆ ಕಾರಣ, ರಾಜ್ಯದ ಇತ್ತೀಚಿನ ದಿನಗಳ ರಾಜಕಾರಣವೇ ಒಂದು ಪ್ರಹಸನದಂತಾಗಿರುವುದು. ಅತಂತ್ರ ವಿಧಾನಸಭೆಯ ಸ್ಪಷ್ಟ ಸೂಚನೆ ಚುನಾವಣೆಗಳ ಮೊದಲೇ ಎಲ್ಲರಿಗೂ ಸಿಕ್ಕಿತ್ತು. ಆದರೆ ಈ ಅತಂತ್ರ ಈ ಮಟ್ಟದ ಕುತಂತ್ರ ರಾಜಕಾರಣಕ್ಕೆ ಕಾರಣವಾಗುವುದೆಂದು ಯಾರೂ ಊಹಿಸಿರಲಿಲ್ಲ. ನಮ್ಮ ಹಿಂದಿನ ಸಂಚಿಕೆಯಲ್ಲಿ ತಿಳಿಸಿದಂತೆ ರಾಜ್ಯದ ಚುನಾವಣಾ ರಂಗ ಒಂದು ಮಲದ ಗುಂಡಿಯೇ ಆಗಿದ್ದು ಅದರಲ್ಲಿ ಬಿದ್ದು ಸೆಣೆಸಾಡಿ ಹಣ, ಜಾತಿ ಮತ್ತು ಕೋಮು ಶಕ್ತಿಗಳ ರಕ್ಷಾ ಕವಚಗಳ ಸಹಾಯದಿಂದ ಗೆದ್ದು ಎದ್ದು ಬಂದವರು ನಡೆಸಿರುವ ಅಧಿಕಾರದ ಆಟವನ್ನು ಯಾವ ಭಾಷೆಯಲ್ಲಿ ವಿವರಿಸುವುದು? ಆಶ್ಚರ್ಯವೆಂದರೆ ಇವರೆಲ್ಲರೂ ನೈತಿಕತೆ, ಪಾವಿತ್ರ್ಯ, ಪ್ರಜಾಪ್ರಭುತ್ವ, ಸಂವಿಧಾನಗಳ ಪರಿಭಾಷೆಯಲ್ಲಿ ಗಟ್ಟಿಯಾಗಿ ಕಿರುಚಿಕೊಳ್ಳುತ್ತಿದ್ದಾರೆ. ಜನ ಮೂಕರಾಗಿ ಹೋಗಿದ್ದಾರೆ, ಇವರ ಕೆಲ ದಲ್ಲಾಳಿ ಗಿರಾಕಿಗಳ ಹೊರತಾಗಿ.

ಈ ಹೊಲಸು ನಾಟಕದ ಅತ್ಯಂತ ಹೊಲಸಾದ ಭಾಗವೆಂದರೆ, ಬಹುಮತವಿಲ್ಲವೆಂದು ಸ್ಪಷ್ಟವಾಗಿ ಗೊತ್ತಿದ್ದರೂ, ಸರ್ಕಾರ ರಚಿಸಲು ರಾಜ್ಯಪಾಲರು ಯಡಿಯೂರಪ್ಪನವರಿಗೆ ಆಹ್ವಾನ ನೀಡಿದ್ದು ಮತ್ತು ಯಡಿಯೂರಪ್ಪ ಅದಕ್ಕಾಗಿ ಮಾಡಬಾರದ್ದನ್ನೆಲ್ಲ ಮಾಡಲು ಹೋಗಿ ಸರ್ವೋನ್ನತ ನ್ಯಾಯಾಲಯದ ಮಧ್ಯಪ್ರವೇಶದಿಂದ ಅದು ತಪ್ಪಿಹೋದದ್ದು. ಅಷ್ಟೇ ಹೊಲಸಾದ ನಡೆಯೆಂದರೆ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ತಮ್ಮ ಸಮ್ಮಿಶ್ರ ಸರ್ಕಾರದ ಬಹುಮತ ಸಾಬೀತಾಗುವ ದಿನದವರೆಗೂ ತಮ್ಮ ಶಾಸಕರನ್ನು ಪಂಚತಾರಾ ವಸತಿಗಳಲ್ಲಿ ಕೂಡಿಹಾಕಿಕೊಂಡದ್ದು. ಈ ಪಕ್ಷಗಳ ಯಾವೊಬ್ಬ ಶಾಸಕನೂ 'ನಮ್ಮನ್ನೇಕೆ ಕಳ್ಳರಂತೆ ಕೂಡಿಹಾಕಿ ನಮ್ಮ ಮರ್ಯಾದೆ ತೆಗೆಯುತ್ತಿದ್ದೀರಿ' ಎಂದು ಕೇಳುವ ನೈತಿಕ ತಾಕತ್ತನ್ನು ತೋರಲಿಲ್ಲ ಎಂಬುದು ಈ ಪಕ್ಷಗಳ ಬಗ್ಗೆ ಎಲ್ಲವನ್ನೂ ಹೇಳುತ್ತದೆ. ಇಂತಹ 'ತಾ ಕಳ್ಳ ಪರರ ನಂಬ'ದ ಜನರಿಂದ ನಾವು ಎಂತಹ ಸರ್ಕಾರವನ್ನು ನಿರೀಕ್ಷಿಸಬಹುದು?

ಇವರೆಲ್ಲ ಏನಾದರೂ ಹಾಳುಬಡಿದುಕೊಂಡು ಹೋಗಲಿ, ಜನತೆಗೊಂದು ಸರ್ಕಾರ ಬೇಡವೆ? ಸಂವಿಧಾನಬದ್ಧವಾದ ಸರ್ಕಾರವೊಂದು ರಚನೆಯಾಗಬೇಕಿತ್ತಲ್ಲ, ಅದು ಆಗಿದೆ. ಅದು ಹೇಗೆ ಆಡಳಿತ ಮಾಡುತ್ತದೆ ನೋಡೋಣ ಎಂದು ಸಮಧಾನ ಮಾಡಿಕೊಳ್ಳುವವರು, ಸಮಾಧಾನ ಮಾಡುವವರೂ ನಮ್ಮ ಮಧ್ಯೆ ಇದ್ದಾರೆ. ಇವರ ಪ್ರಕಾರ ಸಂವಿಧಾನಬದ್ಧತೆ ಎಂದರೆ ಬಹುಮತ ಸಾಬೀತು. ಇವರಿಗೆ 'ಕಾಂಗ್ರೆಸ್ ಮತ್ತು ಜೆಡಿಎಸ್ ಸೇರಿ ಬಹುಮತ ಸಾಬೀತು ಪಡಿಸುವುದರೊಂದಿಗೆ ಸಂವಿಧಾನಬದ್ಧತೆಯನ್ನು ಕುರಿತ ಚರ್ಚೆ ಮುಗಿದಂತೆ. ಇದು ಇಲ್ಲಿನವರೆಗಿನ ನಮ್ಮ ರಾಷ್ಟ್ರದ ರಾಜಕಾರಣ ತನ್ನ ದುಷ್ಟತನದಿಂದ ಸಂವಿಧಾನವನ್ನು ಒಂದು ತಾಂತ್ರಿಕ ವ್ಯವಸ್ಥೆಯ ಮಟ್ಟಕ್ಕೆ ಇಳಿಸಿರುವದಕ್ಕೆ ಸಾಕ್ಷಿ.

ಸಂವಿಧಾನವೆಂಬುದು ರಾಷ್ಟ್ರ ನಿರ್ಮಾಣ ಮತ್ತು ನಿರ್ವಹಣೆಗಾಗಿ ಪಾಲಿಸಬೇಕಾದ ನೀತಿಸಂಹಿತೆಯೊಂದರ ಲಿಖಿತ ರೂಪ. ಆದರೆ ನಾವು ಅದರ ಲಿಖಿತ ರೂಪದ ವಾಕ್ಯಗಳನ್ನು ನಮ್ಮ ಮೂಳೆಯಿಲದ್ದ ನಾಲಗೆಗಳ ಮೇಲೆ ನಮ್ಮ ದಾಹಗಳು ಸೃಜಿಸುವ ಎಂಜಲುಗಳಿಂದ ಒದ್ದೆ ಮಾಡಿ ನಮಗೆ ಬೇಕಾದಂತೆ ಹೊರಳಾಡಿಸಿ ಅಗಿದು ಅವುಗಳ ನೀತಿ ಸತ್ವವನ್ನು ತೆಗೆದು ಹೊರಗೆ ಉಗುಳಿಬಿಟ್ಟಿದ್ದೇವೆ. ಅದರ ಪ್ರಾಣ ತೆಗೆದು ದೇಹವನ್ನಷ್ಟೇ ಹೊರಳಾಡಿಸಿ ವಾದ ಮಾಡುತ್ತಿದ್ದೇವೆ. ಹಾಗಾಗಿಯೇ ತನ್ನ ಮುಖ್ಯಮಂತ್ರಿ, ಅವರ ತವರು ಕ್ಷೇತ್ರದಲ್ಲಿ ಅವಮಾನಕರವಾಗಿ ಸೋತು ಸುಣ್ಣವಾದರೂ, ಇದನ್ನು ನಿರೀಕ್ಷಿಸಿಯೇ ಹುಡುಕಿಕೊಂಡು ಹೋದ ಕುಲಬಾಂಧವರ ಪ್ರಾಬಲ್ಯದ ದೂರದ ಕ್ಷೇತ್ರದಲ್ಲಿ ಮಾನ ಮುಚ್ಚುವಷ್ಟು ಮಾತ್ರ ಬಟ್ಟೆಯಂಚಿನಿಂದ ಸೋಲಿನಿಂದ ಪಾರಾದ ಮುಜುಗರವಾಗಲಿ, ಅವರ ಸರ್ಕಾರದ ಮುಕ್ಕಾಲು ಸಂಪುಟ ಧೂಳೀಪಟವಾಗಿದೆ ಎಂಬ ಆಘಾತವಾಗಲೀ, ತನ್ನ ಶಾಸಕರಲ್ಲಿ ಅರ್ಧದಷ್ಟು ಜನ ಜನರಿಂದ ತಿರಸ್ಕೃತರಾಗಿರುವ ಕಟುವಾಸ್ತವವಾಗಲೀ ಕಾಂಗ್ರೆಸ್ ಪಕ್ಷದ ಅಂತರಾಳವನ್ನು ಬಾಧಿಸಿಯೇ ಇಲ್ಲ. ಅದು ತಾನು ಜನರಿಂದ ತಿರಸ್ಕೃತವಾಗಿ ಈ ಸಲದ ಪ್ರಜಾಪ್ರಭುತ್ವದ ಪರೀಕ್ಷೆಯಲ್ಲಿ ಸೋತಿದ್ದೇನೆ ಎಂಬ ಆತ್ಮಸಾಕ್ಷಿಯ ಅರಿವನ್ನೇ ಕಳೆದುಕೊಂಡಂತೆ ಮತ್ತೆ ಅಧಿಕಾರದ ಆಟದಲ್ಲಿ ನಿರ್ಲಜ್ಜವಾಗಿ ಪಾಲ್ಗೊಂಡಿದೆ. ಅದು ತನ್ನ ಈ ನಿರ್ಲಜ್ಜೆಯನ್ನು ಮರೆಮಾಚಿಕೊಳ್ಳಲು ತಾನು ಚುನಾವಣೆಗೆ ಮುನ್ನ ಮತ್ತು ಚುನಾವಣೆಯ ಸಂದರ್ಭದಲ್ಲಿ ಅವಕಾಶವಾದಿಗಳ, ದಳ್ಳಾಳಿಗಳ, ಸುಳ್ಳರ, ನೀಚರ ಪಕ್ಷವೆಂದು ಗಂಟಲು ಹರಿಯುವಂತೆ ಜರಿಯುತ್ತಿದ್ದ ಪಕ್ಷಕ್ಕೆ ಮುಖ್ಯಮಂತ್ರಿ ಸ್ಥಾನವನ್ನು ದಾನ ಮಾಡಿ 'ಉದಾರತೆ'ಯನ್ನು ಬೇರೆ ಮೆರೆದಿದೆ. ಈ ಜೆಡಿಎಸ್ ಪಕ್ಷವೋ ಈ ದಾನವನ್ನು ಸ್ವೀಕರಿಸುವ ಮೂಲಕ ಕಾಂಗ್ರೆಸ್‌ನ ಈ ಎಲ್ಲ ಬೈಗುಳಗಳನ್ನು ನಿಜಮಾಡುತ್ತಿರುವೆ ಎಂಬ ಪರಿವೆಯಾಗಲೀ, ವಿಧಾನಸಭೆಯ ಮೂರನೇ ಒಂದು ಭಾಗದಷ್ಟೂ ಸ್ಥಾನಗಳು ಲಭಿಸಿಲ್ಲ ಮತ್ತು ತನ್ನದು ಮತಗಳಿಕೆಯಲ್ಲಿ ಕೊನೆಯ ಸ್ಥಾನ ಎಂಬ ಕನಿಷ್ಟ ವಿನಯವಾಗಲೀ ಇಲ್ಲದೆ ಕೊಂಬು ಕಹಳೆ ಪರಾಕುಗಳ ಸಂಭ್ರಮದೊಂದಿಗೆ ಅಧಿಕಾರಕ್ಕೆ ಮುಂದಾಗಿದೆ.

ಈ ಮೂರೂ ಪಕ್ಷಗಳಲ್ಲಿ ಯಾವೊಂದು ಪಕ್ಷವಾಗಲೀ, ಅದರ ಯಾವೊಬ್ಬ ನಾಯಕನಾಗಲೀ, ಜನರ ಆದೇಶವಿಲ್ಲದ ಕಾರಣ ನಾವು ವಿರೋಧ ಪಕ್ಷದಲ್ಲಿ ಕೂರುತ್ತೇವೆ ಎಂದು ಬಾಯಿ ಮಾತಿಗಾದರೂ ಹೇಳಲು ಮುಂದೆ ಬರಲಿಲ್ಲ ಎಂಬುದೇ ಸಂವಿಧಾನಬದ್ಧತೆ ಮತ್ತು ಆ ಮೂಲಕ ಪ್ರಜಾಪ್ರಭುತ್ವ ಎಂಬ ಪರಿಕಲ್ಪನೆಗಳಿಗೆ ಮಾಡಲಾಗಿದೆ ಎಂದು ನಾನು ಹೇಳುತ್ತಿರುವ ಮರ್ಮಾಘಾತಗಳಿಗೆ ಸಾಕ್ಷಿಯಾಗಿದೆ. ಸಂವಿಧಾನವೆಂದರೇನು ಬರೀ ಅಂಕೆ ಸಂಖ್ಯೆಗಳ ಲೆಕ್ಕಾಚಾರ ಮಾತ್ರವೇ? ಪ್ರಜಾಪ್ರಭುತ್ವವೆಂದರೆ ಏನು ಅಧಿಕಾರದ ಆಟ ಮಾತ್ರವೇ? ಹಾಗಿದ್ದಲ್ಲಿ ಅದು ಲೆಕ್ಕದ ಆಟದಲ್ಲಿ ಗೆದ್ದವರ ಅಥವಾ ಬಹುಮತೀಯರ ಪ್ರಭುತ್ವವಾಗುತ್ತದೆಯೇ ಹೊರತು ಪ್ರಜಾಪ್ರಭುತ್ವ ಅನ್ನಿಸಿಕೊಳ್ಳುವುದಿಲ್ಲ. ಸಂವಿಧಾನದ ಉದ್ದೇಶವಾಗಲೀ, ಆಶಯವಾಗಲೀ ಖಂಡಿತ ಇದಲ್ಲ. ಆದರೂ ಮೂರೂ ಪಕ್ಷಗಳು ಸಂವಿಧಾನದ ಹೆಸರಿನಲ್ಲಿ, ಪ್ರಜಾಪ್ರಭುತ್ವದ ಹೆಸರಿನಲ್ಲಿ, ಇವುಗಳ ಬೇರಾವ ಮೌಲ್ಯಗಳ ಮತ್ತು ಬದ್ಧತೆಗಳ ಪರಿವೆಯೇ ಇಲ್ಲದಂತೆ ಅಧಿಕಾರಕ್ಕಾಗಿ ಮಾತ್ರ ಕಚ್ಚಾಡುತ್ತಿವೆ.

### ಕೋಮುವಾದದ ವಿರುದ್ಧ ಹೋರಾಟ

ಕಾಂಗ್ರೆಸ್ ಕಳೆದು ಕೆಲವು ವರ್ಷಗಳಿಂದ ಮತ ಕೇಳುತ್ತಿರುವುದು ಕೋಮುವಾದದ ಬೆದರಿಕೆಯ ಆಧಾರದ ಮೇಲೆ. ಹಾಗಾಗಿ ಬಿಜೆಪಿಯನ್ನು ಹೊರಗಿಟ್ಟು ಸರ್ಕಾರ ರಚಿಸುವುದು ತನ್ನ ನೈತಿಕ ಹೊಣೆಯಾಗಿತ್ತು ಎಂದು ವಾದಿಸಬಹುದು. ನಿಜ, ಈ ದೇಶ ಕೋಮುವಾದದ ಅಪಾಯವನ್ನು ಎದುರಿಸುತ್ತಿದೆ. ಆದರೆ ಅಷ್ಟೇ ನಿಜವಾದ ಸಂಗತಿ ಎಂದರೆ, ಈ ಕೋಮುವಾದವು ಸಂವಿಧಾನದ ವಿಧಿ–ವಿಧಾನಗಳ ಅಡಿಯಲ್ಲೇ, ಪ್ರಜಾಪ್ರಭುತ್ವದ ಚೌಕಟ್ಟಿನಲ್ಲೇ ಜಾಗ ಮಾಡಿಕೊಂಡು ಜನತೆಯ ಬೆಂಬಲದೊಂದಿಗೆ ಬೆಳೆಯುತ್ತಿದೆ ಎಂಬುದು. ಇದು ಹೇಗೆ ಸಾಧ್ಯವಾಯಿತು ಮತ್ತು ಏಕೆ ಸಾಧ್ಯವಾಯಿತು ಎಂಬುದನ್ನೂ ಪರಿಶೀಲಿಸಿ ಅದರಿಂದ ಪಾಠ ಕಲಿತು. ಜನತೆಯ ಆದೇಶವನ್ನು ಸಲ್ಲದ ನೆಪಗಳಿಂದ ತಿರಸ್ಕರಿಸದೆ ಅದನ್ನು ಪ್ರಜಾಪ್ರಭುತ್ವದ ಸಾಧು ವಿಧಾನಗಳ ಮೂಲಕವೇ ಎದುರಿಸಬೇಕು. ಖಂಡಿತ ಇದನ್ನು ಕಾಂಗ್ರೆಸ್ ದಾಖಲೆಯಲ್ಲಿರುವ ಅನುಮಾನಾಸ್ಪದ ಸೆಕ್ಯುಲರ್‌ವಾದಿ ರಾಜಕಾರಣದ ಮೂಲಕ ಎದುರಿಸಲಾಗುವುದಿಲ್ಲ. ಕಳೆದ ಇಪ್ಪತ್ತೈದು ವರ್ಷಗಳ ರಾಜಕಾರಣ ಇದನ್ನು ಸಾಬೀತುಪಡಿಸಿದೆ. ಇದಕ್ಕೆ ಕಾರಣ ಅದು ಕೋಮುವಾದವನ್ನು ಅರ್ಥೈಸಿಕೊಂಡಿರುವ ರೀತಿ ಮತ್ತು ಸಂದರ್ಭಗಳೇ ದೋಷಪೂರ್ಣವಾಗಿರುವುದು. ಹಾಗಾಗಿಯೇ ಅದು ಹಲವು ಬಾರಿ ಅಲ್ಪಕಾಲಿಕ, ಚಿಲ್ಲರೆ ಮತ್ತು ಉಲ್ಟಾ ಕೋಮುವಾದಿ ರಾಜಕಾರಣ ಮಾಡಲುದ್ಯುಕ್ತವಾಗುವುದು ಮತ್ತು ಸೋಲುವುದು.

ನಮ್ಮ ಪತ್ರಿಕೆಯ ಇದೇ ಸಂಚಿಕೆಯಲ್ಲಿನ ಕರೋಲ್ ಶಾಫೆರ್ ಅವರ 'ಬಿಳಿ ಶ್ರೇಷ್ಠತಾವಾದವೆಂಬ ಜಾಗತಿಕ ಹೆಬ್ಬಲೆಯೂ ಭಾರತದ ಬಲಪಂಥೀಯತೆಯೂ' ಎಂಬ ಲೇಖನ ಓದಿದರೆ ಜಾಗತಿಕ ಆಯಾಮಗಳನ್ನು ಪಡೆದುಕೊಂಡು ಅದು ಪಡೆದುಕೊಳ್ಳುತ್ತಿರುವ ಭಯಾನಕ ರೂಪದ ಮುಂದೆ ಬಿಜೆಪಿ ಹೇಳುತ್ತಿರುವ 'ಹಿಂದುತ್ವ' ಜುಜುಬಿ ಎನ್ನಿಸಿಬಿಡುತ್ತದೆ. ಬಿಜೆಪಿಯ ಭೋಳೆ ದೇಶಭಕ್ತಿಯ ಅಮಲಿನಲ್ಲಿರುವವರು ಇದನ್ನು ಓದಿದರೆ ಅವರಲ್ಲಿ ಸಾಕಷ್ಟು ಮಂದಿಯ ಅಮಲು ಇಳಿಯುವುದು ಖಂಡಿತ. ಆದುದರಿಂದ ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಕೋಮುವಾದಿಗಳಿಂದ ರಕ್ಷಿಸುವ ರಾಜಕಾರಣ ಮೊದಲು ತನ್ನ ಸುಲಭ ಮತ್ತು ಸರಳೀಕೃತ ಜಾತ್ಯತೀತೆಯ ಕಥನವನ್ನು ಕೈಬಿಟ್ಟು ದೊಡ್ಡ ಮುಖಾಮುಖಿಗೆ ಸಿದ್ಧವಾಗಬೇಕಿದೆ. ಅದಕ್ಕಾಗಿ ನಮ್ಮ ಎಡಪಂಥೀಯ ಮತ್ತು ಪ್ರಗತಿಪರರೆಂದು ಗುರುತಿಸಲ್ಪಡುವ ಗೆಳೆಯರು ಸೆಕ್ಯುಲರ್ ರಾಜಕಾರಣದ ವಿಶ್ವಾಸಾರ್ಹತೆಯನ್ನು ಹಾಳುಮಾಡಿರುವ ಭ್ರಷ್ಟಾಚಾರ, ಜಾತಿ ರಾಜಕಾರಣ, ಸ್ವಜನ ಪಕ್ಷಪಾತ, ಅದಕ್ಷತೆ, ಕುಟುಂಬ ರಾಜಕಾರಣಗಳ ವಿರುದ್ಧವೂ ದನಿ ಎತ್ತಿ ಅವನ್ನು ತಮ್ಮ ಕೋಮುವಾದ ವಿರೋಧಿ ರಾಜಕಾರಣದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಳ್ಳಬೇಕಿದೆ. ಆ ಮೂಲಕ ತಥಾಕಥಿತ ಸೆಕ್ಯುಲರ್ ಪಕ್ಷಗಳ 'ರಿಪೇರಿ' ಕೆಲಸವನ್ನೂ ಮಾಡಬೇಕಿದೆ. ಕೋಮುವಾದದ ಗುಮ್ಮನ ಹೆಸರಿನಲ್ಲಿ ಭ್ರಷ್ಟ ಮತ್ತು ದುಷ್ಟ ರಾಜಕಾರಣದ ಬಗ್ಗೆ ಜಾಣ ಮೌನ ವಹಿಸುವ ಮತ್ತು ಪ್ರತಿಪಾದಿಸುವ ಸೆಕ್ಯುಲರ್ ರಾಜಕೀಯ ವರಸೆಯನ್ನು ಜನ ತಿರಸ್ಕರಿಸಿದ್ದಾರೆಂಬುದು ಈ ಚುನಾವಣೆಯಲ್ಲಿ ನಿಚ್ಚಳವಾಗಿ ಸಾಬೀತಾಗಿದೆ.

### ಬುದ್ಧಿಜೀವಿ–ಚಿಂತಕ–ಲೇಖಕ–ಪ್ರಗತಿಪರರು ಇತ್ಯಾದಿ

ಇದೇ ಸಂದರ್ಭದಲ್ಲಿ ರಾಜ್ಯದ ಬುದ್ಧಿಜೀವಿಗಳು, ಲೇಖಕರು, ಚಿಂತಕರು, ಪ್ರಗತಿಪರರು ಇತ್ಯಾದಿ ಬಿರುದಾಂಕಿತರಾದ ಗೆಳೆಯರ ಬಗ್ಗೆ ಎರಡು ಮಾತು ಹೇಳಬೇಕು. ಇಂತಹ ಬಿರುದಾಂಕಿತ ಸಮುದಾಯ ಇತರ ಪ್ರಜಾಪ್ರಭುತ್ವ ದೇಶಗಳಲ್ಲಿ ಪ್ರಭುತ್ವದ–ಅದು ಯಾರದ್ದೇ ಆಗಿರಲಿ–ವಿರುದ್ಧ ಇರುವುದನ್ನು ನಾವು ನೋಡುತ್ತೇವೆ. ಅದು ಸಹಜ ಕೂಡ. ಏಕೆಂದರೆ ಮನಸ್ಸು ಪೂರ್ಣ ಸ್ವತಂತ್ರವಾಗಿರದ ಹೊರತು ಬುದ್ಧಿಯಲ್ಲಾಗಲೀ, ಚಿಂತನೆಯಲ್ಲಾಗಲೀ, ಬರಹದಲ್ಲಾಗಲೀ ಸೃಜನಶೀಲರಾಗಲು, ದಿಟ್ಟರಾಗಿರಲು ಸಾಧ್ಯವಿಲ್ಲ. ಸ್ವಾತಂತ್ರ್ಯಕ್ಕೆ ದೊಡ್ಡ ಅಪಾಯವಿರುವುದು ಯಾವಾಗಲೂ ಪ್ರಭುತ್ವದಿಂದಲೇ, ಅದು ಎಷ್ಟೇ ಪ್ರಜಾಪ್ರಭುತ್ವವಾದಿ ಎಂದು ಹೇಳಿಕೊಂಡರೂ. ನಾವಿದನ್ನು ಇತ್ತೀಚಿನ ವರ್ಷಗಳಲ್ಲಿ ಹಲವು ಪ್ರಭುತ್ವಗಳ ಅಡಿಯಲ್ಲಿ ನೋಡಿದ್ದೇವೆ. ಹೌದು, ಇಂತಹ ಅಪಾಯ ಒದಗಿದಾಗ ಒಂದು ನಿರ್ದಿಷ್ಟ ರಾಜಕೀಯ ನಿಲುವನ್ನು ತೆಗೆದುಕೊಳ್ಳಬೇಕು. ಆದರೆ ಅದು ಆ ಸಂದರ್ಭಕ್ಕೆ ಮಾತ್ರ.

ಇತರ ರಾಜ್ಯಗಳ ವಿಷಯ ನನಗೆ ತಿಳಿಯದು, ಆದರೆ ನಮ್ಮ ರಾಜ್ಯದಲ್ಲಿ ಲೇಖಕ–ಚಿಂತಕ–ಬುದ್ಧಿಜೀವಿ–ಪ್ರಗತಿಪರರೆನಿಸಿಕೊಂಡವರು ಹಿಂಡು ಹಿಂಡಾಗಿ ಒಂದು ಪಕ್ಷದ ವಕ್ತಾರರಂತೆ ಅ ಪಕ್ಷದ ಸೇವೆಯಲ್ಲಿ ತೊಡಗಿಕೊಂಡು ಜನಸಾಮಾನ್ಯರ ವ್ಯಂಗ್ಯ–ವಿಡಂಬನೆಗಳಿಗೆ ಒಳಗಾಗಿರುವುದು ಸುಳ್ಳಲ್ಲ. ಮೊದಲಾಗಿ ತಮ್ಮ ಚೇತನದ ಸ್ವಾತಂತ್ರ್ಯದ ಪರಿವೆಯೇ ಇಲ್ಲದ ಇವರೆಲ್ಲರನ್ನು ಹಾಗೆ ಗುರುತಿಸುವುದೇ ತಪ್ಪೆಂದು ಕಾಣುತ್ತದೆ. ಹಾಗಾಗಿಯೇ ಈ ಚುನಾವಣೆಗಳಲ್ಲಿ ಈ ಸಮುದಾಯದ ಪ್ರಚಾರ ಸೇವೆಗೆ ಜನತೆ ಕಿಲುಬು ಕಾಸಿನ ಕಿಮ್ಮತ್ತನ್ನೂ ನೀಡಿಲ್ಲ.

ಇರಲಿ. ನಾನು ಇವರ ಪ್ರತಿಭೆ–ಪರಿಶ್ರಮಗಳನ್ನು (ಎಚ್ಚರವಿರಲಿ : ಜಾತಿಯನ್ನಲ್ಲ!) ಗುರುತಿಸಿ ಸರ್ಕಾರವೊಂದು ತನ್ನ ಸೇವೆಯೊಂದಕ್ಕೆ ಆಹ್ವಾನಿಸಿದರೆ ಅದನ್ನೊಪ್ಪಿಕೊಂಡು ಹೋಗುವುದನ್ನು ಬೇಡ ಎನ್ನಲಾರೆ. ಆದರೆ ಅದನ್ನು ನಿಸ್ಪೃಹತೆಯಿಂದ ಪ್ರಜಾ ಸೇವೆಯೆಂದು ಮಾಡಬೇಕು. ಅದರಾಚೆ ಹೋಗಬಾರದು. ಇದನ್ನೆಲ್ಲ ಇವರಿಗೆ ಹೀಗೆ ಹೇಳಬೇಕಾಗಿದೆ ಎಂಬುದೇ ನಮ್ಮ ಇಂದಿನ ಸಾಂಸ್ಕೃತಿಕ ದುರಂತ.

ಅದೇನೇ ಇರಲಿ, ಒಂದು ವಾಸ್ತವಾಂಶವನ್ನು ಒಪ್ಪಿ ಈ ಟಿಪಣಿಗಳನ್ನು ಮುಗಿಸಬೇಕಿದೆ. ಅದೇಂದರೆ ಎಚ್.ಡಿ. ಕುಮಾರಸ್ವಾಮಿಯವರು ಈಗ ರಾಜ್ಯದ ಮುಖ್ಯಮಂತ್ರಿ. ಅವರಿಗೆ ತಮ್ಮ ಪಿತಾಶ್ರೀ ಮತ್ತು ಅಗ್ರಜ ಮಹಾಶಯರು ಒದಗಿಸಿರುವ ವಾಸ್ತು ಪಂಡಿತರ ಮತ್ತು ಪಂಚಾಂಗ ಹಿಡಿದ ಪುರೋಹಿತರ ರಕ್ಷಣೆಯ ಹೊರತಾಗಿಯೂ ಪತ್ರಿಕೆ ಶುಭ ಹಾರೈಸುವ ಧೈರ್ಯ ಮಾಡುತ್ತದೆ ಮತ್ತು ಅವರಿಂದ ಸಾಧ್ಯವಾದಷ್ಟೂ ಒಳ್ಳೆಯ ಆಡಳಿತವನ್ನು ನಿರೀಕ್ಷಿಸುತ್ತದೆ.

**–ಸಂಪಾದಕ**

---

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಮೇ ೨೦೧೮ರ ಸಂಚಿಕೆ ಓದುಗ ಸಮುದಾಯದ ಮೆಚ್ಚಿನದ್ದಾಗಿದೆ. ಕರ್ನಾಟಕ ರಾಜ್ಯವನ್ನು ನಾವು ಯಥಾಸ್ಥಿತಿಯಲ್ಲಿ ಮಾತ್ರ ಪರಿಭಾವಿಸಿಕೊಳ್ಳುತ್ತಿದ್ದೇವೆ. ಆದರೆ ಇದರಿಂದ ಜನಸಾಮಾನ್ಯರು, ಶ್ರಮಿಕರು ಅನುಭವಿಸುವ ಸಂಕಟಗಳಿಗೆ ಪರಿಹಾರ ಸಿಗುವುದಿಲ್ಲ. ಆದ್ದರಿಂದ ನಮ್ಮ ಕೈಲಾದಮಟ್ಟಿಗೆ ಭಿನ್ನವಾಗಿ ಚಿಂತಿಸುವ ಮತ್ತು ಆ ನಿಟ್ಟಿನಲ್ಲಿ ಹೊಸತನ್ನು ಸಾಧಿಸಿಕೊಂಡವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಲು ನಾವು ಏನೇನು ಸಂಕಲ್ಪಗಳನ್ನು ಮಾಡಬೇಕೆನ್ನುವ ಬಗ್ಗೆ ಸಂಪಾದಕೀಯವು ಸುಳುಹುಗಳನ್ನು ಒದಗಿಸುತ್ತಿದೆ. ಹಾಸನ ಜಿಲ್ಲೆಯ ಸಮುದಾಯದ ಸಹಭಾಗಿತ್ವದ 'ನೀರ ಮಾರ್ಗ'ವಂತೂ ನಮ್ಮ ಎಲ್ಲ ರಾಜ್ಯಗಳು ಅಳವಡಿಸಿಕೊಳ್ಳಬೇಕಾದ ಕಾಯಕವಾಗಿದೆ. ರೂಪಾ ಹಾಸನ ಅವರ ಬರವಣಿಗೆಯ ಶೈಲಿ ಪ್ರತಿಯೊಬ್ಬ ಓದುಗನನ್ನು 'ಹೊಸ ಮನುಷ್ಯ'ನನ್ನಾಗಿ ರೂಪಿಸುತ್ತಿದೆ. ಲೋಹಿಯಾ ಕುರಿತ ಲೇಖನ, ಬುದ್ಧನ ಕತೆಗಳು ಮನವನ್ನು ತೆರೆಸುತ್ತವೆ. ಒಟ್ಟಾರೆ ಈ ಸಂಚಿಕೆಯು ಸಂಗ್ರಹಯೋಗ್ಯವಾಗಿದೆ.

**–ಡಾ.ಚೆನ್ನಬಸಪ್ಪ ಚಿಲ್ಕರಾಗಿ** ಕೊಪ್ಪಳ

ಲೋಹಿಯಾ, ಲೋಹಿಯಾವಾದಗಳನ್ನೆಲ್ಲಾ ಬಹುತೇಕ ಎಲ್ಲರೂ ಮರೆತೇ ಬಿಟ್ಟಿರುವ ಈ ದಿನಗಳಲ್ಲಿ ಲೋಹಿಯಾರನ್ನು 'ಹೊಸ ಮನುಷ್ಯ'ದ ಪ್ರಯೋಗದ ಮೂಲಕ ಧ್ಯಾನಿಸುತ್ತಿರುವ ಡಿಎಸ್ಸೆನ್ ಒಂಟಿ ಸೈನಿಕ ಪಡೆಯಂತೆ ನನಗೆ ಕಾಣುತ್ತಾರೆ. ಪತ್ರಿಕೆ ಈಗ ಲೋಹಿಯಾ ಚಿಂತನೆಯ ಹಿನ್ನೆಲೆಯ ರಾಜಕೀಯ ವಿಶ್ಲೇಷಣೆಗಳ ಜೊತೆಗೆ ಸಮಕಾಲೀನ ಸಾಮಾಜಿಕ–ರಾಜಕೀಯ ವಿದ್ಯಮಾನಗಳಿಗೂ ಸ್ಪಂದಿಸುತ್ತಿರುವುದು ಸ್ವಾಗತಾರ್ಹ. ಮೇ ಸಂಚಿಕೆಯಲ್ಲಿನ ಶಿವಪ್ರಕಾಶ್ ಮತ್ತು ಕಮಲಾ ಹೆಮ್ಮಿಗೆಯವರ ಕವನಗಳು ಇಷ್ಟವಾದವು. ಅಡಿಗರ ಕಾವ್ಯ ಕುರಿತ ಜಿ. ರಾಜಶೇಖರರ ಲೇಖನ ಕುತೂಹಲಕಾರಿಯಾಗಿದ್ದು ಹೆಚ್ಚಿನ ಚರ್ಚೆಯನ್ನು ಆಹ್ವಾನಿಸುವಂತಿದೆ.

**–ಸುಬ್ರಾಯ ಚೊಕ್ಕಾಡಿ,** ಚೊಕ್ಕಾಡಿ, ಸುಳ್ಯ (ದ.ಕ)

**(ಹಿನೇ ಪುಟಕ್ಕೆ**

# ನಾವೇಕೆ ಇಂದು ಲೋಹಿಯಾರನ್ನು ನೆನಪಿಸಿಕೊಳ್ಳಬೇಕಿದೆ? (ಭಾಗ-೪)

ಇಂಗ್ಲಿಷ್ ಮೂಲ : ನ್ಯಾ. ಬಿ. ಸುದರ್ಶನ ರೆಡ್ಡಿ
ಕನ್ನಡಕ್ಕೆ : ಬಿ.ವಿ. ಸುರೇಂದ್ರ




**ಕಳೆದ ಮೂರು ಸಂಚಿಕೆಗಳಲ್ಲಿ ಹರಿದು ಈ ಸಂಚಿಕೆಯಲ್ಲಿ ಮುಗಿಯುತ್ತಿರುವ ಈ ಉಪನ್ಯಾಸ ಲೋಹಿಯಾ ಶೋಷಣಾಮುಕ್ತ ಸಮಾನ ಅವಕಾಶಗಳ ಸಮಾಜವಾದಿ ಸಮಾಜದ ನಿರ್ಮಾಣಕ್ಕೆ ಎಷ್ಟು ಕಟಿ ಬದ್ಧರಾಗಿದ್ದರೋ ಅದೇ ಸಮಯದಲ್ಲಿ ಅಷ್ಟೇ ತೀವ್ರವಾಗಿ ಅವರು ಈ ಸಾಮುದಾಯಿಕತೆಯ ಪ್ರವೃತ್ತಿ ಅತಿಗೆ ಹೋಗಿ, ಅದರ ಪರಿಣಾಮವಾಗಿ ಅದು ಏಕರೂಪಿ ಮನಸ್ಸಿನ ನಿರ್ಮಾಣಕ್ಕೂ ಕಾರಣವಾಗಿ ಹಲವು ರೀತಿಗಳಲ್ಲಿ ವ್ಯಕ್ತಿಯ ಖಾಸಗಿತನ ಮತ್ತು ಘನತೆಗಳ ಮೇಲೂ ಆಕ್ರಮಣ ಮಾಡುವ ಸಾಧ್ಯತೆಗಳನ್ನು ಮುನ್ನೋಡಿ ಅದರ ವಿರುದ್ಧವೂ ಅಷ್ಟೇ ತೀವ್ರವಾದ ಹೋರಾಟಕ್ಕೆ ಬದ್ಧರಾಗಿ ಈ ಹೋರಾಟ ಏಕೆ ಗಾಂಧಿ ಪ್ರಣೀತ ಅಸಹಕಾರ ಸತ್ಯಾಗ್ರಹದ ಮೂಲಕವೇ ಯಶಸ್ವಿಯಾಗಬಲ್ಲುದು ಎಂಬುದನ್ನು ವಿವರಿಸಿರುವ ಬಗೆಯನ್ನು ನಮ್ಮ ಮುಂದಿಟ್ಟಿದೆ. ಆ ಮೂಲಕ ಲೋಹಿಯಾ ಪ್ರತಿಪಾದಿಸಿದ ಸಮಾಜವಾದ ಹೇಗೆ ಸಾಂಪ್ರದಾಯಿಕ ಸಮಾಜವಾದದ ಮಾದರಿಯಿಂದ ಭಿನ್ನ ಮತ್ತು ವಿಶಿಷ್ಟವಾಗಿದೆ ಎಂಬುದನ್ನೂ ಪರೋಕ್ಷವಾಗಿ ಸೂಚಿಸುತ್ತದೆ.–ಸಂ**

**ದ**ಮನಕಾರಿ ಮನೋಭಾವನೆಯ ವಿರುದ್ದ ವೈಯಕ್ತಿಕ ಪ್ರತಿರೋಧದ ಬಗ್ಗೆ ಡಾ. ಲೋಹಿಯಾ ಅವರು ಏಕೆ ಅಷ್ಟು ಉತ್ಕಟವಾಗಿ ಮಾತನಾಡುತ್ತಿದ್ದರು? ಏಕೆಂದರೆ, ಆಧುನಿಕ ಜಗತ್ತಿನಲ್ಲಿ ಸಂಘಟನೆಗಳು/ಸಂಸ್ಥೆಗಳು ನಾಗರೀಕ ಬದುಕನ್ನು ಎಷ್ಟು ಆವರಿಸಿಕೊಂಡುಬಿಟ್ಟಿವೆ ಮತ್ತು ಶಕ್ತಿಯುತವಾಗಿವೆ ಎಂದರೆ ವ್ಯಕ್ತಿಯು ಸಂಪೂರ್ಣವಾಗಿ ಅವುಗಳ ಅಡಿಯಾಳಾಗಿ ತನ್ನ ವೈಯಕ್ತಿಕತೆಯನ್ನೇ ಕಳೆದು ಕೊಂಡುಬಿಟ್ಟಿದ್ದಾನೆ ಅಥವಾ ಅಂತ ಅಪಾಯದಲ್ಲಿದ್ದಾನೆ ಎಂದು ಅವರು ಅರ್ಥಮಾಡಿಕೊಂಡಿದ್ದರು. "ಪ್ರಸ್ತುತ ಇರುವುದು ಒಂದು ಸಮೂಹ ಕೇಂದ್ರಿತ ನಾಗರೀಕತೆ ಮತ್ತು ವ್ಯಕ್ತಿಯು ಆ ಸಮೂಹದ ಒಂದು ಸಂಖ್ಯೆ ಮಾತ್ರವೆಂದು ಅದು ಪರಿಗಣಿಸುತ್ತಿದೆ. ತಾನು ಆ ಸಮೂಹದ ಭಾಗವಾಗಿದ್ದಾಗ ಮಾತ್ರ ವ್ಯಕ್ತಿಗೆ ಪ್ರಾಮುಖ್ಯತೆ ಮತ್ತು ಅಸ್ತಿತ್ವ.. ಹಾಗಿಲ್ಲದಿದ್ದಾಗ "ವ್ಯಕ್ತಿ"ಯನ್ನು ಜಗತ್ತು ಕ್ಷುದ್ರ ಇಲಿಯ ಮಟ್ಟಕ್ಕೆ ಇಳಿಸುತ್ತದೆ. ಸಂಘಟನೆ ಮತ್ತು ಶಸ್ತ್ರಾಸ್ತ್ರಗಳ ಬೆಂಬಲವಿಲ್ಲದ ವ್ಯಕ್ತಿಯನ್ನು ಆಧುನಿಕ ನಾಗರೀಕತೆ ನಿಕೃಷ್ಟವಾಗಿ ಕಾಣುತ್ತಿದೆ" ಎಂದು ಅವರು ಗಮನಿಸಿದ್ದರು. ಹಿಟ್ಲರ್ ಜರ್ಮನಿಯಲ್ಲಿ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ನಡೆದಿದ್ದನ್ನು ಹೀಗೆ ಹೇಳುತ್ತಾರೆ. "ಆಗ ಸಮಾಜವಾದಿ ಮತ್ತು ಕಮ್ಯುನಿಸ್ಟ್ ಪಕ್ಷಗಳಿಗೆ ಸೇರಿದ ಕೆಚ್ಚೆದೆಯ ಧೀರರು ಮತ್ತು ಚಿಂತಕರೂ ಆದ ಯೂರೋಪಿಯನ್ನರು ಹೇಗೆ ತಮ್ಮೆಲ್ಲ ಪೌರುಷವನ್ನು ಕಳೆದುಕೊಂಡು ಇಲಿಗಳ ರೀತಿ –ಹೀಗೆ ಹೇಳಲು ವಿಷಾದಪಟ್ಟುಕೊಂಡೇ– ಹಿಟ್ಲರ್ ನ ದುಸ್ಸಾಹಸಗಳಿಂದ ತಪ್ಪಿಸಿಕೊಳ್ಳಲು ಚೆಲ್ಲಾಪಿಲ್ಲಿಯಾದರು ಎಂಬುದನ್ನು ಗಮನಿಸದಿರಲಾಗದು.' ಲೋಹಿಯಾರವರು ಗಾಂಧಿಯವರು ಸೂಚಿಸಿದ ನಾಗರೀಕ ಅಸಹಾಕಾರದಲ್ಲಿ ನಂಬಿಕೆಯಿಟ್ಟಿದ್ದರು. "ಅನ್ಯಾಯ ಮತ್ತು ದಬ್ಬಾಳಿಕೆ ಜನರ ಸಹನೆಯ ಮಟ್ಟವನ್ನು ಮೀರಿದಾಗಲೆಲ್ಲಾ ವ್ಯಕ್ತಿಗೆ ನಾಗರೀಕ ಅಸಹಾಕಾರ/ಸತ್ಯಾಗ್ರಹ ಎಂಬ ಅಸ್ತ್ರವು ತನ್ನ ಹತ್ತಿರ ಇರುತ್ತದೆ. ಅನ್ಯಾಯ, ಶೋಷಣೆ ಮತ್ತು ದಬ್ಬಾಳಿಕೆಗಳು ಚಾಲೂ ಇರುವವರೆಗೂ ಸತ್ಯಾಗ್ರಹ ಎಂಬ ಅಸ್ತ್ರವು ಬಳಕೆಯಲ್ಲಿರುತ್ತದೆ ಮತ್ತು ಇರಲೇಬೇಕು. ಇಲ್ಲದಿದ್ದರೆ 'ಗನ್ನು ಮತ್ತು ಗುಂಡುಗಳು' ಅದರ ಸ್ಥಾನವನ್ನು ಪಡೆಯುತ್ತದೆ"ಎಂದು ನಂಬಿದ್ದರು. ಸತ್ಯಾಗ್ರಹ ಎಂಬ ಅಸ್ತ್ರವನ್ನು ಸ್ವತಂತ್ರಗೊಂಡ ರಾಷ್ಟ್ರದಲ್ಲಿ ಬಳಸುವುದು ಸರಿಯಲ್ಲ, ಅದೇನಿದ್ದರೂ ಬ್ರಿಟಿಷರ ಆಡಳಿತದ ವಿರುದ್ಧ ಮಾತ್ರ ಸರಿಯೆನಿಸಿತ್ತು ಎಂಬ ದೇಶದ ಕೆಲವು ಚಿಂತಕರ ಅಭಿಪ್ರಾಯವನ್ನು ಲೋಹಿಯಾ ತಿರಸ್ಕರಿಸಿದ್ದರು. ಈ ಅಭಿಪ್ರಾಯವನ್ನು ಅವರದೇ ಆದ ವಿಶೇಷ ಶೈಲಿಯಲ್ಲಿ 'ಮಕ್ಕಳ ಗೊಣಗಾಟ'ವೆಂದು ವರ್ಣಿಸಿದ್ದರು. ಈ ಸಂಬಂಧ ಅವರು ಹೇಳಿದ್ದ ಕೆಲ ನುಡಿಗಳನ್ನು ಸ್ಮರಿಸಿಕೊಳ್ಳುವುದು ಯೋಗ್ಯವೆನಿಸುತ್ತದೆ. 'ಈ ಶತಮಾನ ಕಳೆಯುವುದರೊಳಗಾಗಿ ವ್ಯಕ್ತಿ ಮತ್ತು ಸಮೂಹವು, ಕ್ರೂರ ಮತ್ತು ನಿರಂಕುಶ ಪ್ರಭುತ್ವವನ್ನು ಮಣಿಸಲು, ನಾಗರೀಕ ಅಸಹಕಾರವೆಂಬ ದೊಡ್ಡ ಮತ್ತು ವಿಶಿಷ್ಟ ಅಸ್ತ್ರವನ್ನು ತನ್ನ ಕೈಯಲ್ಲಿ ಇರಿಸಿಕೊಂಡಿದೆ ಎಂಬ ಅರಿವಿನಲ್ಲಿ ಈ ಜಗತ್ತು ಸದಾ ಇರುವುದಾದಲ್ಲಿ ನಿಜಕ್ಕೂ ಅದು ಒಂದು ಹೊಸ ನಾಗರೀಕತೆಯನ್ನೇ ಬರಮಾಡಿಕೊಂಡಂತೆ".

ಕೊನೆಗೂ, ನಾವು ಸಾಮೂಹಿಕ ಆಯ್ಕೆಗಳನ್ನು ಹೇಗೆ ಮಾಡುತ್ತೇವೆ ಮತ್ತು ಆ ಆಯ್ಕೆಗಳು ಎಂತಹ ಆಶೋತ್ತರಗಳು ಮತ್ತು ಮೌಲ್ಯಗಳಿಂದ ನಿರ್ದೇಶಗೊಂಡಿದೆ ಎನ್ನುವುದರ ಮೇಲೆ ವ್ಯವಸ್ಥೆಯ ಅಂತಿಮ ರೂಪ ಅವಲಂಬಿಸಿರುತ್ತದೆ. ಅದರಲ್ಲಿ ಮೊಟ್ಟ ಮೊದಲ ಮತ್ತು ಅತಿ ಮುಖ್ಯವಾದ ಮೌಲ್ಯವಾಗಿರಬೇಕಾದದ್ದು ಮನುಷ್ಯನ ಸ್ವಾಭಾವಿಕ 'ಮಾನವ ಘನತೆಯ' ಮೇಲಿನ ಬಲವಾದ ನಂಬಿಕೆ ಮತ್ತು ಬದ್ಧತೆ. ಸಮಾಜೋ–ರಾಜಕೀಯ ಸುವ್ಯವಸ್ಥೆಗಳಿರಲಿ, ಸಂವಿಧಾನಗಳೂ ಕೂಡ ಒಂದು ನಿರಾಸಕ್ತ, ಜಡವಾದ ಮತ್ತು ಸ್ಪಂದನಾಶೀಲತೆಯಿಲ್ಲದ ಪರಿಸರದಲ್ಲಿ ಉಳಿಯುವುದಿಲ್ಲ. ಲೋಹಿಯಾರ ಜೀವನದಿಂದ ನಾವು ಕಲಿಯಬೇಕಾದ ದೊಡ್ಡ ಪಾಠವೆಂದರೆ – ವಸಾಹತು ಶಕ್ತಿಗಳ ವಿರುದ್ದದ ಅವರ ಅನೇಕ ದಶಕಗಳ ಹೋರಾಟದ ಹೊರತಾಗಿಯೂ ಸ್ವತಂತ್ರ ಭಾರತದ ಸಂದರ್ಭದಲ್ಲಿ ಅವರು ಹೆಚ್ಚಿನ ವರ್ಷಗಳನ್ನು ಸೆರೆಮನೆಗಳಲ್ಲಿ ಕಳೆದರು. ಇದು ನಮಗೆ ತಿಳಿಸುವುದಾದರೂ ಏನನ್ನು? ಸ್ವಾತಂತ್ರ್ಯ, ಮಾನವ ಘನತೆಯ ಸಮರ್ಥನೆ ಮತ್ತು ಆ ಘನತೆಯನ್ನು ನಿರಂತರವಾಗಿ ಸಂರಕ್ಷಿಸಿಕೊಳ್ಳಲು ಬೇಕಾದಂತಹ ಕನಿಷ್ಠ ಕಾರ್ಯಕ್ರಮಗಳ ತಯಾರಿಗಳು ಒಂದೇ ಏಟಿನಲ್ಲಿ ಸಾಧಿಸಿಕೊಳ್ಳಬಹುದಾದಂತಹ ಆಟವಲ್ಲ. ಅದು ನಿರಂತರ ಎಚ್ಚರ ಮತ್ತು ಹೋರಾಟಗಳ ಮೂಲಕ ದಕ್ಕಿಸಿಕೊಳ್ಳಬೇಕಾದಂತದ್ದು. ಅವು ರಾಜಕೀಯ, ಸಾಮಾಜಿಕ ಮತ್ತು ಮೌಲ್ಯಗಳ ಮಟ್ಟದಲ್ಲಿ ನಡೆಸಬೇಕಾದ ಹೋರಾಟಗಳು. ಶಹೀದ್ ಭಗತ್ ಸಿಂಗ್ ಹೇಳಿದ್ದನ್ನು ಉಲ್ಲೇಖಿಸುತ್ತ ಈ ಉಪನ್ಯಾಸವನ್ನು ಮುಗಿಸುತ್ತೇನೆ : "'ಒಂದು ಸ್ಥಾಪಿತ ನಂಬಿಕೆಯನ್ನು ಪ್ರಶ್ನಿಸಿದಾಗ, ವಿಮಾರ್ಶಾತೀತ ಮತ್ತು ದೋಷಾತೀತ ಎಂದು ತಿಳಿಯಲಾದ ಒಬ್ಬ ದೊಡ್ಡ ನಾಯಕನನ್ನು ಟೀಕೆ ಮಾಡಿದಾಗ ಬಹುಸಂಖ್ಯೆಯ ಜನರು ನಿಮ್ಮನ್ನು ತಲೆಹರಟೆ ಎಂದೋ ಒಣ ಹೆಮ್ಮೆಯವನೋ ಎಂದೋ ಜರೆಯಬಹುದು. ಇದು ಜನರ ಮಾನಸಿಕ ಸ್ಥಗಿತತೆಯನ್ನು ಸೂಚಿಸುತ್ತದೆ. ಒಬ್ಬ ಕ್ರಾಂತಿಕಾರಿಗೆ ಇರಬೇಕಾದ ಎರಡು ಮುಖ್ಯ ಗುಣಗಳು ಎಂದರೆ ವಿಮರ್ಶೆ ಮತ್ತು ಸ್ವತಂತ್ರ ಆಲೋಚನೆ. ಮಹಾತ್ಮಾಜಿಯವರು ಬಹಳ ದೊಡ್ಡ ಮನುಷ್ಯರಾಗಿದ್ದಾರೆ. ಬಹಳ ಎತ್ತರಕ್ಕೇರಿದ್ದಾರೆ. ಆದ್ದರಿಂದ ಅವರನ್ನು ಯಾರೂ ಟೀಕಿಸಬಾರದು. ಹಾಗಾಗಿ ಅವರು ಹೇಳಿದ್ದೆಲ್ಲಾ –ಅದು ರಾಜಕೀಯದ,ಇಲ್ಲಾ ಧರ್ಮದ, ಆರ್ಥಿಕತೆಯ ಅಥವಾ ನೈತಿಕತೆಯ ವಿಚಾರವಾಗಲಿ – ಸರಿ ಎಂದು ಒಪ್ಪಬೇಕು. ಆ ವಿಚಾರ ಮನದಟ್ಟಾಗಲಿ ಬಿಡಲಿ ಸರಿ ಎಂದು ಹೇಳಬೇಕು ಎಂಬ ಸ್ಥಿತಿಯು ನಿರ್ಮಾಣವಾಗುತ್ತಿದೆ. ಇಂತಹ ಮನಸ್ಥಿತಿಯು ಪ್ರಗತಿಯ ಕಡೆಗೆ ಕೊಂಡೊಯ್ಯುವುದಿಲ್ಲ. ಇದು ಸ್ಪಷ್ಟವಾಗಿ ಪ್ರತಿಗಾಮಿತನವಲ್ಲದೆ ಇನ್ನೇನು ಅಲ್ಲ.'

ಡಾ.ರಾಮ ಮನೋಹರ ಲೋಹಿಯಾರಂತ ಮಹಾ ವ್ಯಕ್ತಿಗಳ ಜೀವನ ಮತ್ತು ಚಿಂತನೆಗಳಿಂದ ನಾವು ಮತ್ತೆ ಮತ್ತೆ ಸರಿಯಾದ ಪಾಠವನ್ನು ಕಲಿಯುತ್ತೇವೆ ಎಂದು ಆಶಿಸುತ್ತಾ .... ಜೈ ಹಿಂದ್.


**(೨೦೧೧ರಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನಿವೃತ್ತರಾದ ನ್ಯಾ. ಬಿ. ಸುದರ್ಶನ ರೆಡ್ಡಿಯವರು ವಿದೇಶಿ ಬ್ಯಾಂಕುಗಳಲ್ಲಿನ ಕಪ್ಪು ಹಣದ ವಿಚಾರವಾಗಿ ವಿಶೇಷ ತನಿಖಾ ದಳದ ಸ್ಥಾಪನೆ ಮತ್ತು ಚತ್ತೀಸಗಢದ ನಕ್ಸಲೀಯರ ಕಾರ್ಯಾಚರಣೆಯ ವಿರುದ್ಧ 'ಸಲ್ವಾ ಜುಡಂ' ಎಂಬ ವಿಶೇಷ ಖಾಸಗಿ ಪೋಲೀಸ್ ಪಡೆಯ ಸ್ಥಾಪನೆಗೆ ತಡೆ ಮುಂತಾದ ಹಲವು ಜನಪರ ತೀರ್ಪುಗಳಿಗಾಗಿ ಹೆಸರಾದವರು)**



ಕಾರ್ಲ್ ಮಾರ್ಕ್ಸ್‌ನ ಜನ್ಮ ದ್ವಿಶತಮಾನೋತ್ಸವದ ವಿಶೇಷ ಲೇಖನ

# ನಮ್ಮ ಸಮಕಾಲೀನನೇ ಆದ ಕಾರ್ಲ್ ಮಾರ್ಕ್ಸ್

–ಡಾ. ರಾಜಾರಾಂ ತೋಳ್ಪಾಡಿ



**ಮಾನವ ಇತಿಹಾಸವನ್ನು ವರ್ಗ ಹೋರಾಟಗಳ ಇತಿಹಾಸವೆಂದು ನಿರೂಪಿಸುತ್ತಾ ಇತಿಹಾಸದ ಭೌತವಾದಿ ವ್ಯಾಖ್ಯಾನ ಮಾಡಿ ೨೦ನೇ ಶತಮಾನದ ಬಂಡವಾಳಶಾಹಿ ಯುಗದಲ್ಲಿ ಈ ವರ್ಗಹೋರಾಟವು ಕಾರ್ಮಿಕರ ಸರ್ವಾಧಿಕಾರವನ್ನು ಸ್ಥಾಪಿಸಿ ಕ್ರಮೇಣ ಅದು ಪ್ರಭುತ್ವದ ವಿಸರ್ಜನೆಯಲ್ಲಿ ಕೊನೆಗೊಳ್ಳುತ್ತದೆ ಎಂದು ವಿಶ್ಲೇಷಿಸಿದ್ದ ಕಾಲ್ ಮಾರ್ಕ್ಸ್‌ನ ಸಿದ್ಧಾಂತ ೨೦ನೇ ಶತಮಾನದಾದ್ಯಂತ ಜಗತ್ತಿನ ರಾಜಕೀಯ ಕ್ರಿಯಾಶೀಲತೆಯ ಉದ್ದಗಲಕ್ಕೂ ತನ್ನ ವಿವಿಧ ಆಟಗಳನ್ನು ಪ್ರದರ್ಶಿಸಿ ಈಗ ೨೧ನೇ ಶತಮಾನದ ಆರಂಭದ ಹೊತ್ತಿಗೆ ಹಿನ್ನೆಲೆಗೆ ಸರಿದು ಹೋಗಿದೆ. ಈ ತತ್ವಜ್ಞಾನಕ್ಕೆ ಈ ಗತಿ ಒದಗಲು ಕಾರಣಗಳೇನು ಎಂದು ಪರಿಶೀಲಿಸುವ ಒಂದು ಪ್ರಯತ್ನವಾದ ಈ ಲೇಖನ, ಈ ತತ್ವಜ್ಞಾನವು ವಿವಿಧ ರೂಪಗಳಲ್ಲಿ ರಾಜಕೀಯ ಸಿದ್ಧಾಂತಗಳಾಗಿ ಹರಳುಗಟ್ಟುವಲ್ಲಿ ಒಳಗಾದ ಅಪವ್ಯಾಖ್ಯಾನಗಳೇ ಕಾರಣವೆಂದು ವಿಷದಪಡಿಸುತ್ತಾ, ಮಾಕ್ಸ್‌ವಾದ ಕುರಿತ ಈವರೆಗಿನ ಸಂಶೋಧನೆಗಳ ಹಿನ್ನೆಲೆಯ ಅದರ ಸರಿಯಾದ ಗ್ರಹಿಕೆಯು 'ಇಂದಿನ ಸಾಮುದಾಯಿಕ ಮತ್ತು ಸೃಜನಶೀಲತೆಯ ನಿರಾಕರಣೆಯ ಯುಗದಲ್ಲಿ ಕೂಡ ಬದಲಾವಣೆಯ ಭರವಸೆಯ ಬೆಳಕಾಗಬಲ್ಲುದು ಎನ್ನುತ್ತದೆ. ಪತ್ರಿಕೆ ಓದುಗರ ಪ್ರತಿಕ್ರಿಯೆಗಳನ್ನು ನಿರೀಕ್ಷಿಸುತ್ತದೆ.**--ಸಂ.

**ನ**ಮ್ಮದು ಉತ್ತರಾಭಿಮುಖವಾಗಿ ನಡೆಯುವ ಕಾಲ. ಆಧುನೀಕೋತ್ತರ, ಸಂರಚನೋತ್ತರ, ವಸಾಹತ್ತೋತ್ತರ, ಬಂಡವಾಳೋತ್ತರವಾದ ಹೀಗೆ ಕಾಲಗಳನ್ನು ಹಾಗೂ ಅವು ಉತ್ಪಾದಿಸಿದ ವಾದಗಳನ್ನು ನಾವು ದಾಟಿಕೊಂಡು ಬಂದಿದ್ದೇವೆ. ಜೊತೆಯಲ್ಲಿಯೇ, ಕೆಲವು ವಿದ್ಯಮಾನಗಳಿಗೆ ನಾವು ಅಂತ್ಯವನ್ನು ಘೋಷಿಸಿದ್ದೇವೆ. ಇತಿಹಾಸದ ಅಂತ್ಯ, ಸಿದ್ಧಾಂತದ ಅಂತ್ಯ ಇತ್ಯಾದಿ. ನಮ್ಮ ಈ ಉತ್ತರೋತ್ತರ ಅಭಿವೃದ್ಧಿ ನಡಿಗೆಯಲ್ಲಿ ನಮಗೆ ಬೇಕಾದದ್ದನ್ನು ಮಾತ್ರ ಆಯ್ದುಕೊಂಡು ಬೇಡವಾದುದ್ದನ್ನು ಆಚೆಗೆ ಎಸೆಯುವ ವಿವೇಚನೆಯನ್ನೂ ಮೈಗೂಡಿಸಿಕೊಂಡಿದ್ದೇವೆ ಎಂದು ತಿಳಿಯುವವರು ನಾವು. ಅಷ್ಟು ಮಾತ್ರವಲ್ಲದೇ, ಮೈಗೂಡಿಸಿಕೊಂಡ ಈ ವಿವೇಚನೆಯ ನೆಲೆಗಳನ್ನು ನಾವು ಪ್ರಶ್ನಿಸಿ ಅದರ ವೈಚಾರಿಕತೆಯನ್ನು ಸಮಸ್ಯೆಗೆ ಒಳಪಡಿಸಿದ್ದೇವೆ. ಲಿಬರಲ್‌ವಾದದ ಪರಿಷ್ಕೃತ ರೂಪ ಒಂದನ್ನು ಬಿಟ್ಟು ಉಳಿದ್ದೆಲ್ಲಾ ವಾದಗಳನ್ನು ನಿರಾಕರಿಸುತ್ತಿರುವ ನಮ್ಮ ಈ ಕಾಲದಲ್ಲಿ ೧೯ನೆಯ ಶತಮಾನದ ಕಾಲಘಟ್ಟದಲ್ಲಿ ಉತ್ಕರ್ಷ ಹೊಂದುತ್ತಿದ್ದ ಬಂಡವಾಳಶಾಹೀ ಎನ್ನುವ ಆರ್ಥಿಕ ಮತ್ತು ಸೈದ್ಧಾಂತಿಕ ವಿದ್ಯಮಾನವನ್ನು ಇತಿಹಾಸದ ಭೌತವಾದೀ ತಾತ್ವಿಕ ನೆಲೆಯಿಂದ ತದೇಕ ಚಿತ್ತದಲ್ಲಿ ದಿಟ್ಟಿಸಿ ನೋಡಿ ಅದರ ಆಧಾರದಲ್ಲಿ ಕಾರ್ಮಿಕರ ಸಮಾಜವಾದೀ ಕ್ರಾಂತಿಯ ಕನಸು ಕಟ್ಟಿದ ಕಾರ್ಲ್ ಮಾರ್ಕ್ಸ್‌ನನ್ನು ಯಾಕೆ ನೆನಪಿಸಿಕೊಳ್ಳಬೇಕು? ಅಥವಾ ಹಿಂತಿರುಗಿ ನೋಡದೆ ರಭಸದಿಂದ ಮುನ್ನಡೆಯುವ ನಮಗೆ ಕಾಲದ ಗೋರಿಯಲ್ಲಿ ಹುಗಿದು ಹೋಗಿರುವ ಮಾರ್ಕ್ಸ್‌ನಂತಹ ಚಿಂತಕರು ಏಕೆ ಬೇಕು? ಮಾರ್ಕ್ಸ್‌ವಾದವೂ ಸೇರಿದಂತೆ ಎಲ್ಲಾ ಸಮಾಜವಾದಿ ಸಿದ್ಧಾಂತಗಳ ನಿರಾಕರಣೆಯ ಈ ಕಾಲಘಟ್ಟದಲ್ಲಿ ಮಾರ್ಕ್ಸ್‌ನ ಇಂದಿನ ಅರ್ಥವೇನು? ಅಥವಾ ಈ ಅರ್ಥದ ಇಂದಿನ ಮಹತ್ವವೇನು? ಈ ಎಲ್ಲಾ ಪ್ರಶ್ನೆಗಳ ಹಿನ್ನಲೆಯಲ್ಲಿ ಮಾರ್ಕ್ಸ್‌ನ ಕುರಿತು ಹಾಗೂ ಅವನು ಮುಂದಿಟ್ಟ ತತ್ವಜ್ಞಾನದ ಕೆಲವು ಅಂಶಗಳ ಕುರಿತು ಮರುಚಿಂತಿಸುವುದು ಪ್ರಸ್ತುತ ಲೇಖನದ ಉದ್ದೇಶ.

ಸಮಗ್ರವಾದ ಮತ್ತು ಸಂಕೀರ್ಣವಾದ ಮಾರ್ಕ್ಸ್‌ನ ತತ್ವಜ್ಞಾನದ ವಿಶ್ವದಲ್ಲಿ ಮೂರು ಅವಿಚ್ಛಿನ್ನವಾದ ಚಿಂತನ ಮಂಥನಗಳ ಸಮುಚ್ಛಯಗಳನ್ನು ನಾವು ಕಾಣಬಹುದು. ಅವುಗಳನ್ನು ಈ ಕೆಳಗಿನಂತೆ ಸೂಲ್ಥವಾಗಿ ಮುಂದಿಡಬಹುದು. ಒಂದು, ಭೌತವಾದೀ ನೆಲೆಯಿಂದ ಮಂಡಿಸಲಾದ ಇತಿಹಾಸದ ಚಲನೆಯ ಮತ್ತು ಪರಿವರ್ತನೆಯ ತತ್ವ. ಎರಡು, ಅದೇ ಭೌತವಾದೀ ನೆಲೆಯಿಂದ ನಿರೂಪಿಸಲ್ಪಟ್ಟ ಬಂಡವಾಳಶಾಹಿಯ ಉಗಮ, ಉತ್ಕರ್ಷ ಹಾಗೂ ಪತನಗಳ ವಿಶ್ಲೇಷಣೆ ಮೂರು, ಪರಿವರ್ತನೆಯ ರೂಪುರೇಷೆಗಳನ್ನು ನಿರೂಪಿಸುವ ಸಮಾಜವಾದೀ ಕಾಂತ್ರಿಯ ತತ್ವ. ಇವುಗಳನ್ನು ಅನುಕ್ರಮವಾಗಿ ಭೂತ, ವರ್ತಮಾನ ಹಾಗೂ ಭವಿಷ್ಯಗಳ ಕುರಿತು ಮಾರ್ಕ್ಸ್‌ನ ತತ್ವಜ್ಞಾನದ ಪ್ರಮುಖ ಆಯಾಮಗಳೆಂದು ಗುರುತಿಸಬಹುದು. ಇವುಗಳು ಇಂದಿನ ನಮ್ಮ ಇತಿಹಾಸೋತ್ತರ, ಸಿದ್ಧಾಂತ್ತೋತ್ತರ ಹಾಗೂ ಬಂಡವಾಳೋತ್ತರ ವರ್ತಮಾನದಲ್ಲಿ ತೀವ್ರವಾದ ಟೀಕೆಗಳಿಗೆ ಒಳಗಾಗಿವೆ ಮಾತ್ರವಲ್ಲ ಅವುಗಳನ್ನು ಸಂಪೂರ್ಣವಾಗಿ ನಿಷ್ಪ್ರಯೋಜಕವೆಂದು ಬದಿಗೆ ಸರಿಸಲಾಗಿದೆ. ಕಾರ್ಪೊರೇಟ್ ಸಾಮ್ರಾಜ್ಯದ ನವ ಲಿಬರಲ್‌ವಾದದ ಭೂಮಂಡಲೀಕರಣದ ಪ್ರತಿಪಾದನೆಯಲ್ಲಿ ಹೀಗೆ ಮೂಲೆ ಪಾಲಾದ ಮೂಲಜಿಜ್ಞಾಸಿಕ ಚಿಂತನಾ ಕ್ರಮಗಳಲ್ಲಿ ಅತ್ಯಂತ ಪ್ರಮುಖವಾದ ಮಾರ್ಕ್ಸ್‌ವಾದದ ಚಿಂತನೆಯಲ್ಲಿ ಮುಖ್ಯವೆಂದು ಪರಿಭಾವಿಸಬಹುದಾದ ಈ ಮೂರು ಎಳೆಗಳ ಕೆಲವು ಮಹತ್ವದ ಅಂಶಗಳನ್ನಷ್ಟೇ ಇಲ್ಲಿ ಮುಂದಿಡ ಬಯಸುತ್ತೇನೆ.

ಕಾರ್ಲ್ ಮಾರ್ಕ್ಸ್ ಇತಿಹಾಸದ ಕುರಿತು ಚಿಂತನೆ ನಡೆಸಿದ ಅತೀ ಮುಖ್ಯ ತತ್ವಜ್ಞಾನಿಗಳಲ್ಲಿ ಒಬ್ಬರು. ಅವರು ಜರ್ಮನಿಯ ತತ್ವಶಾಸ್ತ್ರಜ್ಞರಾದ ಇಮೇನ್ಯುಲ್ ಕಾಂಟ್ ಹಾಗೂ ವಿಲಿಯಂ ಫೆಡರಿಕ್ ಹೆಗಲ್‌ರವರಿಂದ ಇತಿಹಾಸದ ಪ್ರಾಥಮಿಕ ಪಾಠವನ್ನು ಕಲಿತವರು. ಆದರೆ ಮೂಲತಃ ಆದರ್ಶವಾದೀ ಇತಿಹಾಸ ತತ್ವಶಾಸ್ತ್ರಜ್ಞರಾದ ಕಾಂಟ್ ಮತ್ತು ಹೆಗೆಲ್‌ರ ಇತಿಹಾಸ ದರ್ಶನವನ್ನು ಮಾರ್ಕ್ಸ್ ಅಮೂಲಾಗ್ರವಾಗಿ ಬದಲಿಸಿ ಅದನ್ನು ಭೌತಿಕ ಬದುಕಿನ ತಳಹದಿಯಲ್ಲಿ ಮರುನಿರೂಪಿಸಿದರು. ಮಾರ್ಕ್ಸ್‌ನ ಸಮಗ್ರವಾದ ಮತ್ತು ಸಂಘಟಿತವಾದ ಚರಿತ್ರಾ ತತ್ವವನ್ನು ಇತಿಹಾಸದ ಅರ್ಥ ನಿರೂಪಣೆಯ ಭೌತವಾದೀ ಸಿದ್ಧಾಂತವೆಂದು ಕರೆಯಲಾಗಿದೆ. ಮಾರ್ಕ್ಸ್ ತಮ್ಮ ಈ ಇತಿಹಾಸದ ಭೌತವಾದೀ ನಿರೂಪಣೆಯ ಮೂಲಕ ಮಾನವ ಜನಾಂಗದ ಚರಿತ್ರೆಯ ವಿವಿಧ ಘಟ್ಟಗಳನ್ನು ಗುರುತಿಸುವ ಹಾಗೂ ಈ ಘಟ್ಟಗಳು ಪಲ್ಲಟಗೊಳ್ಳುವ ಕ್ರಮಗಳನ್ನು ನಿರೂಪಿಸುವ ಪ್ರಯತ್ನವನ್ನು ಮಾಡುತ್ತಾರೆ. ಮಾರ್ಕ್ಸ್‌ನಲ್ಲಿ ಮತ್ತು ಮಾರ್ಕ್ಸ್‌ವಾದದಲ್ಲಿ ಆಳವಾಗಿ ನೆಲೆಯೂರಿರುವ ಚರಿತ್ರೆಯ ಕುರಿತಾದ ಈ ಸಂವೇದನೆಯನ್ನು ಮಾರ್ಕ್ಸ್‌ವಾದದ ಪ್ರಮುಖ ಟೀಕಾಕಾರ ಕಾರ್ಲ್ ಪೋಪರ್ ಚರಿತ್ರಾವಾದ(ಹಿಸ್ಟೋರಿಸಿಸಂ) ಎಂದು ಹಂಗಿಸಿದರು. ಅದೇನೇ ಇರಲಿ, ಮಾರ್ಕ್ಸ್‌ನಲ್ಲಿ ಮತ್ತು ಮಾರ್ಕ್ಸ್‌ವಾದದಲ್ಲಿ ಚಾರಿತ್ರಿಕ ದೃಷ್ಟಿ ಒಂದು ಮಹತ್ವದ ಸ್ಥಾನವನ್ನು ಪಡೆದುಕೊಳ್ಳುತ್ತದೆ.

ಚರಿತ್ರೆಯ ಕುರಿತಾದ ದಟ್ಟವಾದ ಈ ದೃಷ್ಟಿಕೋನದ ಹೊರತಾಗಿಯೂ ಮಾರ್ಕ್ಸ್‌ನಲ್ಲಿ ಚರಿತ್ರೆಯನ್ನು ದಾಟುವ ಮತ್ತು ಚರಿತ್ರೆಯಿಂದ ಮುಕ್ತಗೊಳ್ಳುವ ಒಂದು ಉತ್ಕಟವಾದ ಸ್ವಾತಂತ್ರ್ಯದ ಕಲ್ಪನೆಯೂ ಕಾಣಿಸುತ್ತದೆ. ತನ್ನ ವಿಶ್ಲೇಷಣೆಯ ಪ್ರತಿಹಂತದಲ್ಲಿಯೂ ಚಾರಿತ್ರಿಕ ನಿರ್ದಿಷ್ಟತೆಯ ಮಾತುಗಳನ್ನಾಡುವ ಹಾಗೂ ಚಾರಿತ್ರಿಕ ನೆಲೆಯ ಚಿಕಿತ್ಸಕ ನೋಟವನ್ನು ಪ್ರತಿಪಾದಿಸುವ ಮಾರ್ಕ್ಸ್ ತನ್ನ ಆದರ್ಶದ ಭವಿಷ್ಯದ ಕನಸಿನಲ್ಲಿ ಈ ಚರಿತ್ರೆಯಿಂದ ಮಾನವ ಜನಾಂಗ ಮುಕ್ತಿಯನ್ನು ಪಡೆಯುವ ಮಾತುಗಳನ್ನಾಡುತ್ತಾರೆ. ಮಾರ್ಕ್ಸ್‌ನ ಪ್ರಕಾರ ಮಾನವ ಜನಾಂಗ ಅಂತಿಮವಾಗಿ ತಲುಪುವ ಸ್ಥಿತಿ ವರ್ಗಮುಕ್ತ ಮತ್ತು ರಾಜ್ಯಮುಕ್ತ ಸಾಮುದಾಯಿಕತೆ. ಅವನ ಪ್ರಕಾರ ಸಂಘರ್ಷವೇ ಚರಿತ್ರೆಯ ಚಲನೆಯ ತತ್ವ. ಎಲ್ಲಿಯ ತನಕ ಸಂಘರ್ಷವಿರುತ್ತದೆಯೋ ಅಲ್ಲಿಯ ತನಕ ಚರಿತ್ರೆ ಇರುತ್ತದೆ. ಯಾವಾಗ ಸಮಾಜ ವರ್ಗಮುಕ್ತ ಹಾಗೂ ರಾಜ್ಯ ಮುಕ್ತವಾಗುತ್ತದೋ ಅವಾಗ ಸಂಘರ್ಷ ಕೊನೆಗೊಂಡು ಮಾನವ ಜನಾಂಗ ಚರಿತ್ರಾತೀತವಾದ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯುತ್ತದೆ.

ಮಾರ್ಕ್ಸ್‌ನಲ್ಲಿ ನಿಖರವಾಗಿ ಮೂಡಿಬರುವ ಚರಿತ್ರೆಯ ಕುರಿತಾದ ಈ ದಾರ್ಶನಿಕ ದೃಷ್ಟಿ ಮಾರ್ಕ್ಸ್‌ವಾದದ ಪ್ರಭುತ್ವದ ನೆಲೆಯ ಸಂಕಥನಗಳಲ್ಲಿ ತನ್ನ ಸಂಕೀರ್ಣತೆಯನ್ನು ಕಳೆದುಕೊಂಡು ವಿಧಿ ನಿಯಮದ ರೀತಿಯಲ್ಲಿ ಮರು ವ್ಯಾಖ್ಯಾನಗೊಂಡಿದೆ. ೨೦ನೆಯ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದ ಸಂಘಟಿತ ಕಮ್ಯೂನಿಷ್ಟ್ ವ್ಯವಸ್ಥೆಗಳು ಮಾರ್ಕ್ಸ್‌ನ ಈ ಇತಿಹಾಸದ ತತ್ವಜ್ಞಾನೀಯ ದೃಷ್ಟಿಯನ್ನು ಚರಿತ್ರೆಯ ಚಲನೆ ಹಾಗೂ ಗತಿಶೀಲತೆಯ ಉಲ್ಲಂಘಿಸಲಾಗದ ನಿಯಮವನ್ನಾಗಿ ವಿರೂಪಗೊಳಿಸಿವೆ.

ಮಾರ್ಕ್ಸ್‌ನ ಇತಿಹಾಸದ ಈ ತತ್ವಜ್ಞಾನೀಯ ದೃಷ್ಟಿಯನ್ನು ನಾವು ಮರುಪರೀಶೀಲಿಸುವಾಗ ಕನಿಷ್ಠ ಮೂರು ಅಂಶಗಳನ್ನು ವಿಶೇಷವಾಗಿ ಗಮನಿಸಬೇಕಾಗುತ್ತದೆ. ಅದರಲ್ಲಿ ಮೊದಲನೆಯದು, ಸಂಘಟಿತ ಕಮ್ಯುನಿಷ್ಟ್ ಸಿದ್ಧಾಂತದ ಮೂಲಕ ಮಾರ್ಕ್ಸ್‌ನ ಇತಿಹಾಸದ ಜಿಜ್ಞಾಸೆಯಲ್ಲಿ ಸಂಭವಿಸಿದ ವಿರೂಪಗಳು ಮತ್ತು ಸರಳೀಕರಣಗಳು ಯಾವುವು ಎನ್ನುವುದನ್ನು ನಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗುತ್ತದೆ. ಎರಡನೇಯದು, ೨೦ನೆಯ ಶತಮಾನದಲ್ಲಿ ಸಂಭವಿಸಿದ ಮಾರ್ಕ್ಸ್‌ವಾದಿ ಚಿಂತನೆಯ ಪುನರುಜ್ಜೀವನದ ಕಾಲವಧಿಯಲ್ಲಿ ಅಂಟೋನಿಯೋ ಗ್ರಾಂಶಿ ಮೊದಲಾದ ಚಿಂತಕರು ಮಾರ್ಕ್ಸ್‌ನ ಚಾರಿತ್ರಿಕ ದೃಷ್ಟಿಯನ್ನು ಒಳಗೊಂಡಂತೆ ಮಾರ್ಕ್ಸ್‌ವಾದದ ಕುರಿತಾಗಿ ನಡೆಸಿದ ನಿಷ್ಕರ್ಷೆಯಲ್ಲಿ ಮೂಡಿ ಬಂದ ಪ್ರತಿಫಲನಗಳ ಹಿನ್ನಲೆಯಲ್ಲಿ ಮಾರ್ಕ್ಸ್‌ನ ಚಾರಿತ್ರಿಕ ದೃಷ್ಟಿಯ ಹೊಸ ನೋಟಗಳನ್ನು ನಾವು ಗಮನಿಸಬೇಕಾಗುತ್ತದೆ. ಮೂರನೇಯದಾಗಿ, ಮಾರ್ಕ್ಸ್‌ನ ಚಾರಿತ್ರಿಕ ದೃಷ್ಟಿಯನ್ನು ಮಾರ್ಕ್ಸ್‌ವಾದಕ್ಕಿಂತ ಭಿನ್ನವಾದ ತಾತ್ವಿಕ ನೆಲೆಗಳಿಂದ ಬಂದ ವಿಮರ್ಶೆಯ ಬೆಳಕಿನಲ್ಲಿ ಹೆಚ್ಚು ಸೂಕ್ಷ್ಮವಾಗಿ ಗ್ರಹಿಸಬೇಕಾಗಿದೆ.

ಮೇಲೆ ಸೂಚಿಸಿದ ಅಂಶಗಳ ಹಿನ್ನಲೆಯಲ್ಲಿ ಮಾರ್ಕ್ಸ್‌ನ ಚಾರಿತ್ರಿಕ ದೃಷ್ಟಿಯಲ್ಲಿ ನಿಹಿತವಾಗಿರುವ ನಮ್ಮ ಕಾಲದ ಚರಿತ್ರಾತೀತತೆಯ ವಾಸ್ತವವನ್ನು ಅರ್ಥ ಮಾಡಿಕೊಳ್ಳುವ ನೆಲೆಯಲ್ಲಿ ಮುಖ್ಯವಾಗಬಹುದಾದ ಒಂದು ಅಂಶವನ್ನು ಇಲ್ಲಿ ಮುಂದಿಡಬಯಸುತ್ತೇನೆ. ಮಾರ್ಕ್ಸ್‌ನ ಭೌತವಾದೀ ಚಾರಿತ್ರಿಕ ದೃಷ್ಟಿಯಲ್ಲಿ ಚರಿತ್ರಾಪೂರ್ವದ ಒಂದು ಸಾಮುದಾಯಿಕ ಬದುಕಿನ ಚಿತ್ರಣವಿದೆ. ಇದನ್ನು ಮಾರ್ಕ್ಸ್ ಪ್ರಿಮಿಟಿವ್ ಕಮ್ಯುನಿಸಂ ಎಂದು ಕರೆಯುತ್ತಾನೆ. ಅಂತೆಯೇ, ಮಾರ್ಕ್ಸ್‌ನಲ್ಲಿ ಚರಿತ್ರೆಯ ಸಂಘರ್ಷದ ವಿವಿಧ ಘಟ್ಟಗಳನ್ನು ದಾಟಿದ ಚರಿತ್ರಾತೀತವಾದ ಸಾಮುದಾಯಿಕತೆಯ ಕಲ್ಪನೆಯೂ ಇದೆ. ಮಾರ್ಕ್ಸ್‌ನ ಪ್ರಕಾರ ಈ ಚರಿತ್ರಾತೀತವಾದ ಸಾಮುದಾಯಿಕ ಸ್ಥಿತಿ ನಾಗರಿಕ ಪೂರ್ವಕಾಲದ ಸಾಮೂದಾಯಿಕ ಸ್ಥಿತಿಗಿಂತ ಹೆಚ್ಚು ಮೌಲಿಕವಾಗಿ ಶ್ರೇಷ್ಠವಾದದ್ದು. ಏಕೆಂದರೆ ಚರಿತ್ರೆಯ ಸಂಘರ್ಷಗಳನ್ನು ದಾಟಿ ಮೂಡಿಬರುವ ಸಾಮೂದಾಯಿಕ ಸ್ಥಿತಿ ಚರಿತ್ರೆಯ ಇತಿಮಿತಿಗಳನ್ನು ಪ್ರಜ್ಞಾಪೂರ್ವಕವಾಗಿ ದಾಟಿ ಬರುವ ಮೌಲಿಕ ಸ್ಥಿತಿ. ಇಲ್ಲಿ ಜನರು ತಮಗೆ ಸಾಧ್ಯವಾದಷ್ಟನ್ನು ಉತ್ಪಾದಿಸುವ ಮತ್ತು ಅಗತ್ಯವಿದ್ದಷ್ಟನ್ನು ಮಾತ್ರ ಬಳಸುವ ಸ್ವಯಂಪೂರ್ಣ ಸ್ವಾತಂತ್ರ್ಯವನ್ನು ಅನುಭವಿಸುತ್ತಾರೆ. ಬಹುಶಃ ಇತಿಹಾಸದ ಅಂತ್ಯವನ್ನು ಏಕಪಕ್ಷೀಯವಾಗಿ ಘೋಷಿಸಿಕೊಂಡ ನಮಗೆ ಮಾರ್ಕ್ಸ್‌ನ ಸ್ವಪ್ರಜ್ಞಾಪೂರ್ವಕವಾಗಿ ಚರಿತ್ರೆಯನ್ನು ದಾಟುವ ಮತ್ತು ಮಾನವ ಜನಾಂಗ ಪೂರ್ಣ ರೂಪದ ಸ್ವಾತಂತ್ರ್ಯವನ್ನು ಪಡೆಯುವ ಕಲ್ಪನೆ ಹೆಚ್ಚು ಮೌಲಿಕವಾಗಬಹುದು.

ಬಂಡವಾಳಶಾಹಿಯ ಕುರಿತು ಮಾರ್ಕ್ಸ್ ಒದಗಿಸಿದ ಸಮಗ್ರವಾದ ಹಾಗೂ ಸಂಕೀರ್ಣವಾದ ವಿಶ್ಲೇಷಣೆ ಆತನ ರಾಜಕೀಯ ತತ್ವಜ್ಞಾನದ ಇನ್ನೊಂದು ಬಹುಮುಖ್ಯವಾದ ಅಂಶ. ಮಾರ್ಕ್ಸ್‌ನಿಗೆ ಬಂಡವಾಳಶಾಹಿ ಎನ್ನುವುದು ಒಂದು ಶೋಷಣೆಯ ವಿದ್ಯಮಾನವಾಗಿ ಕಾಣುವ ಜೊತೆಜೊತೆಗೇ ಅದು ಕೆಲಸಗಾರನನ್ನು ತನ್ನ ಕೆಲಸದಿಂದ ಪ್ರತ್ಯೇಕಗೊಳಿಸಿ ಅವನನ್ನು ಪರಕೀಯನನ್ನಾಗಿಸುವ ಒಂದು ಅಮಾನವೀಯ ವಿದ್ಯಮಾನವೂ ಹೌದು. ಮಾರ್ಕ್ಸ್‌ನ ಬಂಡಾವಾಳಶಾಹಿ ವಿಶ್ಲೇಷಣೆಯನ್ನು ಇಪ್ಪತ್ತನೇಯ ಶತಮಾನದ ಕಾಲಘಟ್ಟದಲ್ಲಿ ಮರುಚಿಂತನೆಗೆ ಒಳಪಡಿಸಿದ ಮಾನವಿಕ ನೆಲೆಯ ಮಾರ್ಕ್ಸ್‌ವಾದಿಗಳು ಬಂಡವಾಳಶಾಹಿಯಲ್ಲಿ ಮಾರ್ಕ್ಸ್ ಗುರುತಿಸುವ ಪರಕೀಯತೆಯ ವಿದ್ಯಮಾನಕ್ಕೆ ಹೆಚ್ಚು ಮಹತ್ವವನ್ನು ಕೊಡುತ್ತಾರೆ. ಅವರ ಪ್ರಕಾರ ಆಳವಾದ ಮಾನವಿಕ ಕಾಳಜಿಗಳುಳ್ಳ ಮಾರ್ಕ್ಸ್‌ನಿಗೆ ಬಂಡವಾಳಾಶಾಹಿಯಲ್ಲಿ ಮೊದಲಿಗೆ ಕಾಣಿಸುವುದೇ ಪರಕೀಯ ಪ್ರಜ್ಞೆ. ಮಾನವಿಕ ಮಾರ್ಕ್ಸ್‌ವಾದಿಗಳು ಪ್ರತಿಪಾದಿಸುವಂತೆ ಮಾರ್ಕ್ಸ್‌ನ ಪ್ರಕಾರ ಕೆಲಸದಿಂದ ಕೆಲಸಗಾರನನ್ನು ಬೇರ್ಪಡಿಸುವುದೆಂದರೆ ಮಾನವನನ್ನು ಅವನ ಸೃಜನಶೀಲತೆಯಿಂದ ಬೇರ್ಪಡಿಸುವುದೆ ಆಗಿದೆ.

ಮಾರ್ಕ್ಸ್‌ನ ಬಂಡವಾಳಶಾಹಿಯ ವಿಶ್ಲೇಷಣೆಯಲ್ಲಿ ಪ್ರತಿಪಾದಿತವಾಗಿರುವ ಈ ಪರಕೀಯ ಪ್ರಜ್ಞೆಯ ವ್ಯಾಖ್ಯಾನ ಬಂಡವಾಳೋತ್ತರ ಕಾಲಘಟ್ಟದಲ್ಲಿ ನಾವು ವಿಭಿನ್ನ ನೆಲೆಗಳಲ್ಲಿ ಅನುಭವಿಸುತ್ತಿರುವ ಪರಕೀಯತೆಯ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಸಹಾಯಕವಾಗುತ್ತದೆ. ಬಂಡವಾಳೋತ್ತರತೆ ತನ್ನ ವಿಶಿಷ್ಟ ಬಗೆಯ ಅನುಭೋಗ ಸಂಸ್ಕೃತಿಯಿಂದ ಮಾನವನನ್ನು ಅವನ ಸಾಮುದಾಯಿಕತೆಯಿಂದ ಪ್ರತ್ಯೇಕಗೊಳಿಸುವ ಒಂದು ವಿಶಿಷ್ಟ ವಿದ್ಯಮಾನವಾಗಿದೆ. ಹೀಗೆ ಪ್ರತ್ಯೇಕಗೊಂಡ ವ್ಯಕ್ತಿಗಳು ಸಮುದಾಯಗಳಿಂದ ವಿಚ್ಛೇದಿತರಾಗಿ, ಏಕಾಕಿಗಳಾಗಿ ಅನೇಕ ಬಗೆಯ ವಿವರಿಸಲಾಗದ ಪರಕೀಯತೆಯ ಬವಣೆಗಳನ್ನು ಅನುಭವಿಸುತ್ತಾರೆ. ಹೀಗೆ, ಬಂಡವಾಳ, ತನ್ನ ಬಂಡವಾಳೋತ್ತರತೆಯ ಕಾಲಘಟ್ಟದಲ್ಲಿ ಉತ್ಪಾದಿಸುವ ವಿಭಿನ್ನ ರೀತಿಯ ಪರಕೀಯ ಪ್ರಜ್ಞೆಯನ್ನು ಅರ್ಥ ಮಾಡಿಕೊಳ್ಳುವಲ್ಲಿ ಮಾರ್ಕ್ಸ್ ನಮ್ಮ ಸಹಾಯಕ್ಕೆ ಬರುತ್ತಾನೆ.

ಕೊನೆಯದಾಗಿ, ಮಾರ್ಕ್ಸ್‌ನ ಬಂಡವಾಳಶಾಹಿಯ ವಿಶ್ಲೇಷಣೆಯ ಮೂಲಕವೇ ಜನ್ಮ ತಳೆಯುವ ಆತನ ಕಾಂತ್ರಿಯ ತತ್ವವೂ ತನ್ನ ಚಲನಶೀಲತೆಯಿಂದ ಹಾಗೂ ಚೈತನ್ಯಶೀಲತೆಯಿಂದ ಇಂದಿನ ನಮ್ಮ ಕಾಲದ ನಿರಾಸೆಯ ವಾತವಾರಣದಲ್ಲಿ ಪ್ರೇರಕ ಶಕ್ತಿಯಾಗಬಲ್ಲುದು. ತನ್ನ ಕ್ರಾಂತಿಯ ಪ್ರತಿಪಾದನೆಯಲ್ಲಿ ಮಾರ್ಕ್ಸ್ ಮೂಲೋತ್ಕಟನ ಮತ್ತು ಕ್ರಾಂತಿಯ ನಡುವೆ ಒಂದು ಪ್ರಮುಖವಾದ ವಿಶ್ಲೇಷಣಾತ್ಮಕ ವ್ಯತ್ಯಾಸವನ್ನು ಮಾಡುತ್ತಾನೆ. ಆತನ ಪ್ರಕಾರ ಮೂಲೋತ್ಕಟನ ಇತಿಹಾಸದ ಚಲನಶೀಲತೆಯಲ್ಲಿ ನಿಹಿತವಾದ ಸಂಘರ್ಷದ ಮೂಲಕ ಸಂಭವಿಸುವ ಅನಿವಾರ್ಯ ಸ್ಥಿತಿ. ಆತನ ಪ್ರಕಾರ, ವಿವಿಧ ಬಗೆಯ ವರ್ಗ ಸಂಘರ್ಷಗಳಿಂದ ಇತಿಹಾಸದ ವಿವಿಧ ಘಟ್ಟಗಳಲ್ಲಿ ಮೂಲೋತ್ಕಟನ ಸಂಭವಿಸುತ್ತದೆ ಮತ್ತು ಇದನ್ನು ಯಾರೂ ತಡೆಯಲಾರರು. ಆದರೆ ಕ್ರಾಂತಿ ಎನ್ನುವುದು ಮಾನವನ ಸಾಮುದಾಯಿಕ ಸ್ವಪ್ರಜ್ಞೆಯಿಂದ ಸಂಭವಿಸುವ ವಿದ್ಯಮಾನ. ಆತ ಪ್ರತಿಪಾದಿಸಿದ ಸಮಾಜವಾದಿ ಕ್ರಾಂತಿ ಕಾರ್ಮಿಕರು ತಮ್ಮ ಸಾಮುದಾಯಿಕ ವರ್ಗ ಪ್ರಜ್ಞೆಯಲ್ಲಿ ನಡೆಸುವ ಮೌಲಿಕ ಸೀಮೋಲ್ಲಂಘನ. ಆದ್ದರಿಂದ, ಅದು ಮಾನವನ ಸಾಮುದಾಯಿಕತೆಯ ಮತ್ತು ಸೃಜನಶೀಲತೆಯ ಅಭಿವ್ಯಕ್ತಿ. ಕ್ರಾಂತಿಯನ್ನು ಅಥವಾ ಬದಲಾವಣೆಯನ್ನು ಮಾನವನ ಪ್ರಜ್ಞಾಪೂರ್ವಕ ಪ್ರಯತ್ನದ ಪರಿಣಾಮವೆಂದು ವಾದಿಸುವ ಮಾರ್ಕ್ಸ್ ಇಂದಿನ ನಮ್ಮ ಕಾಲದ ಸಾಮುದಾಯಿಕತೆಯ ಮತ್ತು ಸೃಜನಶೀಲತೆಯ ನಿರಾಕರಣೆಯ ಯುಗದಲ್ಲಿ ಭರವಸೆಯ ಬೆಳಕನ್ನು ಬೀರುವವನಾಗಿದ್ದಾನೆ.



**(ಹಿರಿಯ ರಾಜಕೀಯ ತತ್ವಚಿಂತಕರಾಗಿರುವ ಲೇಖಕ ರಾಜಾರಾಂ ತೋಳ್ಪಾಡಿಯವರು ಮಂಗಳೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದಾರೆ.)**

---

**೨ನೇ ಪುಟದಿಂದ)**

ಅಶ್ಲೀಲತೆಯ ಕೋಲಾಹಲವನ್ನೆಬ್ಬಿಸಿ ಮರ್ಯಾದೆಯನ್ನುಳಿಸಿಕೊಂಡು ಬಾಳುತ್ತಿರುವ 'ಪ್ರಾರ್ಥನೆ', ಸಹಜ ಹಾಸುಬೀಸುಗಳಿಂದ ರೋಮಾಂಚಕಾರಿ ಅನುಭವಗಳ ಮಡುವಾಗಿರುವ 'ಕೂಪಮಂಡೂಕ'ಗಳಂಥ ಅಡಿಗ ವಿಶಿಷ್ಟ ಕವನಗಳು ನಮ್ಮ ನಡುವೆ ಉಳಿಯಬೇಕಾದರೆ 'ಮತ್ತೆ ಇಲ್ಲಿ ಮೊಳಗಲಿ ಪಾಂಚಜನ್ಯ' ಸಹ ಉಳಿಯಬೇಕಿದೆ. ಯಾಕೆಂದರೆ ಇಂತಹ ಕವನಗಳು ರಚನೆಯಾಗುತ್ತಿರುವುದು ಆ ಕವನಗಳ ಅಂತ್ಯಗಳ ವ್ಯಾಖ್ಯಾನವಾಗಿ. ಈ ದೇಶ ಅಧೋಗತಿಗೆ ಇಳಿಯುತ್ತಿರುವುದನ್ನು ತಡೆಯುವುದಕ್ಕಾಗಿ ಅಂಬೇಡ್ಕರ್ ಆನಂದತೀರ್ಥರಿಬ್ಬರಿಗೂ ಅಡಿಗರು ಮರುಹುಟ್ಟಿನ ಆಹ್ವಾನ ಕೊಡುತ್ತಿದ್ದಾರೆ. ಎಂಬುದನ್ನು ಜಿ. ರಾಜಶೇಖರ ಅವರು ಗಮನಿಸಬೇಕಿತ್ತು.

**–ಎನ್. ಬೋರಲಿಂಗಯ್ಯ,** ಮೈಸೂರು

ಗಾಂಧೀಜಿ ಸ್ವಾತಂತ್ರ್ಯ ಹೋರಾಟದ ಆರಂಭದ ವರ್ಷಗಳಲ್ಲೇ ಅಯೋಧ್ಯೆಗೆ ನೀಡಿದ ಭೇಟಿಗಳನ್ನು ಕುರಿತ ಬರಹ ಕುತೂಹಲಕಾರಿಯಾಗಿದೆ.. ಆಗಲೇ ವಿವಾದಾಸ್ಪದವಾಗಿದ್ದ ಆಹಾರಕ್ಕಾಗಿ ದನಗಳನ್ನು ಕೊಲ್ಲುವ ವಿಷಯದಲ್ಲಿ ವಿವೇಕಯುತ ನಿಲುವು ತಾಳಿದ್ದ ಅವರ ಹಿಂದೂ–ಮುಸ್ಲಿಂ ಐಕ್ಯತೆಯ ಆದರ್ಶವು ಎಂತಹ ಭದ್ರ ನೆಲೆಯ ಮೇಲೆ ನಿಂತಿತ್ತು ಎಂಬುದಕ್ಕೆ ಸಾಕ್ಷಿಯಂತಿದೆ. ಇನ್ನು ಬುದ್ಧನ ಕಥೆಗಳು ಅರ್ಥಪೂರ್ಣವಾಗಿದ್ದು, ದಯವಿಟ್ಟು 'ಧರ್ಮ ವಿಚಾರ' ಪುಟವನ್ನು ನಿಲ್ಲಿಸಬೇಡಿ.

**–ಎ.ಜಿ. ವೇಣುಗೋಪಾಲ,** ದಾವಣಗೆರೆ

'ಹೊಸ ಮನುಷ್ಯ' ಪತ್ರಿಕೆಯು ನನ್ನಂತಹ ಯುವಜನರನ್ನು ಸಮಕಾಲೀನ ಸಮಸ್ಯೆಗಳ ವಸ್ತುನಿಷ್ಠ ವಿಶ್ಲೇಷಣೆಗಳ ಮೂಲಕ ಜಾಗೃತಗೊಳಿಸುತ್ತಿರುವುದಲ್ಲದೆ ಮುಂದಿನ ದಾರಿ ತೋರುತ್ತಾ ನಾವು ಜಾತಿ–ಮತಗಳ ವಿಷವ್ಯೂಹಕ್ಕೆ ಸಿಕ್ಕಿಕೊಳ್ಳದಂತೆ ರಕ್ಷಿಸುತ್ತಿದೆ. ಜೊತೆಗೆ ಕಳೆದೆರಡು ಸಂಚಿಕೆಗಳಲ್ಲಿನ ಅಡಿಗರ ಕಾವ್ಯ ಕುರಿತ ಜಿ. ರಾಜಶೇಖರರ ಲೇಖನಗಳಂತಹ ಸಾಂಸ್ಕೃತಿಕ ಬರಹಗಳು ಮತ್ತು ಉತ್ತಮ ಕವನಗಳ ಮೂಲಕ ಸಾಹಿತ್ಯಾಭಿರುಚಿಯನ್ನೂ ಬೆಳೆಸುತ್ತಾ ನಮ್ಮ ನೆಚ್ಚಿನ ಪತ್ರಿಕೆ ಎನಿಸಿದೆ.

**–ಆರ್. ದಿಲೀಪ್‌ಕುಮಾರ್,** ಚಾಮರಾಜನಗರ

ಪ್ರಚಲಿತ

# ಬಿಳಿ ಶ್ರೇಷ್ಠತಾವಾದವೆಂಬ ಜಾಗತಿಕ ಹೆಬ್ಬಲೆಯೂ ಭಾರತದ ಬಲಪಂಥೀಯತೆಯೂ....

ಇಂಗ್ಲಿಷ್ ಮೂಲ : **ಕರೋಲ್ ಶಾಫರ್**
ಕನ್ನಡ ಸಂಕ್ಷಿಪ್ತ ರೂಪ : **ಎಂ. ರಾಜು**




**'ಕಾರವಾನ್'ನ ಜನವರಿ ಸಂಚಿಕೆಯಲ್ಲಿ ಪ್ರಕಟವಾಗಿರುವ ಕರೋಲ್ ಶಾಫರ್ ಎಂಬುವವರ Alt-Reich ಎಂಬ ಶೀರ್ಷಿಕೆಯ ಲೇಖನದ ಕನ್ನಡ ಭಾವಾನುವಾದವೊಂದನ್ನು ಇಲ್ಲಿ ನೀಡುತ್ತಿದ್ದೇವೆ. ಆಧುನಿಕ ನಾಗರೀಕತೆಯು ಮನುಷ್ಯನ ಮನಸ್ಸು ಮತ್ತು ಸಮಾಜಗಳಲ್ಲಿ ಉಂಟು ಮಾಡಿರುವ ಬಿರುಕು ಮತ್ತು ವಿರೋಧಾಭಾಸಗಳ ವಿಕ್ಷಿಪ್ತ ಪರಿಣಾಮದಂತೆ ಜಗತ್ತಿನ ವಿವಿಧ ಭಾಗಗಳಲ್ಲಿ ತಲೆ ಎತ್ತುತ್ತಿರುವ ನವ ಬಲಪಂಥೀಯತೆಯ ವರ್ಣಪಟಲವನ್ನು ಪರಿಚಯಿಸುವ ಈ ಲೇಖನ ಜಾಗತಿಕ ನವ ಬಲಪಂಥೀಯತೆಯ ತಾತ್ವಿಕತೆಯ ಮೂಲ ಮಾತೃಕೆ ಭಾರತದ ಹಿಂದೂ ಅಧ್ಯಾತ್ಮಶಾಸ್ತ್ರವೇ ಆಗಿದೆ ಎನ್ನುವ ಮೂಲಕ ಇಂದು ಭಾರತದಲ್ಲಿ ಏರುಗತಿಯಲ್ಲಿರುವ ಮತಮೂಲ ಬಲಪಂಥೀಯತೆಯನ್ನು ಅದರ ಸಂಕೀರ್ಣತೆಗಳಲ್ಲಿ ಅರಿತು ಮುಖಾಮುಖಿಯಾಗಬೇಕಾದ ಅಗತ್ಯವನ್ನು ಒತ್ತಿ ಹೇಳುವಂತಿದೆ. ವಿಶೇಷವಾಗಿ ನಮ್ಮ ಎಡಪಂಥೀಯ ಮತ್ತು ಸ್ವಘೋಷಿತ ಪ್ರಗತಿಪರ ಮಿತ್ರರು ತಮ್ಮ ಮುಂದಿನ ರಾಜಕೀಯ ಹೆಜ್ಜೆಗಳನ್ನು ಹೇಗೆ ಮತ್ತು ಎಷ್ಟು ತೂಕ ಮಾಡಿ ಇಡಬೇಕೆಂಬುದಕ್ಕೆ ಈ ಲೇಖನ ಮಾರ್ಗದರ್ಶಕವಾಗಿದೆ. ಸದ್ಯದ ಭಾರತದ ಬಲಪಂಥೀಯತೆಯನ್ನು ತಮ್ಮ ಎಡಪಂಥೀಯತೆಯ ಶ್ರೇಷ್ಠತೆಯಲ್ಲಿನ ಕುರುಡಿನಲ್ಲಿ ಒಂದೇ ಏಟಿಗೆ ಅಪಾಯಕಾರಿ, ವಿನಾಶಕಾರಿ ಎಂಬ ಸರಳೀಕೃತ ರೂಕ್ಷ ಪ್ರತಿಸ್ಪಂದನೆಯ ಮೂಲಕ ಎದುರಿಸುವುದು ಆತ್ಮಘಾತುಕ ಎಂಬ ಸೂಚನೆಯೊಂದನ್ನು ಇದು ನೀಡುತ್ತಿರುವಂತಿದೆ.–ಸಂ.**

**ಪ್ರಾ**ಣಿಗಳಂತೆ ಪ್ರವೃತ್ತಿ ಮಟ್ಟದಲ್ಲಿ ಜೀವಿಸುತ್ತಿದ್ದ ಮನುಷ್ಯ ಇಂದಿನ ಮಟ್ಟದ ನಾಗರೀಕತೆಯನ್ನು ತಲುಪುವವರೆಗೆ ತನ್ನ ವಿಕಾಸದ ಹಾದಿಯಲ್ಲಿ ಪ್ರಪಂಚದಾದ್ಯಂತ ಸಹಸ್ರಾರು ಭಾಷೆಗಳನ್ನು, ಧರ್ಮಗಳನ್ನು ಸಂಸ್ಕೃತಿಗಳನ್ನು ಸೃಷ್ಟಿಸಿಕೊಂಡು ಬಂದಿದ್ದಾನೆ. ವಿಕಾಸದ ಹಲವು ಮಜಲುಗಳಲ್ಲಿ ಉದಾತ್ತ ವಿಚಾರಗಳನ್ನು ಪ್ರತಿಪಾದಿಸಿದ ಬುದ್ಧ ಕಬೀರ ಗಾಂಧಿಯಂತಹ ಮಾನವ ಶ್ರೇಷ್ಟರು ಆಗಿಹೋಗಿದ್ದಾರೆ. ಹಾಗೆಯೇ ಜನಾಂಗ ಭಾಷೆ ಧರ್ಮ ಸಂಸ್ಕೃತಿಗಳ ಹೆಸರಿನಲ್ಲಿ ಕೋಟ್ಯಾಂತರ ಜನರನ್ನು ಹಿಂಸಿಸಿ ಹೊಸಕಿ ಹಾಕಿದ ಹಿಟ್ಲರನಂತಹ ವಿಕ್ಷಿಪ್ತ ವಿಕೃತರೂ ತಮ್ಮ ಹೆಜ್ಜೆ ಗುರುತುಗಳನ್ನು ಮೂಡಿಸಿಹೋಗಿದ್ದಾರೆ. ಹಿಟ್ಲರ್ ಸೃಷ್ಟಿಸಿದ ಕರಾಳ ಇತಿಹಾಸವನ್ನು ಮತ್ತೆ ಜೀವಂತಗೊಳಿಸುವ ಪ್ರಯತ್ನಗಳು ಅಲ್ಲಲ್ಲಿ ನಡೆಯುತ್ತಿರುವುದು ಮತ್ತು ಈ ಪ್ರಯತ್ನಗಳು ಧೃವೀಕರಣಗೊಂಡು ಅದೊಂದು ಜಾಗತಿಕ ಆಂದೋಲನವಾಗಿ ಕರಾಳಚರಿತ್ರೆ ಮತ್ತೆ ಮರುಕಳಿಸುವ ಸಾಧ್ಯತೆಗಳು ನಾಗರೀಕ ಪ್ರಪಂಚವನ್ನು ತಲ್ಲಣಗೊಳಿಸತೊಡಗಿದೆ.

ಆರ್ಯ ಜನಾಂಗದ ಶ್ರೇಷ್ಟತೆಯ ಹೆಸರಲ್ಲಿ ೬೦ ಲಕ್ಷ ಅಮಾಯಕ ಯಹೂದಿಗಳ ಕಗ್ಗೊಲೆಗೆ ಹಿಟ್ಲರ್ ಕಾರಣನಾದ. ಹಿಟ್ಲರ್ ತಮ್ಮವನೆಂದು ಹೇಳಿಕೊಳ್ಳಲು ಯುದ್ಧೋತ್ತರ ಜರ್ಮನಿ ನಾಚುತ್ತಿತ್ತು. ಆದರೆ ಇಂದು ಆರ್ಯಜನಾಂಗದ ಶ್ರೇಷ್ಟತೆಯ ಹೆಸರಲ್ಲಿ ಹಿಟ್ಲರನನ್ನು ಆರಾಧಿಸುವ ಜನರ ಗುಂಪುಗಳು ಅಲ್ಲಲ್ಲಿ ಹುಟ್ಟಿಕೊಳ್ಳತೊಡಗಿವೆ. ಈ ಗುಂಪುಗಳ ಸಿದ್ದಾಂತವೇ 'ನವ ನಾಜೀವಾದ'. ಈ ರೀತಿಯಲ್ಲಿ ಬಿಳಿಯ ಜನಾಂಗವೇ ಶ್ರೇಷ್ಟವೆಂದು ವಾದಿಸುವ, ಆಧುನಿಕತೆಯ ವಿರೋಧಿಗಳಾದ ಬಿಳಿ ಶ್ರೇಷ್ಠತಾವಾದಿಗಳ, ರಾಜಪ್ರಭುತ್ವವಾದಿಗಳ ಪುರುಷವಾದಿಗಳ, ಒಳಸಂಚುಕೋರರ, ಸ್ತ್ರೀದ್ವೇಷಿಗಳ, ನವಪೇಗನಿಸ್ಟರ (ಕ್ರಿಶ್ಚಿಯನ್ನರಲ್ಲದ ಅಸಂಸ್ಕೃತರು. ಕ್ಷುದ್ರದೇವತೆಗಳ ಆರಾಧಕರು ಎಂದು ಭಾವಿಸಲ್ಪಟ್ಟವರು ) ಸಡಿಲವಾದ ಒಂದು ಗುಂಪು ತನ್ನನ್ನು *ಆಲ್ಟ್‌ರೈಟ್(alt-right)*, *ನ್ಯೂರೈಟ್(new right)* ಇತ್ಯಾದಿ ಹೆಸರುಗಳಿಂದ ಗುರುತಿಸಿಕೊಳ್ಳುತ್ತದೆ. ಇಂದು ಲಭ್ಯವಿರುವ ಅಂತರ್ಜಾಲದಂತಹ ಅನುಕೂಲಗಳನ್ನು ಬಳಸಿಕೊಂಡು ಜಗತ್ತಿನಾದ್ಯಂತ ಒಗ್ಗೂಡತೊಡಗಿರುವ ಈ ಗುಂಪು ದೀರ್ಘ ಇತಿಹಾಸವುಳ್ಳ ಕ್ರಿಶ್ಚಿಯನ್ ಮತ್ತು ಯಹೂದಿಗಳ ನಡುವಿನ ದ್ವೇಷಕ್ಕೆ ಮತ್ತೆ ನೀರೆರೆದು ಪೋಷಿಸುವ ಕಾರ್ಯದಲ್ಲಿ ತೊಡಗಿದೆ. ಇದೊಂದು ಉಗ್ರ ಬಲಪಂಥೀಯ ಗುಂಪು. ಇಸ್ಲಾಮೋಫೋಬಿಯ ಎಂದು ಕರೆಯಲಾಗುವ ಇಸ್ಲಾಂ ವಿರುದ್ಧದ ಆತಂಕ ಮತ್ತು ಜನಾಂಗೀಯ ವಾದವೂ ಸಹ ಆಲ್ಟ್‌ರೈಟ್ ತಾತ್ವಿಕತೆಯ ಒಡಲಲ್ಲಿ ಅಡಗಿದೆ. ಇತ್ತೀಚಿನ ದಿನಗಳಲ್ಲಿ ಯೂರೋಪಿನ ಬೇರೆ ಬೇರೆ ದೇಶಗಳೊಳಕ್ಕೆ ನುಸುಳಿ ಬರುತ್ತಿರುವ ಆಫ್ರಿಕಾ ಮತ್ತು ಪಶ್ಚಿಮ ಏಷ್ಯಾದ ನಿರಾಶ್ರಿತರು *ಆಲ್ಟ್–ರೈಟ್‌ನ* ವಾದಕ್ಕೆ ಪುಷ್ಟಿ ದೊರಕಿಸಿ ಕೊಟ್ಟು ಅವರು ಸಂಘಟಿತರಾಗುವುದಕ್ಕೆ ನೆಪವನ್ನೊದಗಿಸುತ್ತಿದ್ದಾರೆ.

*ಆಲ್ಟ್‌ರೈಟ್* ಒಂದು ಉಗ್ರ ಬಲಪಂಥೀಯ ಗುಂಪು. ಅಂತರಿಕವಾಗಿ ಹಲವಾರು ವ್ಯತ್ಯಾಸಗಳಿರುವ, ವಿಭಿನ್ನ ಆಶಯ ಮತ್ತು ಧೋರಣೆಗಳನ್ನು ಹೊಂದಿರುವ ಈ ಗುಂಪು ಒಂದು ಏಕ ಸೂತ್ರಕ್ಕೆ ಬದ್ಧವಾಗದಿದ್ದರೂ, ಇವರ ನಡುವೆ ಹಲವಾರು ಸಮಾನ ಅಂಶಗಳಿದ್ದು, ಈ ಸಮಾನತೆಯ ಆಧಾರದಲ್ಲಿ ಈ ಗುಂಪು ಕಾರ್ಯಾಚರಿಸುತ್ತಿದೆ. ಈಬಗೆಯ ಪ್ರಯತ್ನಗಳ ಭಾಗವಾಗಿ, ತಮ್ಮ ವಾದಕ್ಕೆ ತಾತ್ವಿಕ ನೆಲೆಯೊಂದನ್ನು ಸೃಷ್ಟಿಸಿಕೊಳ್ಳುವ ದೃಷ್ಟಿಯಿಂದ ಮತ್ತು ಇಂದಿನ ಆಧುನಿಕ ನಾಗರೀಕತೆಯ ಋಣಾತ್ಮಕ ಅಂಶಗಳಿಂದ ಅಸಂತುಷ್ಟರಾಗಿರುವ ಬಹುಸಂಖ್ಯಾತ ಜನರನ್ನು ತಮ್ಮತ್ತ ಸೆಳೆದುಕೊಳ್ಳುವ ದೃಷ್ಟಿಯಿಂದ, ಈ ಗುಂಪು ಕಳೆದ ನೂರಾರು ವರ್ಷಗಳಲ್ಲಿ ಪ್ರಕಟವಾಗಿರುವ, ಇವರ ವಾದಕ್ಕೆ ಪುಷ್ಟಿ, ಸಮರ್ಥನೆ, ನೀಡಬಲ್ಲ ಸಿದ್ಧಾಂತಗಳನ್ನು ಪ್ರತಿಪಾದಿಸುವ ಪುಸ್ತಕಗಳನ್ನು ಹುಡುಕಿ ಇಂಗ್ಲಿಷ್‌ಗೆ ಅನುವಾದಿಸಿ ಪ್ರಕಟಿಸುವ ಕಾರ್ಯದಲ್ಲಿ ತೊಡಗಿದೆ. ಈ ಪ್ರಕಟಣಾ ಸಂಸ್ಥೆಯ ಹೆಸರೇ *ಆರ್ಕ್ಟೋಸ್ (Arktose)*. ಈಗ ಇದೊಂದು ಕಾರ್ಪೊರೇಷನ್ ಆಗಿ ಕೆಲಸ ಮಾಡುತ್ತಿದೆ. *ಆರ್ಕ್ಟೋಸ್* ಪ್ರಕಟಿಸುವ ಬಹುತೇಕ ಕೃತಿಗಳು ಪ್ರಜಾಪ್ರಭುತ್ವ ವಿರೋಧಿ, ಸಮಾನತಾ ವಿರೋಧಿ, ಉದಾರವಾದದ ವಿರೋಧಿಯಾದಂತಹ ಪ್ರತಿಗಾಮಿ ವಿಚಾರಗಳನ್ನು ಪ್ರತಿಪಾದಿಸುವಂತಹವು. ಮುಂಬೈ, ಗೋವಾ, ಮತ್ತು ಬೆಂಗಳೂರುಗಳಲ್ಲೂ ಸಹ ತನ್ನ ಕಛೇರಿಗಳನ್ನು ಹೊಂದಿದ್ದ ಅರ್ಕ್ಟೋಸ್, ಆಧುನಿತೆಯ ದಾಳಿಯ ವಿರುದ್ದ ಪರ್ಯಾಯಗಳನ್ನು ಹುಡುಕುವ ಇರಾದೆಯಿರುವವರಿಗೆ ಸಂಪನ್ಮೂಲಗಳನ್ನು ಒದಗಿಸುವುದು ತನ್ನ ಉದ್ದೇಶ ಎಂದು ಹೇಳಿಕೊಳ್ಳುತ್ತದೆ.

ಬಿಳಿಯರ ಶ್ರೇಷ್ಟತೆ ಮತ್ತು ಬಿಳಿಯರ ಅಸ್ಮಿತೆಗಳನ್ನು ಒಂದು ಗೀಳಾಗಿ ಮಾಡಿಕೊಂಡು ಈ ಶ್ರೇಷ್ಠತೆ ಅಸ್ಮಿತೆಯು ಅಪಾಯದಲ್ಲಿವೆ ಎಂಬ ಭಯವನ್ನು ಬಿತ್ತುವ ಈ ಗುಂಪು ಜಗತ್ತಿನಾದ್ಯಂತ ತನ್ನ ಸಮಾನ ಮನಸ್ಕರ ಜೊತೆ ಸಂಪರ್ಕ ಕಲ್ಪಿಸಿಕೊಂಡು ತೀವ್ರ ಬಲಪಂಥೀಯ ಕಾರ್ಯಸೂಚಿಯ ಆಧಾರದಲ್ಲಿ ಒಗ್ಗೂಡುತ್ತಿದೆ.

ಭಾರತವೂ ಒಳಗೊಂಡಂತೆ ಜಗತ್ತಿನ ವಿವಿಧ ಕಡೆಗಳಲ್ಲಿ ಅಂಚಿನಲ್ಲಿರುವ ಈ ಗುಂಪುಗಳು ಇಂದು ಒಗ್ಗೂಡತೊಡಗಿವೆ. ತನ್ನ ಅಸ್ಮಿತೆಗೆ ಅಪಾಯವೆಂದು ಆರೋಪಿಸಿ ಯಹೂದಿಗಳನ್ನು, ಮುಸ್ಲಿಮರನ್ನು, ಕರಿಯರನ್ನು, ಸಮಾಜವಾದಿಗಳನ್ನು, ಪ್ರಜಾಪ್ರಭುತ್ವವಾದಿಗಳನ್ನು, ಮಾನವತಾವಾದಿಗಳನ್ನು, ಸ್ತ್ರೀವಾದಿಗಳನ್ನು, ಎಡಪಂಥೀಯರನ್ನು,ಈ *ಆಲ್ಟ್‌ರೈಟ್* ತನ್ನ ದಾಳಿಯ ಗುರಿಯನ್ನಾಗಿಸಿಕೊಂಡಿದೆ. ಇವರನ್ನೆಲ್ಲಾ ನಿವಾರಿಸಿದ ನಂತರ ತಮಗೊಂದು ಸುವರ್ಣಯುಗ ಬರುವುದೆಂದು **ಆಲ್ಟ್‌ರೈಟ್** ಭಾವಿಸುತ್ತದೆ. ಈ ಸುವರ್ಣಯುಗ ಹೇಗಿರಬಹುದೆಂಬುದರ ಬಗ್ಗೆ ಇವರಲ್ಲೇ ಭಿನ್ನಾಭಿಪ್ರಾಯಗಳಿರುವುದು ಬೇರೆ ಮಾತು. ಕೆಲವರಿಗೆ ಇದು ಬಿಳಿಯರಲ್ಲದವರಿಗೂ ನಾಗರೀಕಹಕ್ಕುಗಳ ವಿಸ್ತರಣೆಯಾಗುವುದಕ್ಕೆ ಪೂರ್ವದಲ್ಲಿದ್ದ ಖಚಿತ ಲಿಂಗ ಮತ್ತು ಜನಾಂಗೀಯ ವರ್ಗೀಕರಣವಿದ್ದ ಸಮಾಜವಾದರೆ, ಇನ್ನು ಕೆಲವರಿಗೆ ಇದು ಪುನರುಜ್ಜೀವನಗೊಂಡ ರೋಮನ್ ಸಾಮ್ರಾಜ್ಯ, ಮತ್ತೆ ಕೆಲವರಿಗೆ ಇದು ಪುನರುಜ್ಜೀವನಗೊಂಡ ಪರ್ಷಿಯನ್ ಸಾಮಾಜಿಕ ವ್ಯವಸ್ಥೆ.

ಒಟ್ಟಾರೆ ಇವೆಲ್ಲ ಬಿಳಿಯ ಯುಟೋಪಿಯನ್ ಮಾದರಿಗಳು. ಅಲ್ಲಿ ಆರ್ಯರಲ್ಲದವರು ಅಧೀನ ಸಹಜೀವಿಗಳಾಗಿರಬಹುದು ಅಥವಾ ಅವು ತಿರಸ್ಕಾರಾರ್ಹರಾದ ಅನಾರ್ಯರು ಇಲ್ಲದಂತೆ ಶುದ್ದೀಕರಿಸಲ್ಪಟ್ಟ ಪ್ರದೇಶಗಳಾಗಿರಬಹುದು. ಈ ಕಲ್ಪನೆಗಳು ಮೇಲ್ನೋಟಕ್ಕೆ ನಾಜಿವಾದ ಅಥವಾ ಫ್ಯಾಸಿಸ್ಟ್ ಸಿದ್ಧಾಂತಗಳೆಂಬಂತೆ ಕಂಡುಬಂದರೂ ಅಂತಹ ಹಣೆಪಟ್ಟಿಯನ್ನು ಇವರು ಒಪ್ಪುವುದಿಲ್ಲ. ಇವರು ತಮ್ಮನ್ನು ಅಸ್ಮಿತಾವಾದಿಗಳು, *ಆಲ್ಟ್‌ರೈಟ್‌ಗಳು*, *ನ್ಯೂರೈಟ್*ಗಳು ಇತ್ಯಾದಿ ಹೆಸರುಗಳಿಂದ ಗುರುತಿಸಿಕೊಳ್ಳಬಯಸುತ್ತಾರೆ. . ಒಂದು ರೂಪರಹಿತವಾದ, ಗುಂಪು ಒಳಗುಂಪುಗಳ, ಪ್ರಾದೇಶಿಕ ಅಂತಃಕಲಹಗಳ ಸಂತೆಯಂತಿರುವ ಈ ಸಮುಚ್ಚಯ ಅಂತರ್ಜಾಲದ ಮೂಲಕ ಅತ್ಯಂತ ಕ್ರಿಯಾಶೀಲವಾಗಿದೆ. ಅಲ್ಪಸಂಖ್ಯಾತರಲ್ಲಿ ಭೀತಿ ಮೂಡಿಸುವ ಮೂಲಕ, ರಸ್ತೆಗಳ ಮೇಲಿನ ಹಿಂಸಾಚಾರಗಳ ಮೂಲಕ, ರಾಜಕೀಯ ಸಂಪರ್ಕಗಳ ಮೂಲಕ *ಆಲ್ಟ್‌ರೈಟ್*ನ ವಿವಿಧ ಘಟಕಗಳು ಪ್ರಪಂಚದಾದ್ಯಂತ ಬಲಗೊಳ್ಳತೊಡಗಿವೆ.

ಉಗ್ರಬಲಪಂಥೀಯತೆಗೆ ಹಿಂಸೆ ಮತ್ತು ಭಯೋತ್ಪಾದನೆಯ ಬಹು ದೀರ್ಘ ಇತಿಹಾಸವೇ ಇದ್ದರೂ *ಆಲ್ಟ್‌ರೈಟ್*, ತಾನು ಮಾತ್ರ ಹಾಗಲ್ಲ, ತನ್ನದು ಬಹಳ ಭಿನ್ನವಾದ ಸಂಘಟನೆ ಎಂದು ಹೇಳಿಕೊಳ್ಳುತ್ತಾ, ಉಗ್ರವಾದದಿಂದ ತಾನು ದೂರವಿರುವಂತೆ ತೋರ್ಪಡಿಸಿಕೊಳ್ಳುತ್ತದೆ,. ಆದರೆ ವಸ್ತುಸ್ಥಿತಿ ಮಾತ್ರ ಇದಕ್ಕಿಂತ ಭಿನ್ನವಾಗಿರುವುದು ಮೇಲ್ನೋಟಕ್ಕೇ ಕಂಡುಬರುವ ಸಂಗತಿಯಾಗಿದೆ. ಅಮೇರಿಕದ ಶಾರ್ಲೆಟ್‌ವಿಲ್ ನಗರದಲ್ಲಿ ೨೦೧೭ರ ಅಗಸ್ಟ್ ನಲ್ಲಿ ಬಲಪಂಥೀಯತೆಯನ್ನು ವಿರೋಧಿಸುವ ಶಾಂತಿಯುತ ಮೆರವಣಿಗೆಯ ಮೇಲೆ ಉಗ್ರನೊಬ್ಬ ಕಾರು ಹಾಯಿಸಿ ಒಬ್ಬ ಮಹಿಳೆಯನ್ನು ಕೊಂದು ಹಲವರನ್ನು ಗಾಯಗೊಳಿಸಿದ ನಿದರ್ಶನವಿದೆ.

ಈ ರ‍್ಯಾಲಿಯನ್ನು ಸಂಘಟಿಸಿದ *ಅಮೆರಿಕನ್ ವ್ಯಾನ್‌ಗಾರ್ಡ್* ಎಂಬ ಸಂಘಟನೆಯ ಸದಸ್ಯರು ನಾಜಿ ತಲೆಬುರುಡೆ ಮತ್ತು ಕತ್ತರಿಯಾಕಾರದ ಮೂಳೆಗಳ ಚಿತ್ರವಿರುವ ಶರ್ಟ್‌ಗಳನ್ನು ವಿತರಿಸಿದರೆ, *ಐಡೆಂಟಿಟಿ ಈವ್‌ರೋಪಾ* ಎಂಬ ಸಂಘಟನೆಯ ಸದಸ್ಯರು ಅಸ್ಮಿತಾವಾದಿ ಸಾಹಿತ್ಯದ ಪುಸ್ತಕಗಳನ್ನು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಮಾರುತ್ತಿದ್ದರು. ಇವರು ಧರಿಸುವ ಅಂಗಿಗಳ ಮೇಲೆ 'ಕಲಿಯುಗವನ್ನು ದಾಟಿರಿ' (surf the kaliyuga) ಎಂಬ ಘೋಷಣೆಗಳಿರುತ್ತವೆ.

ಈ ಆಧುನಿಕ ಕಾಲಮಾನವನ್ನು ಕಲಿಯುಗವೆಂದು ಹೆಸರಿಸುವ ಹಿಂದೂ ಪರಿಕಲ್ಪನೆಯನ್ನು *ಆಲ್ಟ್‌ರೈಟ್* ಕೂಡ ಬಳಸಿಕೊಳ್ಳುತ್ತದೆ. ಕಲಿಯುಗದಲ್ಲಿ ಮನುಷ್ಯರು ಅತ್ಯಂತ ಭ್ರಷ್ಟ ಸ್ಥಿತಿಯನ್ನು ತಲುಪುತ್ತಾರೆ. ಈ ಯುಗಾಂತ್ಯದಲ್ಲಿ ಅವತರಿಸುವ ಕಲ್ಕಿಯು ಈ ಜಗತ್ತನ್ನು ಲಯಗೊಳಿಸುತ್ತಾನೆ ಎಂಬ ನಂಬಿಕೆಯನ್ನು *ಆಲ್ಟ್‌ರೈಟ್* ಪ್ರತಿಪಾದಿಸುತ್ತದೆ. ತಮ್ಮ ರ‍್ಯಾಲಿಗಳಲ್ಲಿ ಇವರು ಯಹೂದಿಗಳ ವಿರುದ್ಧ ಘೋಷಣೆಗಳನ್ನು ಕೂಗುತ್ತಾರೆ; *ಕುಕ್ಲುಕ್ಸ್ ಕ್ಲಾನ್*ಗಳು ತಮ್ಮ ಮೆರವಣಿಗೆಗಳಲ್ಲಿ ಹಿಡಿಯುತ್ತಿದ್ದಂತಹ ಪಂಜುಗಳನ್ನು ಇವರೂ ಹಿಡಿಯುತ್ತಾರೆ. ಈ ಕುಕ್ಲುಕ್ಸ್ ಕ್ಲಾನ್ ಎಂಬುದು ೧೯ ನೆಯ ಶತಮಾನದಲ್ಲಿ ಅಮೇರಿಕದಲ್ಲಿ ಕ್ರಿಯಾಶೀಲವಾಗಿದ್ದ ಕರಿಯರ ವಿರೊಧಿ ಉಗ್ರಗಾಮಿ ಸಂಘಟನೆ.

*ಆಲ್ಟ್‌ರೈಟ್* ತನ್ನ ಸೂತ್ರಗಳನ್ನು ರೂಪಿಸಿಕೊಳ್ಳಲು ಆಧಾರವಾದ ಹಲವಾರು ಕೃತಿಗಳನ್ನು ಇಂಗ್ಲಿಷ್‌ಗೆ ಅನುವಾದಿಸುವ ಕೆಲಸವನ್ನು ಆರ್ಕ್ಟೋಸ್ ನಿರ್ವಹಿಸುತ್ತದೆ. ಯೂರೋಪ್ ಮತ್ತು ಅಮೇರಿಕಾದ ಬಲಪಂಥೀಯ ರಾಜಕಾರಣಿಗಳು ಈ ಸೂತ್ರಗಳನ್ನು ಅಳವಡಿಸಿಕೊಳ್ಳತೊಡಗಿದಂತೆ ಎಲ್ಲೋ ಅಜ್ಞಾತವಾಗಿದ್ದ ಈ ಪುಸ್ತಕಗಳು ಮುಖ್ಯವಾಹಿನಿಗೆ ಬರತೊಡಗಿವೆ. ಜನವರಿ ೨೦೧೭ರಲ್ಲಿ, ಅಮೇರಿಕಾದಲ್ಲಿ ಟ್ರಂಪ್‌ರ ಅವರ ಅಧ್ಯಕ್ಷಾವಧಿ ಉದ್ಘಾಟನೆಗೊಳ್ಳುವ ತುಸು ಮೊದಲು ರಿಚರ್ಡ್ ಸ್ಪೆನ್ಸರ್ ಎಂಬ ನವನಾಜಿಯನ್ನು ಆರ್ಕ್ಟೋಸ್ ತನ್ನ ಪಾಲುದಾರನನ್ನಾಗಿ ಮಾಡಿಕೊಂಡಿತು. ಯೂರೋಪ್‌ನ ನವಬಲಪಂಥ ಮತ್ತು ಅಮೇರಿಕಾದ ಆಲ್ಟ್‌ರೈಟ್‌ಗಳನ್ನು ಸಮನ್ವಯಗೊಳಿಸುವುದು ಇದರ ಹಿಂದಿನ ಉದ್ದೇಶವಾಗಿತ್ತು. ಆಲ್ಟ್‌ರೈಟ್ ಪ್ರಸ್ತುತ ಎಲ್ಲಾ ಯೂರೋಪಿಯನ್ ಭಾಷೆಗಳಲ್ಲೂ ಇದು ಸುಮಾರು ೧೮೦ ಶೀರ್ಷಿಕೆಗಳನ್ನು ಪ್ರಕಟಿಸಿದೆ.

ಭಾರತದೊಂದಿಗೆ ನಿಕಟವಾದ ಸಂಪರ್ಕವನ್ನು ಹೊಂದಿರುವ ಆರ್ಕ್ಟೋಸ್, ಆಲ್ಟ್‌ರೈಟ್‌ನ ಯೂರೋಪಿಯನ್ ವಿಭಾಗವನ್ನು ಪ್ರತಿನಿಧಿಸುತ್ತದೆ. ಆರ್ಕ್ಟೋಸ್‌ನ ಈಗಿನ ನೆಲೆ ಹಂಗೇರಿಯಾದರೂ, ಆರ್ಕ್ಟೋಸ್‌ನ ಮೂಲ ನೆಲೆ ಭಾರತವವೇ. ಭಾರತದ ಬಲಪಂಥೀಯರಿಗೆ ಪಶ್ಚಿಮದ ಪ್ರವೇಶಕ್ಕೆ *ಆರ್ಕ್ಟೋಸ್* ಒಂದು ಹೆಬ್ಬಾಗಿಲಾಗಲಿದೆ ಎಂದು ಹೇಳಲಾಗುತ್ತದೆ. ಮತ್ತು ಬಿಜೆಪಿ ಹಾಗೂ ಆರ್.ಎಸ್.ಎಸ್. ನೊಂದಿಗೆ ಆರ್ಕ್ಟೋಸ್ ಸಂಪರ್ಕ ಹೊಂದಿರುವುದು ಅಂತರ್ಜಾಲದ ವೆಬ್‌ಪೇಜ್‌ಗಳಿಂದ ತಿಳಿದುಬರುತ್ತದೆ. ಆರ್ಕ್ಟೋಸ್‌ನ ಮೂಲ ಪ್ರವರ್ತಕ ಮಾರ್ಗನ್ ಮತ್ತು ಆತನ ಸಹಚರ ಸ್ವೀಡನ್‌ನ ಡೇನಿಯಲ್‌ಫ್ರಿಬರ್ಗ್‌ರ ಪ್ರಕಾರ ಸಂಸ್ಥೆಯನ್ನು ಭಾರತದಲ್ಲಿ ಪ್ರಾರಂಭಿಸುವುದಕ್ಕೆ ಮುಖ್ಯ ಕಾರಣ, ಅದರ ನಿರ್ವಹಣಾ ವೆಚ್ಚವನ್ನು ಕನಿಷ್ಠಮಟ್ಟದಲ್ಲಿರಿಸುವುದು. ಆದರೆ ವಾಸ್ತವ ಬೇರೆಯೇ ಇರುವುದು ಎದ್ದು ಕಾಣುವ ವಿಚಾರ.

ಕೆಲವು ಹಿಂದೂ ತಾತ್ವಿಕ ಧೋರಣೆಗಳಿಂದ ಆರ್ಕ್ಟೋಸ್ ಸ್ಫೂರ್ತಿ ಪಡೆದಿರುವುದು ಕಂಡುಬರುತ್ತದೆ. ಆದರೆ ಭಾರತೀಯರು ಹಿಂದೂ ಎಂದು ಯಾವುದನ್ನು ಗುರುತಿಸುತ್ತಾರೋ ಅದನ್ನು ಆರ್ಕ್ಟೋಸ್ *ವೈದಿಕ(vedic)* ಎಂದು ಹೆಸರಿಸಬಯಸುತ್ತದೆ. ತಾನು ಪರಿಭಾವಿಸುವ ವಿಚಾರಗಳನ್ನು ಆರ್ಕ್ಟೋಸ್ ಆರ್ಯನ್ ಎಂಬ ನೆಲೆಯಲ್ಲಿ ನೋಡುತ್ತದೆಯೇ ಹೊರತು ದಕ್ಷಿಣ ಏಷ್ಯನ್ ಎಂಬ ನೆಲೆಯಲ್ಲಲ್ಲ. ಪೌರಾತ್ಯ ಆಧ್ಯಾತ್ಮಶಾಸ್ತ್ರಕ್ಕೂ ಮತ್ತು ಪಶ್ಚಿಮದ ಬಲಪಂಥೀಯ ಚಿಂತನೆಗೂ ಇರುವ ನಂಟು ಸಾಕಷ್ಟು ಹಳೆಯದು. ಸ್ವಸ್ತಿಕವು ಹಿಟ್ಲರನ ನಾಜೀ ಚಿಹ್ನೆಯಾಗಿ ಬಳಕೆಯಾದದ್ದು ಇದಕ್ಕೊಂದು ಉದಾಹರಣೆ. ಯಹೂದಿಗಳ ಯಾತನಾ ಶಿಬಿರಗಳ ಮತ್ತು ಸಾಮೂಹಿಕ ಕಗ್ಗೊಲೆಗಳ ರೂವಾರಿಯಾಗಿದ್ದ ಹಿಟ್ಲರನ ಆಪ್ತ ಹಿಮ್ಲರ್ ಭಗವದ್ಗೀತೆಯ ಪ್ರತಿಯೊಂದನ್ನು ಸದಾ ತನ್ನೊಡನೆ ಇರಿಸಿಕೊಂಡಿರುತ್ತಿದ್ದ. ಅದನ್ನು ಆತ ಆರ್ಯನ್ ಸೂತ್ರಗಳ ಕೋಶವೆಂದು (Aryan canto) ಕರೆಯುತ್ತಿದ್ದ. ಈತ ಆರ್ಯರ ಮೂಲಸ್ಥಾನ ಉತ್ತರ ಧ್ರುವಪ್ರದೇಶದಲ್ಲಿದೆ ಎಂಬ ಸಿದ್ಧಾಂತಕ್ಕೆ ಪುರಾವೆಗಳನ್ನು ಸಂಶೋಧಿಸುವುದಕ್ಕಾಗಿ ನಾಜೀ ಯೋಜನೆಯೊಂದನ್ನು ಸಿದ್ಧಪಡಿಸಿದ್ದ ಎನ್ನಲಾಗುತ್ತದೆ.

ಹಿಂದೂ ರಾಷ್ಟ್ರೀಯತೆ, ಆಧ್ಯಾತ್ಮಿಕತೆಗಳನ್ನು ನಾಜೀವಾದದೊಂದಿಗೆ ಸಮನ್ವಯಗೊಳಿಸಲು ಪ್ರಯತ್ನಿಸಿದ ಯೂರೋಪಿಯನ್ ಲೇಖಕರಲ್ಲಿ ಸಾವಿತ್ರಿ ದೇವಿ ಮತ್ತು ಇವೊಲಾ ಎಂಬುವವರು ಪ್ರಮುಖರಾಗಿದ್ದು ಈ ಇಬ್ಬರ ಕೃತಿಗಳನ್ನು *ಆರ್ಕ್ಟೋಸ್* ಮತ್ತಿತರ ಕೆಲವು ಬಲಪಂಥೀಯ ಗುಂಪುಗಳು ಕಾಲಕಾಲಕ್ಕೆ ಪ್ರಕಟಿಸುತ್ತಲೇ ಬಂದಿವೆ. ಗ್ರೀಕ್ ತಂದೆ ಮತ್ತು ಇಂಗ್ಲಿಷ್ ತಾಯಿಯ ಮಗಳಾಗಿ ಫ್ರಾನ್ಸ್ ದೇಶದಲ್ಲಿ ಜನಿಸಿದ ಮ್ಯಾಕ್ಸಿಮಿಯಾನಿ ಪೋರ್ಟಾಸ್ ಎಂಬ ಮಹಿಳೆ ೧೯೩೨ರಲ್ಲಿ ಭಾರತಕ್ಕೆ ಬಂದು ಇಲ್ಲಿ ನಾಜೀ ಆರಾಧನೆಯನ್ನು ಜೀವಂತವಾಗಿರಿಸಲು ಪ್ರಯತ್ನ ಪಟ್ಟವಳು. ಜುಡಾಯಿ–ಕ್ರಿಶ್ಚಿಯನ್ ಪರಂಪರೆಯ ವಿರೋಧಿಯಾಗಿದ್ದ ಆಕೆ ಆಧುನಿಕ ಪ್ರಪಂಚದಲ್ಲಿ ಹಿಂದೂ ಧರ್ಮ ಮಾತ್ರವೇ ಆರ್ಯನ್ ಪರಂಪರೆಯನ್ನು ಹೊಂದಿದೆ ಎಂದು ನಂಬಿ ಭಾರತಕ್ಕೆ ಬಂದು ಗಾಯತ್ರೀ ದೇವಿ ಎಂಬ ಹೆಸರಿನೊಂದಿಗೆ ಇಲ್ಲೇ ನೆಲೆಸಿದವಳು.

ಕಟ್ಟಾ ನಾಜೀ ಅಭಿಮಾನಿಯಾಗಿದ್ದ ಈಕೆ, ಪ್ರಾಣಿ ದಯೆ ಮತ್ತು ಜೀವಪರಿಸರದ ಬಗ್ಗೆಯೂ ಕೂಡ ಕಾಳಜಿ ಹೊಂದಿದ್ದಳು ಎನ್ನಲಾಗುತ್ತದೆ. ಭಾರತದಲ್ಲಿದ್ದುಕೊಂಡು ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಜರ್ಮನಿ, ಜಪಾನ್‌ಗಳ ಪರವಾಗಿ ಬೇಹುಗಾರಿಕೆಯನ್ನೂ ಕೂಡ ಈಕೆ ಭಾರತದಲ್ಲಿ ನಡೆಸುತ್ತಾಳೆ. ಹಿಟ್ಲರ್, ರಾಮ–ಕೃಷ್ಣರ ಅವತಾರವಾಗಿದ್ದು ಪ್ರಪಂಚವನ್ನು ಉಳಿಸುವುದಕ್ಕಾಗಿ ಅವತರಿಸಿದವನು ಎಂದು ಪ್ರಚಾರ ನಡೆಸುತ್ತಾಳೆ. ಈಕೆ ಮುಸ್ಲಿಂ ವಿರೋಧಿಯೂ ಆಗಿದ್ದು ಮುಸ್ಲಿಂ ಪ್ರಾಬಲ್ಯದ ಸಾಧ್ಯತೆಯ ಬಗ್ಗೆ ಎಚ್ಚರಿಸುತ್ತಾ ಇಲ್ಲಿನ ರಾಷ್ಟ್ರೀಯವಾದಿಗಳಾಗಿದ್ದ ಹಿಂದೂ ಮಹಾಸಭಾ ಮತ್ತು ರಾಷ್ಟ್ರೀಯ ಸ್ವಯಂ ಸೇವಕ ಸಂಘಗಳ ಜೊತೆಗೂ ಆಪ್ತವಾದ ಸಂಬಂಧವನ್ನು ಸ್ಥಾಪಿಸಿಕೊಳ್ಳುತ್ತಾಳೆ .ನಾಜಿಗಳ ಆರ್ಯನ್ ಆರಾಧನೆ ಮತ್ತು ಹಿಂದೂ ರಾಷ್ಟ್ರವಾದದ ನಡುವೆ ಸಮನ್ವಯ ಸಾಧಿಸಲು ಪ್ರಯತ್ನ ನಡೆಸುತ್ತಾಳೆ. ಜರ್ಮನ್ ರಾಷ್ಟ್ರೀಯತೆಯ ಸಂಕುಚಿತ ಪ್ರಾಂತೀಯತೆಯ ಮಿತಿಗಳನ್ನು ಸಾವಿತ್ರಿ ದೇವಿಯ

ಕಲ್ಪನೆಯ ನಾಜೀ ಆರ್ಯನ್ ಆದರ್ಶವು ಮೀರಿದ್ದರಿಂದ ಯುದ್ಧೋತ್ತರ ಬಲಪಂಥೀಯ ಹೋರಾಟಕ್ಕೆ ಒಂದು ವ್ಯಾಪಕವಾದ ಆಯಾಮವನ್ನು ತಂದು ಕೊಟ್ಟಿತು ಎನ್ನಲಾಗುತ್ತದೆ.

ಸಾವಿತ್ರಿ ದೇವಿಯ ಹಾಗೆ ಜೂಲಿಯಸ್ ಇವೋಲಾ ಕೂಡಾ ನವನಾಜೀ ತಾತ್ವಿಕತೆಗೆ ಕೊಡುಗೆ ನೀಡಿದ ಮತ್ತೊಬ್ಬ ಲೇಖಕ. ಈತ ಇಟಲಿಯ ಫ್ಯಾಸಿಸಂ ಮತ್ತು ಜರ್ಮನಿಯ ನಾಜೀವಾದಗಳೆರಡನ್ನೂ ಸಮರ್ಥಿಸುತ್ತಾನೆ. ಈತನ ಪ್ರಕಾರ ಮಾನವತಾವಾದ ಮತ್ತು ಪ್ರಜಾಪ್ರಭುತ್ವಗಳು ಅನುಭವಾತೀತವಾದ ಸಾರ್ವಕಾಲಿಕ ನಿಯಮಗಳ ಉಲ್ಲಂಘನೆಗಳು. ಜಾತಿವ್ಯವಸ್ಥೆಯೆಂಬುದು ಮಾನವನ ಸೃಷ್ಟಿಯಾಗಿರದೆ ಅದೊಂದು ಪ್ರಾಕೃತಿಕ ನಿಯಮವೇ ಆಗಿದೆ ಎಂಬುದು ಈತನ ವಾದ. ಈತನ ಪ್ರಕಾರ ಜಾತಿ ವ್ಯವಸ್ಥೆಯು ಪ್ರಾಕೃತಿಕ ಶ್ರೇಣೀಕರಣವನ್ನು ವಿವರಿಸುವ ಸಾಧನ. ಹೀಗೆ ಜಾತಿವ್ಯವಸ್ಥೆಯ ಸಮರ್ಥನೆ, ಜನಾಂಗೀಯ ತಾರತಮ್ಯ ಮುಂತಾದ ಪ್ರತಿಗಾಮಿ ಧೋರಣೆಗಳ ಸಮರ್ಥಕ ಗುಂಪುಗಳು ಇಂದು ಜಗತ್ತಿನಾದ್ಯಂತ ಸಂಘಟಿತವಾಗುತ್ತಿರುವುದು, ಅಮೇರಿಕವೂ ಸೇರಿದಂತೆಂತೆ ಜಗತ್ತಿನ ಹಲವಾರು ದೇಶಗಳಲ್ಲಿ, ಪ್ರತಿಗಾಮಿ ಶಕ್ತಿಗಳು ಬೆಳೆಯುತ್ತಿರುವುದು, ಇಂಥ ಧೋರಣೆಯುಳ್ಳ ರಾಜಕಾರಣಿಗಳು ಅಧಿಕಾರದ ಗದ್ದುಗೆಗೇರುತ್ತಿರುವುದು ಪ್ರಜಾಪ್ರಭುತ್ವವಾದಿಗಳಿಗೆ, ಮಾನವತಾವಾದಿಗಳಿಗೆ, ಇಡೀ ಮನುಕುಲದ ಒಳಿತನ್ನು ಬಯಸುವವರಿಗೆ ಆತಂಕದ ಸಂಗತಿಯಾಗುತ್ತಿದೆ.


ಆರ್ಕ್ಟೋಸ್‌ನ ಪ್ರಕಟಣೆಯ ಕೆಲವು ಪುಸ್ತಕಗಳ ಬಗ್ಗೆ, ಅವುಗಳ ಲೇಖಕರ ಬಗ್ಗೆ ಒಂದು ಸಂಕ್ಷಿಪ್ತ ಅವಲೋಕನ ನಡೆಸುವುದು ಈ ಸಂಘಟನೆಗಳ ಬಗ್ಗೆ ಸ್ವಲ್ಪವಾದರೂ ತಿಳುವಳಿಕೆ ಪಡೆಯಲು ಸಹಕಾರಿಯಾಗಬಹುದು. ಆರ್ಕ್ಟೋಸ್ ವಿಕರ್ನಾಸ್ ಎಂಬ ಮನುಷ್ಯನೊಬ್ಬನ ಪುಸ್ತಕವನ್ನು ಮಾರುತ್ತದೆ. ಜರ್ಮನಿಯ ಪುರಾಣಗಳನ್ನು ಅರ್ಥಮಾಡಿಕೊಳ್ಳಲು ಈತನ ಪುಸ್ತಕಗಳು ಬಹಳ ಉಪಯುಕ್ತ ಎಂದು ಆರಕ್ಟೋಸ್ ಪ್ರಚಾರವನ್ನು ಮಾಡುತ್ತದೆ. ಈ ವಿಕರ್ನಾಸ್ ಎಂಬ ವ್ಯಕ್ತಿ ೧೯೯೦ರಲ್ಲಿ ಹಲವಾರು ಚರ್ಚ್‌ಗಳಿಗೆ ಬೆಂಕಿ ಹಚ್ಚಿದ ಅಪರಾಧಕ್ಕಾಗಿ ಜೈಲಿಗೆ ಹೋದವನು. ಈತ ತನ್ನ ಅಪರಾಧವನ್ನು ಕ್ರಿಶ್ಚಿಯಾನಿಟಿಯ ವಿರುದ್ಧ ಪೇಗನಿಸ್ಟರ ಪ್ರತೀಕಾರ ಎಂದು ಸಮರ್ಥಿಸಿಕೊಳ್ಳುತ್ತಾನೆ. ಒಬ್ಬ ಸಂಗೀತಗಾರನಾದ ಈತ ಒಮ್ಮೆ ತನ್ನ ಪ್ರತಿಸ್ಪರ್ಧಿಯೊಬ್ಬನನ್ನು ೨೩ ಬಾರಿ ಇರಿದಿದ್ದ, ೧೬ ವರ್ಷ ಜೈಲಿನಲ್ಲಿದ್ದು ಹೊರಬಂದ ಈತನನ್ನು ದೊಡ್ಡ ಪ್ರಮಾಣದ ಭಯೋತ್ಪಾದನೆಗೆ ಸಂಚು ನಡೆಸುತ್ತಿದ್ದಾನೆಂಬ ಆರೋಪದ ಮೇಲೆ ಫ್ರೆಂಚ್ ಸರ್ಕಾರ ಪುನಃ ಬಂಧಿಸುತ್ತದೆ.

ನ್ಯೂಯಾರ್ಕ್‌ನಲ್ಲಿ ಜನಿಸಿದ ಫ್ರಾಂಕ್ ಮೊರೇಲ್ಸ್ ಎಂಬುವವನು ತನ್ನನ್ನು ಶ್ರೀಧರ್ಮ ಪ್ರವರ್ತಕ ಆಚಾರ್ಯ ಎಂದು ಕರೆದುಕೊಳ್ಳುತ್ತಾನೆ. 'ಧಾರ್ಮಿಕ ರಾಷ್ಟ್ರೀಯತೆ' ಎಂಬ ಇವನ ಪುಸ್ತಕ ಒಂದು ಗೊಂದಲಗಳ ಬೀಡು, ಟ್ರಂಪ್ ಅಮೇರಿಕದ ಅಧ್ಯಕ್ಷನಾದುದನ್ನು ಈತ 'ಸುವರ್ಣ ಯುಗದ ಆರಂಭ' ಎಂದು ವರ್ಣಿಸುತ್ತಾನೆ. ಈತನಿಗೂ ಕೂಡ ಪ್ರಭಾವೀ ಹಿಂದೂವಾದಿ ನಾಯಕರ ಜೊತೆ ಸಂಪರ್ಕವಿರುವುದು ಈತ ಬಿಜೆಪಿಯ ಸುಬ್ರಹ್ಮಣ್ಯಸ್ವಾಮಿಯ ಜೊತೆ ಇರುವ ಈತನ ವೆಬ್‌ಪುಟಗಳಲ್ಲಿನ ಫೋಟೋಗಳಿಂದ ತಿಳಿದುಬರುತ್ತದೆ. ರಾಜೀವ್ ಮಲ್ಹೋತ್ರಾ ಎಂಬ ವ್ಯಕ್ತಿ ಈ ಮೋರೇಲ್ಸ್‌ನನ್ನು ಹೊಗಳುವ ಪೋಸ್ಟ್‌ಗಳು ಆತನ ವೆಬ್‌ಪುಟಗಳಲ್ಲಿ ಕಂಡುಬರುತ್ತವೆ. ಹಿಂದೂ ಪ್ರಗತಿಪರರನ್ನು 'ಸಾಮ್ರಾಜ್ಯ ಶಾಹಿ ವಂಚಕರು' ಎಂದು ನಿಂದಿಸುವ ಮೂಲಕವೇ ಪ್ರಸಿದ್ಧಿಗೆ ಬಂದವನು ಈ ಮಲ್ಹೋತ್ರ ಎಂಬ ವ್ಯಕ್ತಿ. ಒಂದು ಸ್ಕ್ರೋಲ್ ಈ ಮಲ್ಹೋತ್ರಾನನ್ನು 'ಅಂತರ್ಜಾಲ ಹಿಂದೂತ್ವದ ಪ್ರಧಾನ ತತ್ವಜ್ಞಾನಿ' ಎಂದು ವರ್ಣಿಸುತ್ತದೆ. ಮತ್ತೊಬ್ಬ ಬಿಳಿಯ ಅಮೇರಿಕನ್ ತಮಿಳುನಾಡಿನ ಸೇಲಂನಲ್ಲಿ ಆಶ್ರಮ ಸ್ಥಾಪಿಸಿಕೊಂಡಿದ್ದು, ಈತ ತನ್ನನ್ನು ಭಕ್ತಿ ವಿಕಾಸ ಸ್ವಾಮಿ ಎಂದು ಕರೆದುಕೊಳ್ಳುತ್ತಾನೆ. ಇವನು ಬರೆದಿರುವ 'ಸ್ತ್ರೀಯರು ಒಡೆಯರೋ ಅಥವಾ ತಾಯಂದಿರೋ' ಎಂಬ ಪುಸ್ತಕದಲ್ಲಿ, ಮೂಲಭೂತವಾಗಿ ಸ್ತ್ರೀಯರು ಪುರುಷರ ಗುಲಾಮರು, ಗಂಡನಿಂದ ಏಟು ತಿನ್ನುವುದೂ ಕೂಡ ಸ್ತ್ರೀಧರ್ಮ, ಹೆಣ್ಣುಮಕ್ಕಳಿಗೆ ಅಡುಗೆ ಮಾಡುವುದಕ್ಕೆ ಬೇಕಾಗುವುದಕ್ಕಿಂತ ಹೆಚ್ಚಿನ ಶಿಕ್ಷಣ ಬೇಕಾಗಿಲ್ಲ ಎಂದು ವಾದಿಸುತ್ತಾನೆ. ಹೀಗೇ ಹುಡುಕುತ್ತಾ ಹೋದರೆ ಈ ಬಲಪಂಥೀಯ ಲೇಖಕರ ಬಗ್ಗೆ ಇಂತಹ ಇನ್ನೂ ಬೇಕಾದಷ್ಟು ವಿವರಗಳು ದೊರೆಯುತ್ತವೆ.

ಜಗತ್ತಿನಾದ್ಯಂತ ಹರಡಿರುವ ಆಲ್ಟ್‌ರೈಟ್‌ನ ಸದಸ್ಯ ಗುಂಪುಗಳಿಗೆ ತಾವು ಒಗ್ಗೂಡಿ ಫೋರಂ ಮತ್ತು ಚಾಟ್‌ರೂಂ ಮಟ್ಟದಿಂದ ತಮ್ಮ ಕಾರ್ಯ ಕ್ಷೇತ್ರವನ್ನು ಸಶಕ್ತ ರಾಜಕೀಯ ಪಕ್ಷಗಳವರೆಗೆ ವಿಸ್ತರಿಸಿ ತಮ್ಮ ಕಲ್ಪನೆಯ ಸ್ವರ್ಣಯುಗವನ್ನು ಸೃಷ್ಟಿಸುವ ಇರಾದೆ ಇದೆ. ಆರ್ಕ್ಟೋಸ್‌ನ ಬಾಹುಗಳು ರಷ್ಯಾ ದೇಶಕ್ಕೂ ಕೂಡ ಚಾಚಿವೆ. ರಷ್ಯಾದ ಅಲೆಕ್ಸಾಂಡರ್ ಡುಗಿನ್ ಆರ್ಕ್ಟೋಸ್‌ನ ಒಬ್ಬ ಜನಪ್ರಿಯ ನಾಯಕ, ರಾಜಕಾರಣಿ. ಬಹುತೇಕ ಎಲ್ಲಾ ಬಲಪಂಥೀಯ ಸಂಘಟನೆಗಳೊಂದಿಗೂ ಈತನ ಸಂಪರ್ಕವಿದೆ. ಈತನನ್ನು ಇವೋಲಾನ ಬೌದ್ಧಿಕ ವಾರಸುದಾರ ಎಂದು ಪರಿಗಣಿಸಲಾಗಿದೆ. ಡುಗಿನ್‌ನ ದೃಷ್ಟಿಯಲ್ಲಿ ಪಶ್ಚಿಮದ ಉದಾರವಾದವು ಇಡೀ ಪ್ರಪಂಚವನ್ನು ವಸಾಹತನ್ನಾಗಿ ಮಾಡಿಕೊಂಡು ತನ್ನ ನಿಯಂತ್ರಣದಲ್ಲಿರಿಸಿಕೊಂಡಿದೆ. ಭಂಜಕ ಪ್ರಚಾರ (campaign of sabotage) ಮಾಡುತ್ತ ಬಿಳಿಯ ರಾಷ್ಟ್ರೀಯತೆಗಳನ್ನು ತನ್ನ ಇಚ್ಛೆಗೆ ತಕ್ಕಂತೆ ಮಣಿಸುತ್ತಿದೆ. ಉದರವಾದವೆಂಬುದು ಡುಗಿನ್ ಪ್ರಕಾರ ಬಿಳಿಯ ಜನಾಂಗವನ್ನು ನಿರ್ನಾಮ ಮಾಡುವ ವಿನಾಶಕ ಶಕ್ತಿ.

ಆರ್ಕ್ಟೋಸ್ ಎಂಬುದು ರಷ್ಯಾದ ಭೂಗೋಳಿಕ–ರಾಜಕೀಯ (geo-political) ತಂತ್ರವೊಂದರ ದೊಡ್ಡ ಮೋಸದ ಜಾಲದ ಭಾಗ. ಶೀತಲ ಯುದ್ಧದಕಾಲದಲ್ಲಿ ರಷ್ಯಾ ಈ ತಂತ್ರವನ್ನು ವ್ಯಾಪಕವಾಗಿ ಬಳಸಿದೆ. ಭವಿಷ್ಯದಲ್ಲಿ ಯುದ್ಧವೇನಾದರೂ ಸಂಭವಿಸಿದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳು ಒಗ್ಗೂಡುವುದನ್ನು ತಡೆಯುವ ತಂತ್ರದ ಭಾಗ ಇದು. ಈ ರೀತಿಯ ಮನೋಯುದ್ಧ ಮತ್ತು ಸುಳ್ಳು ಸುದ್ದಿ ಹರಡುವ (Psychological war fare and disinformation) ವಿಧಾನವನ್ನು ರಷ್ಯಾದ ಬೇಹುಗಾರಿಕಾ ಸಂಸ್ಥೆ ಕೆಜಿಬಿಯು ಹಿಂದೆಯೂ ಬಳಸಿದೆ ಎಂಬ ಅನುಮಾನವನ್ನು ವ್ಯಕ್ತಪಡಿಸುವವರೂ ಇದ್ದಾರೆ. ಆದರೆ ಈ ವಾದಕ್ಕೆ ಯಾವುದೇ ಪುರಾವೆ ಇದ್ದಂತೆ ತೋರುವುದಿಲ್ಲ.

ಆಧುನಿಕ ಅಭಿವೃದ್ಧಿ ಮಾದರಿಗಳು ಮನುಷ್ಯನನ್ನು ಪ್ರಕೃತಿಯ ಒಂದು ಭಾಗವೆಂದು ಪರಿಗಣಿಸದೆ ಅವನನ್ನು ತನ್ನ ಸುತ್ತಲ ಪ್ರಾಕೃತಿಕ ವಿದ್ಯಮಾನಗಳ ನಿಯಂತ್ರಕನೆಂಬಂತೆ ಕಂಡದ್ದರ ಪರಿಣಾಮವಾಗಿ ಮನುಷ್ಯ ಇಂದು ಒಂಟಿತನದಿಂದ, ಪರಕೀಯ ಭಾವದಿಂದ ಬಳಲುತ್ತಿದ್ದಾನೆ. ಹೀಗೆ ಆಧುನಿಕತೆಯ ಸಂತ್ರಸ್ತನಾದ ಮನುಷ್ಯ ತನ್ನ ಹತಾಶೆಯ ಪರಿಹಾರಕ್ಕಾಗಿ ಯಾವ್ಯಾವುದೋ ಮಾರ್ಗಗಳನ್ನು ಹುಡುಕುತ್ತಿದ್ದು, ಸುಲಭವಾಗಿ ಭ್ರಮೆಗಳಿಗೆ ಪಕ್ಕಾಗಬಲ್ಲವನಾಗಿದ್ದಾನೆ. ಆಧುನಿಕತೆಯಿಂದ ಭ್ರಷ್ಟವಾಗದೆ ಉಳಿದಿರುವ ಪೌರಾತ್ಯ ವಿವೇಕವು ತನ್ನ ಬಿಡುಗಡೆಯ ಸಾಧನವಾಗಬಲ್ಲದು ಎಂಬ ಭ್ರಮೆಯಲ್ಲಿ, ಪೂರ್ವಾಭಿಮುಖವಾಗಿರುವ ಮನಸ್ಸುಗಳು ಆರ್ಯ ಶ್ರೇಷ್ಠತೆಯ ನಾಜೀವಾದವನ್ನೂ ನಂಬಬಲ್ಲ ಸ್ಥಿತಿಯನ್ನು ತಲುಪಿವೆ. ಇಂದಿನ ಆರ್ಥಿಕ ನೀತಿಗಳೂ ಸಹ ಜಗತ್ತಿನ ಸಂಪತ್ತೆಲ್ಲವೂ ಕೆಲವೇ ಶ್ರೀಮಂತರ ಕೈಯಲ್ಲಿ ಕೇಂದ್ರೀಕರಣಗೊಳ್ಳುವಂತೆ ಮಾಡಿ ಜನಸಾಮಾನ್ಯರ ಬದುಕನ್ನು ದುರ್ಭರಗೊಳಿಸಿವೆ. ಮತ್ತೊಂದೆಡೆ ಇಸ್ಲಾಮಿಕ್ ರಾಷ್ಟ್ರಗಳಲ್ಲಿ ಮತಮೂಲ ಬಲಪಂಥೀಯ ಮೂಲಭೂತವಾದ ವ್ಯಾಪಿಸುತ್ತಿದ್ದು, ಈ ದೇಶಗಳಲ್ಲಿ ಜನಸಾಮಾನ್ಯರು ತಮ್ಮ ಪಾಡಿಗೆ ನೆಮ್ಮದಿಯಿಂದ ಬದುಕುವುದು ಸಾಧ್ಯವೇ ಇಲ್ಲದ ಸ್ಥಿತಿ ನಿರ್ಮಾಣವಾಗುತ್ತಿದ್ದು ನಿರಾಶ್ರಿತರಾಗಿ ವಲಸೆ ಹೊರಡುತ್ತಿರುವವರ ಸಂಖ್ಯೆ ದಿನೇ ದಿನೇ ಅಧಿಕವಾಗುತ್ತಿದೆ. ತಮ್ಮ ಸಂಕಷ್ಟಗಳಿಗೆ ನಿಜವಾದ ಕಾರಣವನ್ನು ಕಂಡುಕೊಳ್ಳಲಾರದ ಯೂರೋಪಿಯನ್ನರು, ಅಮೇರಿಕನ್ನರು, ಭಾರತದಂತಹ ಏಷ್ಯಾದ ದೇಶದ ಜನರೂ ಸಹ ಈ ವಲಸಿಗರನ್ನು ತಮ್ಮ ಸಂಕಷ್ಟಗಳ ಕಾರಣವೆಂಬಂತೆ ಕಾಣುತ್ತಾ ಬಲಪಂಥೀಯ ಹುನ್ನಾರಗಳಿಗೆ ಬಲಿಯಾಗುತ್ತಿದ್ದಾರೆ. ಹಿಂದೂ ಆಧ್ಯಾತ್ಮಿಕತೆಯ ಬಗೆಗೆ ಉಗ್ರಬಲಪಂಥೀಯರ ವ್ಯಾಮೋಹದ ವಿಚಾರ ಏನೇ ಇದ್ದರೂ, ಅಮೇರಿಕದಲ್ಲಿ ಭಾರತೀಯರ ಮೇಲೆ ನಡೆಯುತ್ತಿರುವ ದಾಳಿಗಳನ್ನು ತಡೆಯುವುದಕ್ಕೆ ಈ ವ್ಯಾಮೋಹವು ಶಕ್ತವಾಗಿಲ್ಲ ಎಂಬುದು ವಾಸ್ತವ. ಅಮೇರಿಕದಲ್ಲಿ ನೆಲೆಸಿರುವ ಹಲವು ಅನಿವಾಸೀ ಭಾರತೀಯರು ಅಲ್ಲೂ ಹಿಂದೂ ಮೂಲಭೂತವಾದವನ್ನು ಬೆಳೆಸುವ ಪ್ರಯತ್ನಗಳಲ್ಲಿ ತೊಡಗಿರುವುದು ವಾಸ್ತವ. ಈ ಹಿಂದೂಗಳು ಅಲ್ಲಿನ ಬಿಳಿಯ ರಾಷ್ಟ್ರೀಯವಾದಿಗಳ ಕೆಂಗಣ್ಣಿಗೆ ಗುರಿಯಾಗುತ್ತಿರುವುದು ಒಂದು ವಿಪರ್ಯಾಸ. ಆಸ್ಟ್ರೇಲಿಯಾ, ಬೆಲ್ಜಿಯಂ, ಬಲ್ಗೇರಿಯ ,ಬ್ರಿಟನ್, ಡೆನ್ಮಾರ್ಕ್, ಫ್ರಾನ್ಸ್ ಜರ್ಮನಿ, ಗ್ರೀಸ್, ಅಮೇರಿಕ ಹೀಗೆ ಎಲ್ಲೆಲ್ಲೂ ಬಲಪಂಥೀಯರು ಪ್ರಬಲರಾಗುತ್ತಿದ್ದಾರೆ. ಇಸ್ಲಾಂ, ಮತ್ತು ಹಿಂದೂ ಮೂಲಭೂತವಾದಗಳೆರಡಕ್ಕೂ ಪ್ರಯೋಗ ಶಾಲೆಯಾಗಿ ಭಾರತವೂ ನಲುಗುತ್ತಿದೆ. ಗಾಂಧಿ, ಬುದ್ಧ ಕಬೀರಾದಿಗಳು, ಇಲ್ಲಿ ಅಪ್ರಸ್ತುತರಾಗುತ್ತಿದ್ದಾರೆ.




**(ಲೇಖಕಿ ಕರೋಲ್ ಶಾಫರ್ ಜಗತ್ತಿನ ನವ ಬಲಪಂಥೀಯತೆಯ ವರ್ಣಪಟಲದ ಅಧ್ಯಯನ ಮತ್ತು ವರದಿಗಾರಿಕೆಯಲ್ಲಿ ತೊಡಗಿರುವ ಪೂರ್ವ ಯೂರೋಪ್ ದೇಶವೊಂದರ ಸ್ವತಂತ್ರ ಪತ್ರಕರ್ತೆಯಾಗಿದ್ದಾರೆ)**

# ಜರ್ಮನಿಯಲ್ಲಿ ನಿಂತು ಕನ್ನಡದ ಬಗ್ಗೆ ಯೋಚಿಸಿದಾಗ...

ಯುವ ಲಹರಿ

–ಸಿ. ಸದಾನಂದ




**ನ**ನಗೆ, ನಮ್ಮ ತಂದೆಯವರು ತಮ್ಮ ಸ್ವಇಚ್ಚೆಯಿಂದಲೋ, ತಾವು ನಂಬಿದ್ದ ಸಮಾಜವಾದಿ ಧೋರಣೆಯಿಂದಾಗಿಯೋ, ಕನ್ನಡ ಪ್ರಾಧ್ಯಾಪಕರಾಗಿದ್ದರಿಂದಲೋ ಅಥವಾ ಗೆಳಯ ಡಿ.ಎಸ್. ನಾಗಭೂಷಣರ ಕಠಿಣ ಆದರೆ ಪ್ರೀತಿಯ ವಾಗ್ದಾಳಿಗಳಿಂದ ತಪ್ಪಿಸಿಕೊಳ್ಳಲೋ, ಒಟ್ಟಿನಲ್ಲಿ ಒಂದನೆಯ ತರಗತಿಯಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ಓದುತ್ತಿದ್ದ ನನ್ನನ್ನು ಬಿಡಿಸಿ ಕನ್ನಡ ಮಾಧ್ಯಮಕ್ಕೆ ಸೇರಿಸಿದರು. ಏಳನೆಯ ತರಗತಿಯವರೆಗೂ ನನ್ನನ್ನು ಕನ್ನಡ ಮಾಧ್ಯಮದಲ್ಲಿ ಓದಲು ಬಿಟ್ಟರು. ಇದು ಇಪ್ಪತ್ತು ವರ್ಷಗಳ ಹಿಂದಿನ ವಿಷಯ. ಆಗ ಇಂಗ್ಲಿಷ್ ಮಾಧ್ಯಮದ ಹುಚ್ಚು ಏರುತ್ತಿದ್ದ ಕಾಲ. ಈ ದೃಷ್ಟಿಯಿಂದ ಆಗ ಕನ್ನಡ ಮಾಧ್ಯಮದಲ್ಲಿ ಓದಲು ನನಗೆ ಅವಕಾಶ ದೊರೆತದ್ದು ನನ್ನ ಅದೃಷ್ಟವೆಂದೇ ನನಗೀಗ ಅರಿವಾಗುತ್ತಿದೆ. ಏಕೆಂದರೆ ಇಂಗ್ಲಿಷ್ ಮಾಧ್ಯಮದಲ್ಲಿ ಓದಿದ ನನ್ನ ಓರಿಗೆಯ ಹುಡುಗ–ಹುಡುಗಿಯರ ಜೊತೆ ಮಾತಾಡಿದಾಗ ಕನ್ನಡ ಮಾಧ್ಯಮ ನಾನು ಸುತ್ತಲಿನ ಪರಿಸರವನ್ನು ಗ್ರಹಿಸುವ ರೀತಿಯನ್ನೇ ಬದಲಿಸಿತು ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಪ್ರೌಢಶಾಲೆಯಲ್ಲಿ ಅಂದರೆ ೮ನೇ ತರಗತಿಯಿಂದ, ನಾನು ವಿಜ್ಞಾನದ ವಿದ್ಯಾರ್ಥಿಯಾಗಬಯಸಿದ್ದರಿಂದ ಇಂಗ್ಲಿಷ್ ಮಾಧ್ಯಮಕ್ಕೆ ಸೇರಿದೆನಾದರೂ ಕನ್ನಡ ಭಾಷೆ ನನ್ನಿಂದಲೇನೂ ದೂರವಾಗಲಿಲ್ಲ. ಅದಕ್ಕೆ ಕಾರಣ, ಶಾಲೆಯಲ್ಲಿ ನಮಗೆ ಕನ್ನಡವನ್ನು ಬೋಧಿಸುತಿದ್ದ ಸುರೇಶ್ ರಾವ್ ಅತ್ತೂರರ ಸ್ವಾರಸ್ಯಕರ ತರಗತಿಗಳು. ಅವರು ಕನ್ನಡ ಒಂದು ಭಾಷೆಯಾಗಿ ನನ್ನನಲ್ಲಿ ಹುಟ್ಟಿಸಿದ್ದ ಬಗೆಗಿನ ಕುತೂಹಲವನ್ನು ಪ್ರೀತಿಯಾಗಿ ಬದಲಿಸಿದರು. ಬಹುಶಃ ಇಂದು ನಾನು ಕನ್ನಡಲ್ಲಿ ನಾಲ್ಕು ಸಾಲುಗಳನ್ನು ಬರೆಯಲಿಕ್ಕೆ ಸಾಧ್ಯವಾಗಿರುವುದು ಇವೆಲ್ಲದುದರ ಒಟ್ಟು ಪರಿಣಾಮ.

ಸುತ್ತಲಿನ ಪರಿಸರವನ್ನು ಬೆರಗುಗಣ್ಣಿನಿಂದ ಕುತೂಹಲಿಯಾಗಿ ನೋಡುತ್ತಿದ್ದ ನನಗೆ ಹರಿದು ಬರುತ್ತಿದ್ದ ಹೊಸ ವಿಚಾರಗಳನ್ನು ಅರ್ಥೈಸಿಕೊಳ್ಳುವುದು ಮತ್ತು ಅರ್ಥೈಸಿಕೊಂಡ ವಿಚಾರಗಳನ್ನು ಮನಸ್ಸಿನ ಆಳದಲ್ಲಿ ದಾಖಲಿಸಿಕೊಳ್ಳುವುದು ಎಲ್ಲವೂ ನನ್ನ ಮಾತೃಭಾಷೆಯಲ್ಲಿಯೇ ಆಗಿದ್ದುದರಿಂದ ನನಗೆ ಸಮಾಜದೊಂದಿಗೆ ಸಂವಾದಿಸುವ ವಿಷಯದಲ್ಲಿ ಹೆಚ್ಚು ವಿಶ್ವಾಸ ಮತ್ತು ಮುಕ್ತತೆ ಒದಗಿಬಂದಿತು. ಇದು ಕನ್ನಡವನ್ನು ಕೇವಲ ಒಂದು ಭಾಷೆಯಾಗಿ ನೋಡದೇ, ಭಾಷೆಗೆ ಜೀವ ತುಂಬಿ ನನ್ನ ಗೆಳಯನ್ನನ್ನಾಗಿ ಮಾಡಿಬಿಟ್ಟಿತು. ಶಾಲೆಯಲ್ಲಿ ಪಡೆಯುವ ಜ್ಞಾನದ ಭಾಷೆ, ವ್ಯಾವಹಾರಿಕ ಭಾಷೆ ಎರಡೂ ಮಾತೃಭಾಷೆಯೇ ಆದ ಕಾರಣ ಹರಿದು ಬರುತ್ತಿದ್ದ ಶೈಕ್ಷಣಿಕ ವಿಚಾರಗಳನ್ನು ಇದು ಶಾಲೆಯ ಕಲಿಕೆ, ಇದು ಮನೆಯ ಕಲಿಕೆ, ಇದು ವ್ಯವಹಾರದ ಕಲಿಕೆ, ಇದು ಜೀವನದ ಕಲಿಕೆ ಎಂದು ಬೇರ್ಪಡಿಸಿ ನೋಡದೆ ಎಲ್ಲವನ್ನು ಒಟ್ಟಾರೆಯಾಗಿ ನೋಡುವ ಬದುಕಿನೊಡನೆಯ ಕರುಳುಬಳ್ಳಿ ಭಾವ ನನ್ನಲ್ಲಿ ಬೆಳೆಯಿತು. ಇದರಿಂದಾಗಿ ಒಂದು ವಿಷಯವನ್ನು ಹಲವಾರು ದೃಷ್ಟಿಕೋನಗಳಿಂದ ಅರ್ಥ ಮಾಡಿಕೊಳ್ಳುವ ಪ್ರವೃತ್ತಿ ಮತ್ತು ಧೈರ್ಯ ನನ್ನಲ್ಲಿ ಬೆಳೆಯಿತು. ಮಾತೃಭಾಷೆಯಾದ ಕನ್ನಡ ನನ್ನ ಮೇಲೆ ಬೀರಿದ ಈ ಪ್ರಭಾವ, ಅಂದು ನನಗೆ ಕಿಂಚಿತ್ತು ಅರ್ಥವಾಗದಿದ್ದರೂ ಇಪ್ಪತ್ತೈದು ವರ್ಷಗಳ ನಂತರ ಜರ್ಮನ್ ಭಾಷೆಯನ್ನು ತಕ್ಕಮಟ್ಟಿಗೆ ಕಲಿತು ಜರ್ಮನಿಯಲ್ಲಿ ಎರಡೂವರೆ ವರ್ಷ ಬಾಳಿ, ಅವರುಗಳು ತಮ್ಮ ಭಾಷೆಗೆ ಕೊಡುವ ಪ್ರಾಮುಖ್ಯತೆಯನ್ನು ನೋಡಿದ ಮೇಲೆ ನನಗೆ ಅರ್ಥವಾಯಿತು.

ಜರ್ಮನರು ಎಷ್ಟು ಭಾಷಾಭಿಮಾನಿಗಳು ಎನ್ನುವುದನ್ನು ಬಹುಶಃ ಒಂದು ಉದಾಹರಣೆಯ ಮೂಲಕ ಹೇಳಿದರೆ ಹೆಚ್ಚು ಸಮಂಜಸವಾಗುವುದು. ಒಮ್ಮೆ ಬೆಲ್ಜಿಯಮ್ಮಿಗೆ ಬಂದಿದ್ದ ನನ್ನ ಅಣ್ಣನನ್ನು ಭೇಟಿಯಾಗಿ ನಾನು ವಾಸವಾಗಿರುವ ಆಕೆನ್ ಪಟ್ಟಣಕ್ಕೆಗೆ ವಾಪಸ್ಸು ತೆರಳುತ್ತಿದ್ದೆ. ಅದೇ ಸಮಯಕ್ಕೆ ಸರಿಯಾಗಿ ಜರ್ಮನಿಯಲ್ಲಿ ಚುನಾವಣೆಗಳು ಮುಗಿದು ಹೊಸ ಸಂಪುಟ ರಚನೆಯಾಗಿತ್ತು. ನನ್ನ ರಾಜ್ಯದ ಪ್ರೆಸಿಡೆಂಟ್ ಸ್ಟೈನ್ಮಯೆರ್ ಅಂದು ಆಕೆನ್‌ಗೆ ಭೇಟಿ ನೀಡುತ್ತಿದ್ದುದರಿಂದ ಎಲ್ಲೆಡೆ ಸೆಕ್ಯೂರಿಟಿ ಬಹಳ ಬಿಗಿಯಾಗಿತ್ತು. ರೈಲಿನಿಂದಿಳಿಯುವ ಜನರ ಪೈಕಿ ಸ್ವಲ್ಪ ನನ್ನಂತೆ ಕೆಂದಗೆ ಕಾಣುವುವವರನ್ನು, ಅನುಮಾನ ಬರುವವರನ್ನು ತೀವ್ರ ತಪಾಸಣೆಗೆ ಒಳಪಡಿಸಿದ್ದರು. ಅಂತೆಯೇ ಕೂದಲು, ಗಡ್ಡ ಬಿಟ್ಟುಕೊಂಡಿದ್ದ ನನ್ನನ್ನು ಕೂಡ 'ಬಾರಪ್ಪ ರಾಜ ಸೈಡ್ಗೆ' ಅಂತ ನಮ್ಮ ಪೋಲೀಸಿನವರು ಡ್ರಿಂಕ್ ಅಂಡ್ ಡ್ರೈವ್ ತಪಾಸಣೆ ಮಾಡುವಂತೆ ಟ್ರೈನ್ ಇಳಿಯುತ್ತಿದ್ದಂತೆ ತಮ್ಮ ಪಕ್ಕಕ್ಕೆ ಹಾಕಿಕೊಂಡರು. ನನ್ನಂತೆಯೇ ಇತರೆ ಕೆಲವರನ್ನು ಅಲ್ಲಿ ತಪಾಸಣೆಯ ಮೇರೆಗೆ ಇರಿಸಿಕೊಂಡಿದ್ದನ್ನು ನೋಡಿ ತಪಾಸಣೆ ಕನಿಷ್ಟವೆಂದರೂ ಒಂದು ಅರ್ಧ ಗಂಟೆಯಾದರೂ ತಗೆದುಕೊಳ್ಳುವುದೆಂದು ನಾನು ಮನಸಿನಲ್ಲಿಯೇ ಯೋಚಿಸತೊಡಗಿದೆ. ಆದರೆ ಆಶ್ಚರ್ಯವೆನ್ನುವಂತೆ ನಾನು ಜರ್ಮನ್ ಭಾಷೆಯಲ್ಲಿ ಮಾತನಾಡಿದ ಕೂಡಲೇ ಪ್ರಶ್ನೆ ಕೇಳುತ್ತಿದ್ದ ಅಧಿಕಾರಿಯ ಹಾವ ಭಾವವೇ ಬದಲಾಗಿ ನೀವಿನ್ನು ಹೋಗಬಹುದೆಂದು ಬಿಡಬೇಕೆ! ತಮ್ಮ ಭಾಷೆ ಮಾತನಾಡುವ ಒಬ್ಬ ಪರಕೀಯನನ್ನು ತಪಾಸಣೆಯಿಲ್ಲದೆ ನಂಬುವಷ್ಟರ ಮಟ್ಟಿಗೆ ಇವರು ತಮ್ಮ ಭಾಷೆಯನ್ನು ಪ್ರೀತಿಸುತ್ತಾರೆ ಎನ್ನಬಹುದು.

ಬಹುಶಃ ನನಗೆ ಜರ್ಮನಿಯ ಅನುಭವ ಆಗದಿದ್ದರೆ, ಇಂಗ್ಲಿಷ್ ಜಗತ್ತಿನ ಹಲವು ಭಾಷೆಗಳಲ್ಲಿ ಅದೂ ಒಂದು ಭಾಷೆಯಷ್ಟೇ ಎಂದು ನಾನು ಜೀವಮಾನದಲ್ಲಿ ಅರ್ಥ ಮಾಡಿಕೊಳ್ಳುತ್ತಿರಲಿಲ್ಲ. ಜರ್ಮನರು ಎಲ್ಲ ವಿಷಯಗಳಲ್ಲೂ ಉನ್ನತ ಶಿಕ್ಷಣ, ಸಂಶೋಧನೆ, ಪತ್ರವ್ಯವಹಾರ, ಗಣಕ ನಿರ್ವಹಣೆ ಎಲ್ಲವನ್ನೂ ಜರ್ಮನ್ ಭಾಷೆಯಲ್ಲಿಯೇ ನಡೆಸುವುದನ್ನು ಕಂಡಿದ್ದೇನೆ. ಇಲ್ಲಿ ಇಂಗ್ಲಿಷ್ ದಿನ ಪತ್ರಿಕೆಯನ್ನು ಓದಬೇಕೆಂದರೆ ಹುಡುಕಿಕೊಂಡು ಹೋಗಬೇಕಾಗುತ್ತದೆ! ನಾನು ಇಂಗ್ಲಿಷನ್ನು ತಲೆ ಕುಣಿಸುತ್ತಾ ಪಟಪಟನೆ ಮಾತನಾಡುತ್ತೇನೆ; ನನ್ನನ್ನು ಇತರರು ಜಗತ್ತಿನೆಲ್ಲೆಡೆ ಗೌರವಿಸುತ್ತಾರೆಂದು ಯಾರಾದರು ಮೆರೆಯುತ್ತಿದ್ದರೆ ಅಂತಹವರು ಯೂರೋಪ್‌ಗೆ ಬರಬೇಕು! ಪ್ರತಿ ಹಂತದಲ್ಲೂ ಅವರ ಸೊಕ್ಕು ಮುರಿದು ಮೂಲೆಗೆಸೆಯುತ್ತಾರೆ. ಬಹುತೇಕರಿಗೆ ಇಂಗ್ಲಿಷ್ ಬಂದರೂ, ತಮ್ಮ ತಮ್ಮ ಭಾಷೆಯಲ್ಲಿಯೇ ವ್ಯವಹರಿಸುವುದು ಅವರುಗಳಿಗೆ ಪ್ರಿಯ ಮತ್ತು ಹೆಮ್ಮೆ. ಅವರುಗಳಿಗೆ ಭಾಷೆ ಕೇವಲ ಒಂದು ಸಂಪರ್ಕ ಮಾಧ್ಯಮವಲ್ಲ. ಅದು ಒಂದು ಸಂಬಂಧ–ನೆಂಟಸ್ತನವೆನ್ನಿಸುತ್ತದೆ. ಆದರೆ ನಾವು ವಸಾಹತುಶಾಹಿ ಭಾಷೆಯ ಗುಲಾಮರಾಗಿದ್ದೇವೆ.

ಈ ಹಿನ್ನಲೆಯಲ್ಲಿ ನಾನು ಬಹಳಷ್ಟು ಬಾರಿ ನಮ್ಮ ಕನ್ನಡದ ಬಗ್ಗೆ ಯೋಚಿಸುವುದುಂಟು. ಹೋಲಿಸಿ ನೋಡಿದಾಗ ಬಹಳ ಪ್ರಶ್ನೆಗಳು ನನ್ನಲ್ಲಿ ಮೂಡಿಬರುತ್ತವೆ. ಕರ್ನಾಟಕದಲ್ಲಿ ಕನ್ನಡ ಕೇವಲ ಸಾಹಿತ್ಯದಲ್ಲಿ ಮಾತ್ರ ಏಕೆ ಬೆಳವಣಿಗೆ ಹೊಂದಿತು? ವಿಜ್ಞಾನ, ಅರ್ಥಿಕ ಮತ್ತು ವ್ಯವಹಾರ ರಂಗಗಳಲ್ಲಿ ಅದೇಕೆ ಕನ್ನಡದ ಬಳಕೆ ಪ್ರಾಥಮಿಕ ಹಂತಕ್ಕೆ ಮಾತ್ರ ಸೀಮಿತವಾಗಿದೆ ಮತ್ತು ಆಗುತ್ತಿದೆ? ಪದವಿ ಪೂರ್ವ ಹಂತದಿಂದ ಮುಂದಕ್ಕೆ ವಿಜ್ಞಾನ ಪಠ್ಯಗಳು ಕನ್ನಡದಲ್ಲಿ ಏಕೆ ನಿಂತುಹೋಗುತ್ತವೆ? ಸರ್ಕಾರಕ್ಕೆ ಕಣ್ಣು ಕಿವಿ ಸಂವೇದನಾಂಗಗಳು ಇಲ್ಲವೇ? ಜಾಗತೀಕರಣ ಕನ್ನಡವನ್ನು ನಾಶ ಮಾಡುತ್ತಿದೆಯೇ? ಕನ್ನಡದ ಶಿಕ್ಷಣ ಮಾಧ್ಯಮದ ಹಿನ್ನಡೆಗೆ ಕುಟುಂಬಗಳು ಮತ್ತು ಸರ್ಕಾರ ಉಭಯತರರೂ ಕಾರಣರಾಗಿದ್ದಾರೆಯೇ? ಕನ್ನಡವನ್ನು ಬೆಳೆಸುವ ಕಾರ್ಯದಲ್ಲಿ ನಮ್ಮ ಪೋಷಕರ ನಿರಾಸಕ್ತಿ ಕೂತಿರುವ ಮರವನ್ನೇ ಕಡಿದು ಹಾಕುವುದಕ್ಕೆ ಸಮಾನವಲ್ಲವೇ? ಇದೇಕೆ ನಮ್ಮ ಹಿರಿಯರಿಗೆ, ಕರ್ನಾಟಕದ ಆಡಳಿತಗಾರರಿಗೆ ಅರ್ಥವಾಗುವುದಿಲ್ಲ? ಸೋಲುತ್ತಿದ್ದಾರೆಯೇ? ಕನ್ನಡದೊಂದಿಗಿನ ಈ ಸಂಬಂಧವನ್ನು ನಮ್ಮ ಬೌದ್ಧಿಕ ಬೆಳವಣಿಗೆಯ ಯಾವ ಕಾಲಘಟ್ಟದಲ್ಲಿ ಮಾರಿಕೊಳ್ಳುತ್ತೇವೆ ? ಏಕೆ? ಜರ್ಮನಿಯಲ್ಲಿ ಜರ್ಮನ್ ಭಾಷೆಗೆ ಇರುವ ಸ್ಥಾನಮಾನ ಕರ್ನಾಟಕದಲ್ಲಿ ಕರ್ನಾಟಕದಲ್ಲೇಕೆ ಇಲ್ಲ? ಕನ್ನಡ ಜರ್ಮನ್ ಭಾಷೆಗಿಂತ ಏನು ಕಡಿಮೆ ಇದೆ? ಯಾರಾದರೂ ಉತ್ತರ ಹೇಳೀಯಾರೇ?



**(ಮೂಲತಃ ಭದ್ರಾವತಿಯ ಹುಡುಗನಾದ ಸಿ. ಸದಾನಂದ ಬೆಂಗಳೂರಿನಲ್ಲಿ ಕೆಲ ವರ್ಷಗಳ ಕಾಲ ಇಂಜಿನಿಯರ್ ಆಗಿ ದುಡಿದು ಕಳೆದ ಎರಡೂವರೆ ವರ್ಷಗಳಿಂದ ಜರ್ಮನಿಯ ಆಕೆನ್‌ನಲ್ಲಿ ಸ್ನಾತಕೋತ್ತರ. ಪದವಿಗಾಗಿ ಅಭ್ಯಾಸ ಮಾಡುತ್ತಿದ್ದಾರೆ)**

.

ಚುನಾವಣಾ ವಿಶ್ಲೇಷಣೆ–೧

# ಸಿದ್ಧರಾಮಯ್ಯನವರ ಸಾಮಾಜಿಕ ನ್ಯಾಯದ ಫಲಾನುಭವಿಯಾದ ಕುಮಾರಸ್ವಾಮಿ

**–ಡಿ.ಎಸ್. ನಾಗಭೂಷಣ**




**ಈ** ಬಾರಿಯ ಕರ್ನಾಟಕ ವಿಧಾನಸಭಾ ಚುನಾವಣೆಯು ಮೋದಿ ರಾಜಕಾರಣದ ಭವಿಷ್ಯದ ಜೊತೆಗೆ ತಳುಕು ಹಾಕಿಕೊಂಡಿರುವ ಕಾಂಗ್ರೆಸ್‌ನ ಭವಿಷ್ಯದ ದೃಷ್ಟಿಯಿಂದ ಮತ್ತು ಇದರ ಜೊತೆಗೆ ತಳುಕು ಹಾಕಿಕೊಂಡಿರುವ ಬಿಜೆಪಿಯೇತರ ಪಕ್ಷಗಳ ರಾಷ್ಟ್ರೀಯ ರಂಗದ ಸಾಧ್ಯತೆಗಳ ಕಾರಣಗಳಿಗಾಗಿ ಮಹತ್ವ ಪಡೆದಿತ್ತಾದರೂ, ರಾಜ್ಯಮಟ್ಟದಲ್ಲಿ ಅದು ಆಸಕ್ತಿ ಕೆರಳಿಸಿದ್ದುದು ಬಿಜೆಪಿಯ ಹಿಂದುತ್ವದ ರಾಜಕಾರಣದ ಎದುರಿಗೆ ಸಿದ್ಧರಾಮಯ್ಯನವರ ಸಾಮಾಜಿಕ ನ್ಯಾಯದ ರಾಜಕಾರಣ ಹೇಗೆ ಸೆಣಸೀತು ಎಂಬ ಕುತೂಹಲದಿಂದಾಗಿ. ಬಿಜೆಪಿ ತನ್ನ ಮೋದಿ ಅವತರಣಿಕೆಯಲ್ಲಿ ಚುನಾವಣೆಗಳ ಸಂದರ್ಭಗಳಲ್ಲಿ ನೇರವಾಗಿ ಹಿಂದುತ್ವದ ಪ್ರಸ್ತಾಪ ಮಾಡದಿರುವ ಇತ್ತೀಚಿನ ಪ್ರವೃತ್ತಿಯಂತೆಯೇ ಈ ಚುನಾವಣೆಗಳಲ್ಲೂ ಹಿಂದುತ್ವಕ್ಕೆ ಒತ್ತು ಕೊಡದೆ ಅಭಿವೃದ್ಧಿಯ ಮಂತ್ರ ಪಠಿಸಿತಾದರೂ ಸಿದ್ಧರಾಮಯ್ಯ ಮತ್ತು ಅವರ ಬೆಂಬಲಕ್ಕೆ ನಿಂತ ಸ್ವಘೋಷಿತ ಪ್ರಗತಿಪರರ ಪಡೆ ಅದನ್ನು ಹಿಂದುತ್ವ v/s ಸಾಮಾಜಿಕ ನ್ಯಾಯ ಎಂದೇ ಬಿಂಬಿಸಿದ್ದಂತೂ ನಿಜ.

ಈ ಸಮರದಲ್ಲಿ ೨೨೨ ಸ್ಥಾನಗಳಲ್ಲಿ ೧೦೪ ಸ್ಥಾನ ಗಳಿಸಿದ ಬಿಜೆಪಿ ಗೆದ್ದಿತೆಂದೂ ೭೮ ಸ್ಥಾನ ಗಳಿಸಿದ ಕಾಂಗ್ರೆಸ್ ಸೋತಿತೆಂದೂ– ಇವುಗಳ ನಡುವಣ ಅಂತರ ೨೬ರಷ್ಟು ಇದ್ದರೂ–ಅಂಕಿ–ಸಂಖ್ಯೆಯ ದೃಷ್ಟಿಯಿಂದಲೂ ಖಚಿತವಾಗಿ ಹೇಳಲಾಗದು. ಏಕೆಂದರೆ ಈ ಚುನಾವಣೆಯ ಮತಗಳಿಕೆಯಲ್ಲಿ ಕಾಂಗ್ರೆಸ್ (ಶೇ. ೩೮) ಬಿಜೆಪಿ ಮತಗಳಿಕೆಗಿಂತ(ಶೇ.೩೬.೨) ಶೇ ೧.೮ರಷ್ಟು ಮುಂದಿದೆ ಆದರೂ ಕಾಂಗ್ರೆಸ್ ನಾವು ಅಳವಡಿಸಿಕೊಂಡಿರುವ ಪ್ರಾತಿನಿಧಿಕ ಪ್ರಜಾಪ್ರಭುತ್ವದಲ್ಲಿ ಕ್ಷೇತ್ರಾವಾರು ಸೋಲು–ಗೆಲುವುಗಳೇ ಲೆಕ್ಕಕ್ಕೆ ಬರುವುದರಿಂದ ಸೋತಿದೆಯೆಂದೇ ಹೇಳಬೇಕು, ಅದು ಈ ಸೋಲು–ಗೆಲುವುಗಳ ಲೆಕ್ಕಾಚಾರದ ಗೊಂದಲದ ಲಾಭ ಪಡದು ಮೂರನೇ ಸ್ಥಾನದಲ್ಲಿದ್ದರೂ ಅಧಿಕಾರದ ಮುಂಚಣಿಯಲ್ಲಿ ಕಾಣಿಸಿಕೊಂಡ ಜೆಡಿಎಸ್ ಜೊತೆಗೆ ಅಧಿಕಾರ ಹಂಚಿಕೊಂಡಿದ್ದರೂ. ಕಾಂಗ್ರೆಸ್ಸಿನ ಈ ಸೋಲು ನಮಗೆ ನಿಜವೂ ಅನ್ನಿಸತೊಡಗಿರವುದು ಅದು ತನ್ನ ಅಧಿಕಾರವನ್ನು ಉಳಿಸಿಕೊಳ್ಳಲಾಗದೆ ರಾಜ್ಯದ ಒಂದು ಭಾಗದಲ್ಲಿ ತನ್ನ ಪ್ರಬಲ ಎದುರಾಳಿಯೇ ಆಗಿ ತನ್ನ ಈ ಸೋಲಿಗೆ ಕಾರಣವಾದ ಪಕ್ಷದ ಜೊತೆ ಅಧಿಕಾರ ಹಂಚಿಕೊಳ್ಳುವ ಸ್ಥಿತಿಗೆ ತುತ್ತಾಗಿರುವುದರಿಂದ.

ಹೀಗಾಗಿ ಕಾಂಗ್ರೆಸ್ಸಿನ ಈ ಸೋಲು ಅದರ ಈ ಬಾರಿಯ ಅಧಿಕಾರ ರಾಜಕಾರಣದ ಲಾಂಛನವಾಗಿದ್ದ ಸಾಮಾಜಿಕ ನ್ಯಾಯ ರಾಜಕಾರಣದ ಸೋಲು ಎಂದೇ ಅರ್ಥೈಸಬೇಕಾಗಿದೆ. ಈ ಸೋಲು ಕಾಂಗ್ರೆಸ್ ಪಕ್ಷದ ದೃಷ್ಟಿಯಿಂದಲ್ಲದಿದ್ದರೂ ಕನಿಷ್ಟ ಸಿದ್ಧರಾಮಯ್ಯನವರ ಅಭಿಮಾನಿ ಬಳಗದ ದೃಷ್ಟಿಯಿಂದಲಾದರೂ ಅನಿರೀಕ್ಷಿತ ಮತ್ತು ಅನ್ಯಾಯದ ಸೋಲು. ಏಕೆಂದರೆ ಇವರ ಪ್ರಕಾರ ಸಿದ್ಧರಾಮಯ್ಯ ರಾಜ್ಯದ ಜನಸಂಖ್ಯೆಯ ಬಹು ದೊಡ್ಡಭಾಗವನ್ನೊಳಗೊಂಡ 'ಅಹಿಂದ' ಒಕ್ಕೂಟದ ಹಿತ ಕಾಪಾಡುವ ರಾಜಕಾರಣದ ಸುತ್ತಲೇ ತಮ್ಮ ರಾಜಕಾರಣ ಮಾಡಿದ್ದರು. ಆದರೆ ಅದೇ ಮತ್ತು ಅದು ಉಂಟು ಮಾಡಿದ ಹಲವು ಆತಂಕಗಳು ಮತ್ತು ಕುರುಡುಗಳೇ ಅವರ ಸೋಲಿಗೆ ಕಾರಣವಾಯಿತೆಂಬುದನ್ನು ಇವರು ನಂಬಲಾರರು. ಏಕೆಂದರೆ ಇದು ಹಳೆಯ, ತುಕ್ಕು ಹಿಡಿದ ಸೈದ್ಧಾಂತಿಕ ಮತ್ತು ಆವಾಹಿತ ಭಾವನಾತ್ಮಕತೆಗಳ ಸರಳ ಲೆಕ್ಕಾಚಾರದ ರಾಜಕಾರಣವಾಗಿತ್ತು.

ಅಹಿಂದ ಜಾತಿಗಳಿಗೆ ಸೇರಿದವರೆಲ್ಲರೂ ಸಾರಾ ಸಗಟಾಗಿ ಮೂಲಭೂತ ಅಗತ್ಯಗಳು ಮತ್ತು ಅವಕಾಶಗಳಿಂದ ವಂಚಿತವಾಗಿ ಇವರು ಕರುಣಿಸಿದ 'ಭಾಗ್ಯ'ಗಳಿಗಾಗಿಯೇ ಕಾದು ಕೂತು ಅವು ದೊರೆತೊಡನೆ ಕೃತಜ್ಞತಾಪೂರ್ವಕವಾಗಿ ಈ ಭಾಗ್ಯಗಳ ಹಿಂದಿರುವ ಜಾತಿ ರಾಜಕಾರಣವನ್ನು ಕಣ್ಮುಚ್ಚಿ ಒಪ್ಪಿ ಅದರಲ್ಲಿ ಬಂಧಿತರಾಗಿ ಉಳಿಯುವರೆಂದೂ ಮತ್ತು ಉಳಿಯಬೇಕೆಂದೂ ಈ ರಾಜಕಾರಣದ ನಿರೀಕ್ಷೆಯಾಗಿತ್ತು. ಆದರೆ ಈ ಅಹಿಂದ ರಾಜಕಾರಣಕ್ಕೆ ಆಧಾರವಾದ ಜಾತಿ ಪ್ರಜ್ಞೆಯನ್ನು ಅದು ಸರಳೀಕರಿಸಿಕೊಂಡು ಚಾರಿತ್ರಿಕವಾಗಿ ವಂಚಿತ ಜಾತಿಗಳೆಲ್ಲವೂ ಸದಾ ಕಾಲಕ್ಕೂ ವಂಚಿತ ಜಾತಿಗಳ ಹಣೆಪಟ್ಟಿಯೊಂದಿಗೆ ಆಯಾ ಜಾತಿ ಬಂಧನಗಳಲ್ಲೇ ಉಳಿಯಬಯಸುತ್ತವೆಂದು ನಿರೀಕ್ಷಿಸುವುದು ಆಧುನಿಕ ಸಮಾಜದ ಒತ್ತಡಗಳ ಮಧ್ಯದ ಮಾನವನ ಸ್ವಭಾವದ ಸಂಕೀರ್ಣತೆಗಳ ನಿರಾಕರಣೆಯೇ ಆಗುತ್ತದೆ.



ಸಿದ್ಧರಾಮಯ್ಯನವರೇ ಹಲವು ಬಾರಿ ಲೋಹಿಯಾ ಸಮಾಜವಾದದ ತಮ್ಮ ತಿಳುವಳಿಕೆಯಿಂದ ಹೇಳುತ್ತಿದ್ದ, ಈ ಸಮಾಜದಲ್ಲಿ ಜಾತಿ ಜೀವಂತವಾಗಿದ್ದು ಅದೇ ನಿರ್ಣಾಯಕ ಎಂಬ ಮಾತು ಅರ್ಧ ಸತ್ಯದ ಮಾತು ಮಾತ್ರ.. ಜಾತಿ ಪ್ರಜ್ಞೆ ಜಾಗೃತವಾಗಿರುವ ಸಾಮಾಜಿಕ ನ್ಯಾಯದ ಈ ಕಾಲದಲ್ಲಿ ಸರ್ಕಾರದ ಸೌಲಭ್ಯಗಳು ಜಾತ್ಯಸ್ಥನನ್ನು ಜಾತಿಗೆ ಬಂಧಿಸುವುದಾದರೂ, ಈ ಸೌಲಭ್ಯಗಳು ಅವನ ವ್ಯಕ್ತಿತ್ವದ ಒಂದು ಭಾಗವನ್ನು ಮಾತ್ರ ಬಿಡುಡೆಗೊಳಿಸುವುದು ಎಂಬ ಸತ್ಯವೂ ಗೋಚರವಾಗತೊಡಗಿದೊಡನೆ ಅವನು ಜಾತಿ ಬಂಧನದಿಂದ ಬಿಡುಗಡೆಗೊಳ್ಳಲೂ ತುಡಿಯತೊಡಗುತ್ತಾನೆ. ಸಿದ್ಧರಾಮಯ್ಯನವರ ಸಾಮಾಜಿಕ ನ್ಯಾಯದ ರಾಜಕಾರಣ ಲೋಹಿಯಾ ಸಮಾಜವಾದ ಹೇಳುವ ಈ ಸತ್ಯವನ್ನು ಅರಿಯುವ ಪ್ರಯತ್ನವನ್ನೇ ಮಾಡಲಿಲ್ಲ. ಹಾಗಾಗಿ ಇದು ಜನರನ್ನು ಜಾತಿಯಲ್ಲೇ ಬಂಧಿಸಿಡುವ ಮತ್ತು ಸಹಜ ಮಾನವ ಘನತೆ ಇರುವ ಯಾರಾದರೂ ಹೇಸುವ ರಾಜಕಾರಣವಾಗಿತ್ತು.

ಸಿದ್ಧರಾಮಯ್ಯ ವಿವಿಧ ಭಾಗ್ಯಗಳಂತಹ ಜನಕಲ್ಯಾಣ ಕಾರ್ಯಕ್ರಮಗಳ ಜೊತೆಜೊತೆಗೇ ಸಂಘಟಸಿದ ಜಾತಿ ಸಮ್ಮೇಳನಗಳು, ಜಾತಿಗೊಬ್ಬ ಪೌರಾಣಿಕ/ಐತಿಹಾಸಿಕ ನಾಯಕನನ್ನು ಗುರುತಿಸಿ ಸಾಲುಸಾಲಾಗಿ ಸರ್ಕಾರದ ವತಿಯಿಂದ ಆಚರಿಸತೊಡಗಿದ ಜಯಂತಿಗಳು ಮತ್ತು ಜಾತಿ ಹೆಸರಿನಲ್ಲಿ ಅಭಿವೃದ್ಧಿ ನಿಗಮಗಳ ಸ್ಥಾಪನೆ ಇಂತಹ ರಾಜಕಾರಣದ ಪ್ರಯತ್ನಗಳು. ಇವನ್ನೆಲ್ಲ ಜಾತಿಯ ಅರ್ಹತೆಯೇ ತಮ್ಮ ಇತರೆಲ್ಲ ಅರ್ಹತೆಗಳಗಿಂತ ತಮ್ಮನ್ನು ಸಾಮಾಜಿಕವಾಗಿ ಉನ್ನತೀಕರಿಸಬಹುದೆಂದು ನಂಬಿದ ಜಾತಿವ್ಯಸನಿಗಳ ಹೊರತಾಗಿ ಇನ್ನಾರೂ ಸಾಮಾಜಿಕ ನ್ಯಾಯದ ಕಾರ್ಯಕ್ರಮಗಳೆಂದು ಭಾವಿಸಿರಲಾರರು. ಇಂತಹವರ ಸಂಖ್ಯೆ ಗಣನೀಯವೇ ಆಗಿದ್ದುದರಿಂದ ಸಿದ್ಧರಾಮಯ್ಯನವರೂ ನಂಬಿದರು! ಅವರನ್ನು ಸುತ್ತುವರಿದುಕೊಂಡು ಅವರಿಗೆ ಸಲಹೆ ನೀಡುತ್ತಿದ್ದ ಜನರನ್ನು ನೋಡಿದರೇ ಸಿದ್ಧರಾಮಯ್ಯನವರ ಸಾಮಾಜಿಕ ನ್ಯಾಯದ ದೌರ್ಬಲ್ಯ ಅರ್ಥವಾಗುತ್ತದೆ. ಇತರರಿರಲಿ, ಜಾತಿ ಮೀರಬಯಸುವ ಅಥವಾ ಮೀರಿದ ಅಹಿಂದರು ಕೂಡ ಅವರ ಬಳಿ ಹೋಗಲು ಹಿಂಜರಿಯುವಂತಾಯಿತು. ಇದರಿಂದಾಗಿ ಸರ್ಕಾರದ ಸಾಂಸ್ಕೃತಿಕ ರಾಜಕಾರಣವೂ ಜಾತಿಮಯವಾಗಿ ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿತು..ಸರ್ಕಾರದ ಸಾಂಸ್ಕೃತಿಕ ರಾಜಕಾರಣ ತನ್ನ ಘನತೆಯನ್ನು ಕಳೆದುಕೊಳ್ಳುವುದೆಂದರೆ ಸರ್ಕಾರದ ಘನತೆಯೂ ಚಿಂದಿಚಿಂದಿಯಾದಂತೆ ಎಂದು ಸಿದ್ಧರಾಮಯ್ಯನವರಿಗೆ ಹೇಳಬಲ್ಲವರು ಅವರ ಬಳಿ ಯಾರೂ ಇಲ್ಲದಂತಾಗಿತ್ತು.

ಸಿದ್ಧರಾಮಯ್ಯನವರ ರಾಜಕೀಯ ತಾತ್ವಿಕತೆಯ ಹಿನ್ನೆಲೆ ಬಲ್ಲ ಯಾರೂ ಅವರಿಂದ ಇಂತಹ ಸಾಮಾಜಿಕ ನ್ಯಾಯದ ರಾಜಕಾರಣವನ್ನು ನಿರೀಕ್ಷಿಸಿರಲಿಲ್ಲ. ಇವರ ಆಡಳಿತದಲ್ಲಿ ಕರ್ನಾಟಕದ ಸಮಾಜ ಹಿಂದೆಂದೂ ಇಲ್ಲದಷ್ಟು ಬಿಗುವಿನ ಜಾತಿ ಗುಂಪುಗಳಾಗಿ ಒಡೆದುಹೋಯಿತೆಂದೇ ಹೇಳಬೇಕು. ಇದರ ಪರಿಣಾಮವಾಗಿ ಅಹಿಂದೇತರ ಜಾತಿಗಳ ರಾಜಕೀಯ ಸಂಘಟನೆಯ ಚಟುವಟಿಕೆಗಳು ಬಿರುಸಾದವು. ಮುಖ್ಯವಾಗಿ ಸಿದ್ಧರಾಮಯ್ಯವರ ಜೊತೆಗೇ ಇದ್ದ ಒಕ್ಕಲಿಗರ ಒಂದು ಜಾತ್ಯತೀತ ಗುಂಪು ಕೂಡ ಅಹಿಂದ ರಾಜಕಾರಣದ ಉಪಉತ್ಪತ್ತಿಯಾಗಿದ್ದ 'ಕು(ರುಬ)ಹಿಂದ'ದ ರಾಜಕಾರಣದ ಒತ್ತಡಗಳಿಗೆ ಸಿಕ್ಕಿ ಅವರನ್ನು ಬಿಟ್ಟು ಸಾಮಾಜಿಕ ಭದ್ರತೆಗಾಗಿ ಜೆಡಿಎಸ್ ಕಡೆ'ಹೋಯಿತು. ಬ್ರಾಹ್ಮಣ ಜಾತಿ ಸಮಾಜಗಳು ಹಿಂದೆಂದೂ ಇಲ್ಲದಷ್ಟು ಪುರ್ನಸಂಘಟಿತಗೊಂಡವು. ಹಾಗೇ ಅಹಿಂದ ಸೃಷ್ಟಿಸಿದ್ದ ಜಾತಿ ಅಸ್ಮಿತೆಯ ಹುರುಪು ಕುರುಬೇತರ ಅಹಿಂದ ಜಾತಿಗಳಲ್ಲಿ (ಉದಾ: ಕರ್ನಾಟಕದ ಪೂರ್ವ ಭಾಗದಲ್ಲಿ ದಟ್ಟೈಸಿರುವ ನಾಯಕರು ಮತ್ತು ಕರಾವಳಿ ಹಾಗೂ ಮಲೆನಾಡಿನ ಪೂಜಾರಿಗಳು/ದೀವರು) ತಮ್ಮದೇ ವಿಶಿಷ್ಟ ಅಸ್ಮಿತೆಯನ್ನು ಸಾಧಿಸಿಕೊಳ್ಳುವ ಪ್ರಯತ್ನದಲ್ಲಿ ತಮ್ಮದೇ ನಾಯಕರನ್ನು ಕಂಡುಕೊಂಡು ಅವರು ತಮ್ಮ ನಾಯಕರು ಕರೆದುಕೊಂಡು ಹೋದಲ್ಲಿಗೆ(ಬಿಜೆಪಿ) ಹೋದರು. ಇನ್ನು ಜಾತಿಯಿಂದ ಬಿಡುಗಡೆ ಬಯಸಿದ ಅಹಿಂದ ಜಾತಿಗಳ ಜನ ಹಿಂದುತ್ವ ಮತ್ತು ಅಭಿವೃದ್ಧಿಗಳ ಕಾಕ್‌ಟೈಲ್‌ಗೆ ಮನಸೋತು ಬಿಜೆಪಿ ಕಡೆಗೆ ಹೋದರು.



ಚುನಾವಣಾ ವಿಶ್ಲೇಷಣೆ–೨

# ಜೆಡಿಎಸ್ ರಾಜಕಾರಣದ ಜಾಡು ಹಿಡಿದು...

–ಪ್ರೊ. ರವೀಂದ್ರ ರೇಷ್ಮೆ

**ಹಿಂ**ದೆ ೧೯೯೮ರಲ್ಲಿ ಜನತಾ ದಳ ಎಂಬ ರಾಷ್ಟ್ರೀಯ ಪಕ್ಷ ಒಡೆದು ಎರಡು ಹೋಳಾದಾಗ ಕರ್ನಾಟಕದ ಮಟ್ಟಿಗೆ ಒಂದು ಅಂದಿನ ಮುಖ್ಯಮಂತ್ರಿ ಜೆ.ಹೆಚ್. ಪಟೇಲರ ಬಣ ಹಾಗೂ ಮತ್ತೊಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಬಣ ಎಂಬ ಪರಸ್ಪರ ವಿರೋಧಿ ಗುಂಪುಗಳು ಸೃಷ್ಟಿಯಾದವು. ಇವೆರಡೂ ಬಣಗಳು ತಮ್ಮದೇ ಅಸಲಿ ಜನತಾ ದಳ ಎಂಬ ಹಕ್ಕೊತ್ತಾಯದೊಂದಿಗೆ ಕೇಂದ್ರ ಚುನಾವಣಾ ಆಯೋಗದ ಮಾನ್ಯತೆ ಕೋರಿದವು. ಆಗ ಅಂದಿನ ಚುನಾವಣಾ ಆಯೋಗ ಬಹುಶ: ಅನುದ್ದೇಶಿತವಾಗಿಯೇ ಇವೆರಡೂ ಬಣಗಳ ಕೋರಿಕೆಯನ್ನು ತಿರಸ್ಕರಿಸಿ, ಅವೆರಡಕ್ಕೂ ಒಂದೊಂದು ಹೊಸ ಹೆಸರುಗಳನ್ನೇ ಅನುಗ್ರಹಿಸಿಬಿಟ್ಟಿತು. ಯಾವ ಬಣದಲ್ಲಿ ಪರಮ ಜಗಳಗಂಟರಿದ್ದರೋ, ಎಲ್ಲಿ ಆಂತರಿಕ ಭಿನ್ನಾಭಿಪ್ರಾಯಗಳು ದಿನನಿತ್ಯ ವಿಜೃಂಭಿಸುತ್ತಿದ್ದವೋ ಆ ಗುಂಪಿಗೆ ಜನತಾದಳ (ಸಂಯುಕ್ತ) ಎಂದು ಹೆಸರಿಸಲಾಯಿತು. ಮತ್ತೊಂದು ಬಣ ಯಾವುದೇ ಸಂಕೋಚ–ಸೂಕ್ಷ್ಮತೆ ಇಲ್ಲದೆ ತನ್ನ ಜಾತಿ ಬಲವನ್ನೇ ಅಸ್ತ್ರವಾಗಿ ಬಳಸಿಕೊಳ್ಳುತ್ತಿತ್ತೋ ಅದನ್ನು ಜನತಾದಳ (ಜಾತ್ಯಾತೀತ) ಎಂದು ಕರೆಯಲಾಯಿತು!

ಹೀಗೆ ನಾಮಕರಣದ ಹಂತದಲ್ಲೇ ಅಂದಿನ ಚುನಾವಣಾ ಆಯೋಗ ಪ್ರದರ್ಶಿಸಿದ ಈ ವಿನೋದ ಪ್ರಜ್ಞೆ ಇವತ್ತಿಗೂ ಒಂದು ರಾಜಕೀಯ ಪ್ರಹಸನವಾಗಿಯೇ ಮುಂದುವರೆದಿದೆ. ಇಂದು ಕೇವಲ ೩೮ ಸದಸ್ಯ ಬಲದೊಂದಿಗೆ ಎರಡನೆಯ ಬಾರಿಗೆ ಮುಖ್ಯಮಂತ್ರಿಯಾಗಿ ಅವತರಿಸಿರುವ ಹೆಚ್.ಡಿ. ಕುಮಾರಸ್ವಾಮಿ ಅಂದು ೨೦೦೬ರ ಜನವರಿಯಲ್ಲಿಯೂ ಇದೇ ರೀತಿ ೩೮ ಮಂದಿ ಜೆಡಿಎಸ್ ಬಂಡುಕೋರ ಶಾಸಕರನ್ನು ಕಟ್ಟಿಕೊಂಡು ಅತ್ಯಂತ ಚಮತ್ಕಾರಿಕ ರೀತಿಯಲ್ಲಿ ಸಿ.ಎಂ. ಪದವಿಗೇರಿದ್ದರು. ತಮಾಷೆಯೆಂದರೆ ಅಂದು ೭೮ ಸದಸ್ಯ ಬಲವಿದ್ದ ಬಿಜೆಪಿಯ ಪಾಲುದಾರಿಕೆ ಪಡೆದುಕೊಂಡು ಯಡಿಯೂರಪ್ಪನವರಿಗೆ ಡಿಸಿಎಂ ಪದವಿ ಬಿಟ್ಟುಕೊಟ್ಟ ಇದೇ ಕುಮಾರಸ್ವಾಮಿ ಇಂದು ಸಹ ಅಷ್ಟೇ ಸಂಖ್ಯೆಯ ಅಂದರೆ ೭೮ ಎಮ್ಮೆಲ್ಲೆಗಳಿರುವ ಕಾಂಗ್ರೆಸ್ಸಿನ ಡಾ॥ ಜಿ. ಪರಮೇಶ್ವರ್‌ಗೆ ಡಿಸಿಎಂ ಪದವಿಯನ್ನು ಅನುಗ್ರಹಿಸಿದ್ದಾರೆ. ಅಂದು ಕಾಂಗ್ರೆಸ್ಸನ್ನು ಅತಂತ್ರಗೊಳಿಸಲು ಬಿಜೆಪಿ ಜೊತೆ ಕೈಜೋಡಿಸಿದ್ದ ಕುಮಾರಸ್ವಾಮಿ ಇದೀಗ ಬಿಜೆಪಿಯನ್ನು ಹೊರಗಿಡಬೇಕೆಂಬ 'ತಾತ್ವಿಕತೆ'ಯನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಜೊತೆ ಕೂಡಾವಣೆ ಮಾಡಿಕೊಂಡಿದ್ದಾರೆ!

ಹೀಗೆ ಸಮಯ–ಸಂದರ್ಭಕ್ಕೆ ತಕ್ಕಂತೆ ವಿಭಿನ್ನ ಸಿದ್ಧಾಂತಗಳ ಒಂದೊಂದು ರಾಷ್ಟ್ರೀಯ ಪಕ್ಷದ ಜೊತೆ ಹೊಂದಾಣಿಕೆ ಮಾಡಿಕೊಳ್ಳುವ ಮೂಲಕವೇ ಕುಮಾರಸ್ವಾಮಿ ಮತ್ತು ಅವರ ತಂದೆ ದೇವೇಗೌಡರು ತಮ್ಮದೇ ಪಕ್ಷದ ಅಸ್ತಿತ್ವ ಯಾವುದು ಎಂದು ಸಾಬೀತುಪಡಿಸಬೇಕಾದ ಸವಾಲನ್ನು ಆಹ್ವಾನಿಸಿಕೊಂಡಿದ್ದಾರೆ. ಈಗಾಗಲೇ ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಕಾಂಗ್ರೆಸ್ ಜೊತೆ ಹಾಗೂ ಮೈಸೂರು ಮಹಾನಗರಪಾಲಿಕೆಯಲ್ಲಿ ಬಿಜೆಪಿ ಜೊತೆ ಮೈತ್ರಿಕೂಟ ರಚಿಸಿಕೊಂಡು ಅಧಿಕಾರ ಅನುಭವಿಸುತ್ತಿರುವ ಈ ಜೆಡಿಎಸ್ ಪಕ್ಷಕ್ಕೆ ಯಾವುದೇ ತರಹದ ನಿರ್ದಿಷ್ಟ ತತ್ವ–ಸಿದ್ಧಾಂತಗಳೇ ಇಲ್ಲವೇನೋ ಎಂಬ ಸನ್ನಿವೇಶ ನಿರ್ಮಾಣವಾಗಿದೆ.

ಹಿಂದೆ ಮೊದಲ ಬಾರಿಗೆ ಅಧಿಕಾರ ಪಡೆದಾಗ ಇಡೀ ಅರ್ಥಕೋಶ ಹುಡುಕಿದರೂ ಸೆಕ್ಯೂಲರ್ ಎಂಬ ಶಬ್ದಕ್ಕೆ ಅರ್ಥ ಸಿಗಲಿಲ್ಲವೆಂದೂ, ತನ್ನದೇನಿದ್ದರೂ ಅಭಿವೃದ್ಧಿಯೇ ಮೂಲಮಂತ್ರವೆಂದು ಘೋಷಿಸಿ ತಮ್ಮ ಮೈತ್ರಿಕೂಟಕ್ಕೆ ಕರ್ನಾಟಕ ಅಭಿವೃದ್ಧಿ ರಂಗ ಎಂದು ಹೆಸರಿಟ್ಟುಕೊಂಡಿದ್ದರು. ಆದರೀಗ ೧೨ ವರ್ಷಗಳ ನಂತರ ಕೋಮುವಾದಿಯೆಂದು ಪರಿಗಣಿಸಲ್ಪಟ್ಟ ಬಿಜೆಪಿ ಸಹ 'ಸಬ್ ಕಾ ಸಾಥ್ ಸಬ್‌ಕಾ ವಿಕಾಸ್' ಎಂಬ ನರೇಂದ್ರ ಮೋದಿಯ ಅಭಿವೃದ್ಧಿ ಮಂತ್ರ ಜಪಿಸುತ್ತಿರುವಾಗ ಇನ್ನು ಕುಮಾರಣ್ಣನ ಅಭಿವೃದ್ಧಿ ಸೂತ್ರ ಯಾವುದೆಂದು ರಾಜ್ಯದ ಪ್ರಜೆಗಳು ಪ್ರಶ್ನಿಸಬೇಕಾಗಿ ಬಂದಿದೆ.

ಐದು ವರ್ಷಗಳ ಪೂರ್ಣಾವಧಿಗೆ ತಾನೇ ಮುಖ್ಯಮಂತ್ರಿಯಾಗಿ ಉಳಿಯಬೇಕೆನ್ನುವ ಕುಮಾರಸ್ವಾಮಿ ದೈತ್ಯ ಸಂಖ್ಯಾಬಲದ ಕಾಂಗ್ರೆಸ್ಸಿನ ಅತಿರಥ–ಮಹಾರಥರೊಂದಿಗೆ ಒಂದು ರಾಜಕೀಯ ಸಮತೋಲನ ಸಾಧಿಸಬೇಕೆಂದಲ್ಲಿ ತಮ್ಮದು ಕೇವಲ ಹೆಸರಿಗೆ ಜಾತ್ಯಾತೀತ ಜನತಾದಳವಲ್ಲ, ಬದಲಿಗೆ ತನ್ನ ಎಲ್ಲಾ ಆಡಳಿತಾತ್ಮಕ ವಹಿವಾಟುಗಳಲ್ಲೂ ಮತ್ತು ರಾಜಕೀಯ ತಂತ್ರಗಾರಿಕೆಯಲ್ಲೂ ತಾನು ಸೆಕ್ಯೂಲರ್ ಎಂದು ಕಿಂಚಿತ್ತೂ ಅನುಮಾನಕ್ಕೆ ಆಸ್ಪದವಿಲ್ಲದಂತೆ ಸಾಬೀತು ಮಾಡುತ್ತಾ ಸಾಗಬೇಕಿದೆ. ಜಾಗತೀಕರಣದ ಯುಗದಲ್ಲೂ ಅತಿಯಾದ ಜಾತೀಕರಣಕ್ಕೆ ಸಿಕ್ಕಿರುವ ಕರ್ನಾಟಕ ಇದರ ಫಲವಾಗಿಯೇ ಮತ್ತೊಮ್ಮೆ ನಿಚ್ಚಳ ಬಹುಮತವಿಲ್ಲದ ಹಂಗ್ ಅಸೆಂಬ್ಲಿಯ ಹಂಗಿನಲ್ಲಿರಬೇಕಾಗಿ ಬಂದಿದೆ. ತಮ್ಮ ಆರಂಭಿಕ ಪತ್ರಿಕಾಗೋಷ್ಠಿಯಲ್ಲಿ ಅತ್ಯಂತ ವಿಸ್ಮಯಕರ ರೀತಿಯಲ್ಲಿ ಸ್ಪಷ್ಟವಾಗಿ, ನೇರವಾಗಿ ಮತ್ತು ನಿಷ್ಠುರವಾಗಿ ಮಾತನಾಡಿದ ಕುಮಾರಸ್ವಾಮಿ ಅಂದಿನ ಸಂದರ್ಭಕ್ಕೆ ಮಾಡಿಕೊಂಡ ಪೂರ್ವ ತಯಾರಿ ಕೂಡ ಅವರ ವಿರೋಧಿಗಳನ್ನು ಚಕಿತಗೊಳಿಸುವಂತಿತ್ತು.



ಕಳೆದ ೧೨ ವರ್ಷಗಳಿಂದ ಯಾವುದೇ ಪದವಿಯಲ್ಲಿಲ್ಲದಿದ್ದರೂ ಮತ್ತು ಅದೇ ಅವಧಿಯಲ್ಲಿ ಎರಡು ಬಾರಿ ತೀವ್ರ ಅನಾರೋಗ್ಯಕ್ಕೊಳಗಾಗಿ ಸಾವಿನಂಚಿನಿಂದ ಚೇತರಿಸಿಕೊಂಡು ಬಂದ ಕುಮಾರಸ್ವಾಮಿ ಒಂಟಿ ಸಲಗದಂತೆ ತಮ್ಮ ಜೆಡಿಎಸ್ ಪಕ್ಷದ ತೇರನ್ನು ಭಾರೀ ಇಚ್ಛಾಶಕ್ತಿ ಮತ್ತು ಪರಿಶ್ರಮದಿಂದ ಎಳೆದುಕೊಂಡು ಬಂದು ಅನಿರೀಕ್ಷಿತವಾಗಿ ಅತ್ಯುನ್ನತ ಹುದ್ದೆಯನ್ನು ಪಡೆದುಕೊಂಡಿದ್ದಾರೆ. ಬಹುಶ: ಈ ಅನುಭವವೇ ಕುಮಾರಸ್ವಾಮಿಯನ್ನು ಇದುವರೆಗಿನ ಎಲ್ಲಾ ಬಗೆಯ ಜಾತಿಕೇಂದ್ರಿತ ಚಿಂತನೆ, ಅಭಿಪ್ರಾಯ ಹಾಗೂ ರಾಜಕೀಯ ತಂತ್ರಗಾರಿಕೆಯಿಂದ ಹೊರಬರುವಂತೆ ಎಚ್ಚರಿಸಬೇಕಾಗಿದೆ. ರಾಜ್ಯದಲ್ಲಿ ಒಂದು ಆರೋಗ್ಯದಾಯಕ ಪ್ರಜಾಪ್ರಭುತ್ವವನ್ನು ನೆಲೆಗೊಳಿಸಬೇಕಾಗಿದೆ. ಹಸಿವು ಮುಕ್ತ, ಗುಡಿಸಲು ಮುಕ್ತ ಹಾಗೂ ಬಯಲು ಶೌಚಾಲಯ ಮುಕ್ತ ಕರ್ನಾಟಕ ಮಾಡುತ್ತೇವೆಂದು ಡಂಗೂರ ಸಾರುತ್ತಾ ಬಂದ ಕಾಂಗ್ರೆಸ್ ಸಂಸ್ಕೃತಿಗೆ ಪರ್ಯಾಯವಾಗಿ ಕುಮಾರಸ್ವಾಮಿ ಜಾತೀಯತೆ ಮುಕ್ತ ಕರ್ನಾಟಕ ಸ್ಥಾಪನೆಗೆ ಸಂಕಲ್ಪ ತೊಡಬೇಕಾಗಿದೆ.

**(ನಮ್ಮ ನಡುವಣ ಹಿರಿಯ ರಾಜಕೀಯ ವಿಶ್ಲೇಷಕರಲ್ಲೊಬ್ಬರಾದ ಪ್ರೊ. ರವೀಂದ್ರ ರೇಷ್ಮೆ ಬೆಂಗಳೂರಿನ ಕಾಲೇಜೊಂದರಲ್ಲಿ ಸಸ್ಯಶಾಸ್ತ್ರ ಪ್ರಾಧ್ಯಾಪಕರಾಗಿದ್ದವರು)**

ಇದರಿಂದ ಬೆದರಿದ ಸಿದ್ಧರಾಮಯ್ಯ ಅಹಿಂದ ಗುಂಪಿನ ನಂತರದ ಅತಿದೊಡ್ಡ ಜಾತಿಗುಂಪಾದ ಲಿಂಗಾಯ್ತರ ಮೇಲೆ ಆ ಜಾತಿಯ ಕೆಲ ಹುಂಬ ನಾಯಕರ ಜೊತೆ ಸೇರಿ ಅಹಿಂದ ಪ್ರಜ್ಞೆಯ ಪ್ರಯೋಗ ಮಾಡಹೊರಟರು. ಈ ಹುಂಬ ನಾಯಕರ ಮತ್ತು ಅವರಿಗೆ ತಮ್ಮದೇ ಸ್ವಹಿತಾಸಕ್ತಿಗಳಿಗಾಗಿ ಕುಮ್ಮಕ್ಕು ಕೊಟ್ಟ ಕೆಲ ಮಠಾಧೀಶರ ಕೂಗಾಟವನ್ನೇ ಜನಾಂದೋಲನವೆಂದು ತಮ್ಮ ಅಹಿಂದ ಕುರುಡಿನ ಕಾರಣದಿಂದಲೇ ನಂಬಿದ ಸಿದ್ಧರಾಮಯ್ಯ ತರಾತುರಿಯಲ್ಲಿ ತಮ್ಮ ಕೆಲ 'ಹೌದಪ್ಪ'ಗಳಿಂದ ಕೂಡಿದ 'ಪರಿಣಿತರ ಸಮಿತಿ'ರಚಿಸಿ ಅದರಿಂದ ಅನುಕೂಲ ವರದಿ ಪಡೆದುಕೊಂಡು ಸರ್ಕಾರವೊಂದು ಕೈಹಾಕಬಾರದ ಕೆಲಸಕ್ಕೆ ಕೈಹಾಕಿ ಆ ಜಾತಿಯ ಜನರಿಂದ ತಮ್ಮ ಪಕ್ಷಕ್ಕೆ ಸಿಗಬಹುದಾಗಿದ್ದ ಅಲ್ಪ ಬೆಂಬಲವನ್ನೂ ಕಳೆದುಕೊಂಡರು.

ಜಾತಿಯ ಕೇಡನ್ನು ಸಮಾಜದ ಕೇಡೆಂದು ಬಗೆದು ಅದನ್ನು ಇಡಿಯಾಗಿ ಎದುರಿಸುವ ಪ್ರಯತ್ನ ಮಾಡದೆ ಅದು ಕೆಲವರಿಗೆ ಮಾತ್ರ ಕೇಡು ಬಗೆದಿದೆ ಎಂದು ನಂಬುವುದೇ ಜಾತಿಯನ್ನು ಅರ್ಥಮಾಡಿಕೊಳ್ಳುವ ಮೊದಲ ತಪ್ಪು ಹೆಜ್ಜೆ ಮತ್ತು ಎಲ್ಲ ಅನಾಹುತಗಳಿಗೆ ಮೂಲ ಕಾರಣ. ಈ ಅನಾಹುತಗಳ ಸುಳಿಯಲ್ಲಿ ಸಿಕ್ಕಿಕೊಂಡಾತ ಎಲ್ಲವನ್ನೂ ಮರೆಯುತ್ತಾನೆ. ಮೂಲ ಸರಿ ತಪ್ಪುಗಳ ಜ್ಞಾನವನ್ನೂ. ಸಿದ್ಧರಾಮಯ್ಯನವರಿಗೆ ಆದದ್ದೂ ಅದೇ. ಲೋಕಾಯುಕ್ತ, ಕೆಪಿಎಸ್‌ಸಿಗಳ ಅವನತಿಯ, ಆಸ್ಪತ್ರೆ ಮತ್ತು ಪೋಲೀಸ್ ಠಾಣೆಗಳೂ ಸೇರಿದಂತೆ ಸರ್ಕಾರಿ ಕಛೇರಿಗಳಲ್ಲಿನ ಬಹಿರಂಗ ಭ್ರಷ್ಟಾಚಾರದ ಮತ್ತು ಅಂತಿಮವಾಗಿ ಅವರ ರಾಜಕೀಯ ವಿಶ್ವಾಸಾರ್ಹತೆಯನ್ನು ನಿರ್ಣಾಯಕವಾಗಿ ಹಾಳುಮಾಡಿದ ಅವರ ಕುಟುಂಬ ರಾಜಕಾರಣದ ಆಕಾಂಕ್ಷೆಯ ಮೂಲ ಇದ್ದುದೂ ಇಲ್ಲೇ.


ಸಿದ್ಧರಾಮಯ್ಯ ಸಾರ್ವತ್ರಿಕವಾ ಒಳ್ಳೆಯ ಕೆಲಸಗಳನ್ನೇನೂ ಮಾಡಲಿಲ್ಲವೆಂದಲ್ಲ.. ಎಲ್ಲ ಮುಖ್ಯಮಂತ್ರಿಗಳಂತೆ ನೀರಾವರಿ, ರಸ್ತೆ, ನೀರು, ಚರಂಡಿ ಇತ್ಯಾದಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ,ಬಂಡವಾಳ ಸಂಘಟನೆ ಹಣಕಾಸು ನಿರ್ವಹಣೆ ಇತ್ಯಾದಿ ಕ್ಷೇತ್ರಗಳಲ್ಲಿ ಸಾಕಷ್ಟು ಒಳ್ಳೆಯ ಕೆಲಸಗಳನ್ನೇ

(೧೩ನೇ ಪುಟಕ್ಕೆ

ಒಂದು ಲಲಿತಪ್ರಬಂಧ

# ಮಾರುವೇಷದ ಇಷ್ಟದೇವತೆಗಳು

–ಜಯಂತ ಕಾಯ್ಕಿಣಿ



ಚಿತ್ರ: ಸಂಘಮಿತ್ರೆ ನಾಗರಘಟ್ಟ

**ಪ್ರ**ತಿಯೊಂದು ಊರಿನಲ್ಲೂ ಆ ಊರಿನ ಸಾಕ್ಷಿಪ್ರಜ್ಞೆಯಂತೆ ಓಡಾಡಿಕೊಂಡಿರುವ ಕೆಲವು ವಿಶೇಷ ವ್ಯಕ್ತಿಗಳಿರುತ್ತಾರೆ. ಊರಿನವರು ಮಾತ್ರ ಅವರನ್ನು ಹುಚ್ಚ, ಮಳ್ಳ, ('ಮರುಳ'ದ ತದ್ಭವ!), ಪಿರ್ಕಿಸ್, ತಿರಸಟ್ ಎಂದೆಲ್ಲಾ ಕರೆಯುತ್ತಿರುತ್ತಾರೆ. ಅವರನ್ನು ಎಷ್ಟೇ ಲೇವಡಿ ಅಥವಾ ಫಾರ್ಸು ಮಾಡಿಕೊಂಡಿದ್ದರೂ ಸಹ ಒಳಗೊಳಗೇ ಅವರ ಕುರಿತು ಸೂಕ್ಷ್ಮ ಭಯವೊಂದನ್ನು ಇಟ್ಟುಕೊಂಡಿರುತ್ತಾರೆ. ಅವರ ಕಣ್ಣು ತಪ್ಪಿಸುತ್ತಾರೆ. ತಮ್ಮ ಅಂತರಂಗದ ಮಾತುಗಳನ್ನು ಅವರು ಆಡಿಬಿಟ್ಟರೆ! ಎಂಬ ದಿಗಿಲು ಎಲ್ಲರಲ್ಲೂ ಇರುತ್ತದೆ. 'ಮರುಳರು' ಬೇರೆ ಯಾರ ಬಗ್ಗೆ ಮಾತಾಡಿದರೂ, ಬೈದರೂ, (ಬೈಗುಳಗಳು ಸ್ಪಷ್ಟವಾಗಿದ್ದರೂ ಯಾರ ಕುರಿತು ಅನ್ನೋದು ಬಹುತೇಕ ಅಸ್ಪಷ್ಟವಾಗಿರುತ್ತದೆ!) ರುಚಿಗಟ್ಟಾಗಿ ಆಲಿಸುವ ನಾವು, ಅವನು ನಮ್ಮೆದುರು ಕೈಚಾಚಿ ನಿಂತುಬಿಟ್ಟರೆ, ಥಟ್ಟಂತ ಕಿಸೆಗೆ ಕೈಹಾಕಿ ದುಡ್ಡು ಕೊಟ್ಟುಬಿಡುತ್ತೇವೆ ಅಥವಾ ತಿಂಡಿ ಕೊಡುತ್ತೇವೆ. "ನನ್ನ ಬಗ್ಗೆ ಮಾತಾಡಬೇಡ ಮಾರಾಯ" ಎನ್ನುವಂಥ ದಿವ್ಯಯಾಚನೆ ಇರುತ್ತದೆ ನಮ್ಮ ದಿಲ್‌ದಾರತನದಲ್ಲಿ. ಆದರೆ ಮರುಳ ಮಾತ್ರ ಇವೆಲ್ಲ ಕನಸಿನಲ್ಲಿ ನಡೆಯುತ್ತಿರುವಂತೆ, ಸಂಬಂಧವೇ ಇರದಂತೆ ಇಸಕೊಂಡು ಹೊರಟುಬಿಡುತ್ತಾನೆ.

ಶಾಲೆಗೆ ಹೊರಟ ಅಥವಾ ಶಾಲೆಯಿಂದ ಮರಳುವ ಮಕ್ಕಳಿಗೂ ಈ ಮರುಳರಿಗೂ ವಿಶೇಷ ನಂಟು. ಆಗ ಮಳ್ಳ ವಿದೂಷಕನಾಗಿಬಿಡುತ್ತಾನೆ. ಥೈಥೈ ಎಂದು ಒಂದು ಕಾಲಲ್ಲಿ ದಾಮರು ರಸ್ತೆಯ ಮೇಲೆ ಕುಣಿವ ಯಕ್ಷಗಾನದ ಶಿವನಾಗುತ್ತಾನೆ ಅಥವಾ ನಾಚಿಗೆಬಿಟ್ಟು ಸುಧನ್ವನನ್ನು ಶೃಂಗಾರಕ್ಕೆ ಕರೆವ ಪ್ರಭಾವತಿಯಾಗುತ್ತಾನೆ. ಹಾಲ್ಟಿಂಗ್ ಬಸ್ಸುಗಳ ಮೈಮೇಲಿನ ಧೂಳಿನಲ್ಲಿ "ಅವನ ಹೆಂಡತಿ ಬೋರ್ನವಿಟಾ ಕಾರ್ತಿಕ ಉತ್ಸಾವ" ಎನ್ನುವಂತಹ, ಎಂಥ ಘನವಿದ್ವಾಂಸರಿಗೂ ಬಗೆಹರಿಯದ ನಿಗೂಢ ಸಾಲುಗಳನ್ನು ಬರೆಯುತ್ತಾನೆ. ಅವನು ಎಲ್ಲಿ ಮಲಗುತ್ತಾನೆ, ಎಲ್ಲಿ ಏಳುತ್ತಾನೆ ಎನ್ನುವುದೂ ಅಷ್ಟೇ ನಿಗೂಢ.

ನನ್ನೂರು ಗೋಕರ್ಣದ ವಿಶೇಷವೆಂದರೆ ಅಲ್ಲಿ ಬೇರೆ ಊರಿಂದ ಯಾತ್ರಿಕರಾಗಿ ಬಂದು ಊರಲ್ಲೇ ಉಳಿದ ಬೇರೆ ಭಾಷೆಯ ಮರುಳರೂ ಇದ್ದರು. ಮಲೆಯಾಳಿ, ಮರಾಠಿ, ಬ್ರಿಜಭಾಷೆಗಳನ್ನು ಆಡುವ ಆ ಭ್ರಮಿತರ ನಗೆಯೂ ಆಯಾ ಭಾಷೆಗೇ ಸಂಬಂಧಪಟ್ಟಂತೆ ಇರುತ್ತಿತ್ತು. ಆ ನಗೆಯೇ ಬೇರೆ! ಸಾದಾ ಮಳ್ಳರನ್ನು ಕಂಗೆಡಿಸುವಂತೆ ಕಾವಿ ತೊಟ್ಟುಕೊಂಡ ಮಳ್ಳರೂ ಇರುತ್ತಿದ್ದರು. ಊರಿನ ಮೂಲ ಮಳ್ಳರಿಗೂ, ಹೊರಗಿಂದ ಬಂದ ಮಳ್ಳರಿಗೂ, ಅರೆದಿಗಂಬರ ಅಥವಾ ಹರುಕು ಬಟ್ಟೆಯ ಮಳ್ಳರಿಗೂ ಮತ್ತು ಕಾವಿತೊಟ್ಟ ಮಳ್ಳರಿಗೂ 'ಕ್ಲಾಸ್' ಪ್ರಭೇಧವೊಂದು ಇದ್ದಂತಿತ್ತು. (ಕವಿ ಕೆ.ವಿ.ತಿರುಮಲೇಶ ಬರೆದ 'ಇಬ್ಬರು ಹುಚ್ಚರು' ಎಂಬ ಕಥೆ ಇಂಥದೊಂದು ಸೂಕ್ಷ್ಮ ಸಂಘರ್ಷದ ಮೇಲೆ ಬೆಳಕು ಚೆಲ್ಲಿದೆ) ಅದೇನೇ ಇರಲಿ, ಅಂಥ ವ್ಯಕ್ತಿಗಳು ಪರಸ್ಪರ ಮಾತಾಡಿದ್ದನ್ನು ಮಾತ್ರ ನಾನಂತೂ ನೋಡಿಲ್ಲ.

ನನ್ನ ಸಂವೇದನೆಯನ್ನು ಆಳವಾಗಿ ಪೋಷಿಸಿದ ಇಂಥ ಕೆಲವು ಜೀವಿಗಳು ನನ್ನೊಳಗೆ ಎಂದೆಂದೂ ಜಾಗೃತರಾಗಿರುತ್ತಾರೆ. ಗೋಕರ್ಣದ ಇಂಥ ಒಬ್ಬ ಮಹನೀಯರ ಬಗ್ಗೆ ನಾನು ತುಂಬ ಕಡೆ ಹೇಳಿದ್ದೇನೆ. ಆ ವ್ಯಕ್ತಿ ನಸು ಬೆಳಕಿನಲ್ಲಿ ರಥಬೀದಿಯಲ್ಲಿ ಪೂರ್ವ ದಿಕ್ಕಿಗೆ ಮುಖಮಾಡಿ ನಿಂತು "ಬಾ, ಬಾ, ಬಾ..." ಎಂದು ಕೈ ಮುಂದೆ ಮಾಡಿ ಕೆಳಗಿಂದ ಮೇಲಕ್ಕೆ ಎತ್ತುವ ಸನ್ನೆ ಮಾಡುತ್ತ ಕೂಗುತ್ತಿದ್ದ. ಆವಾಹನೆಯ ದನಿ ಇತ್ತು ಅವನ "ಬಾ, ಬಾ, ಬಾ..." ದಲ್ಲಿ. ಮತ್ತು ನೋಡನೋಡುತ್ತಿದ್ದಂತೆ ಆಗಸದಲ್ಲಿ ಸೂರ್ಯ ವಿಧೇಯನಾಗಿ ಮೂಡಿಬಿಡುತ್ತಿದ್ದ! ನಂತರ ಸಂಜೆ ಈ ವ್ಯಕ್ತಿ ಸಮುದ್ರ ತೀರದಲ್ಲಿ ನಿಂತು ಪಶ್ಚಿಮದ ಕ್ಷಿತಿಜದಲ್ಲಿ ಕೆಂಪಗೆ ಆರುತ್ತಿರುವ ಅದೇ ಸೂರ್ಯನಿಗೆ – "ಯೂ, ಯೂ, ಈಡಿಯೆಟ್, ಗೋ...ಹೋಗು...ಐ ಸೇ ಗೋ...ಮಗನೇ ಹೋಗೋ..." ಎಂದು ಕೈಯನ್ನು ಬೀಸಿ ಬೀಸಿ ಅಪ್ಪಣೆ ಕೊಡುತ್ತಿದ್ದ. ಇವನ ಇಷಾರೆಗೇ ಕಾದಂತಿದ್ದ ಸೂರ್ಯ ಪುಳುಕ್ಕನೆ ಮುಳುಗಿಬಿಡುತ್ತಿದ್ದ! ನಂತರ ಈತ "ಸೂರ್ಯನನ್ನು ಕರೆತಂದು ಇಡೀ ದಿನ ಕೆಲಸ ಮಾಡಿಸಿಕೊಂಡು ಮರಳಿ ಕಳಿಸಿದಂಥ ಒಂದು ಧನ್ಯತಾಭಾವದಲ್ಲಿ ತೋಳುಬ್ಬಿಸಿಕೊಂಡು ಮಾಯವಾಗುತ್ತಿದ್ದ. ಅವನಿಗೆ ಅನಿಸಿದ್ದು ಎಷ್ಟು 'ನಿಜ'ವಾದದ್ದಲ್ಲವೆ? ಎಂದು ನನ್ನನ್ನು ಅಚ್ಚರಿಗೊಳಿಸಿ 'ನಿಜ'ದ ಕುರಿತು ನನ್ನನ್ನು ಅಲುಗಿಸಿದ ಸಂಗತಿ ಅದು. ಅವನ ಲೋಕದ ನಿಜವನ್ನು ಅಲ್ಲಗಳೆಯಲು ನಾ ಯಾರು?

ಊರವರೆಲ್ಲ ಕಾಯಕ್ಕ ಅಂತ ಕರೀತಿದ್ದ ಇನ್ನೊಬ್ಬ ಮಹಿಳೆ ಸಹ ನನಗೆ ಅವಧೂತೆಯಂತೆ ಕಾಣುತ್ತಿದ್ದಳು. ಅವಳು ನಾನಾ ಸೀರೆಗಳ ಅಂಚಿನ ಚಿಂದಿಯ ಚೆಂಡೊಂದನ್ನು ಮಾಡುತ್ತಲೇ ಇರುತ್ತಿದ್ದಳು. ಊರಿನ ತೇರಿನ ಜತೆಗೆ ಅವಳ ಸಂಸಾರ ನಡೆದಂತಿತ್ತು. ವರ್ಷವಿಡೀ ತನ್ನ ಶೆಡ್‌ನಲ್ಲಿ ತೆಪ್ಪಗೆ ನಿಂತಿರುತ್ತಿದ್ದ ತೇರಿನ ಜೊತೆಗೆ ಅವಳ ಮಾತು, ಕತೆ, ಮುದ್ದು, ಜಗಳ, ಹುಸಿಮುನಿಸು, ರಚ್ಚೆ, ಲಜ್ಜೆ ಎಲ್ಲವೂ ನಡೆಯುತ್ತಿತ್ತು. ನನಗದು ಅತ್ಯಂತ ವಿಶೇಷವೆನಿಸಿತ್ತು. ಶಿವರಾತ್ರಿ ಜಾತ್ರೆಗೆ ಒಂದು ವಾರವಿರುವಾಗಲೇ ತೇರನ್ನು ಹೊರತೆಗೆದು, ಸಿಂಗರಿಸಿ, ಅಟ್ಟಣಿಗೆ ಏರಿಸಿ, ಬಿದಿರಿನಿಂದ ಅದರ ಶಿಖರ ಗೋಪುರ ಮಾಡಿ, ಪತಾಕೆ, ತೋರಣಗಳಿಂದ ಅದು ಸಜ್ಜಾಗುವಾಗ, ಕಾಯಕ್ಕ 'ಗಾಯಬ್'! ಅವಳ ಸುಳಿವೇ ಇರುತ್ತಿರಲಿಲ್ಲ. ಜಾತ್ರೆಯಲ್ಲಿ ತೇರೆಳೆದು ಎಲ್ಲ ಸಂಭ್ರಮ ಮುಗಿದು ತೇರು ತನ್ನೆಲ್ಲ ವೇಷಭೂಷ ಕಳಚಿ ಬರೀ 'ಬೊಡ್ಡೆ'ಯಾಗಿ ನಿಂತ ಮೇಲೆ ಮತ್ತೆ ಕಾಯಕ್ಕ ಹಾಜರ್! ಸುಮಾರು ಎರಡು ವಾರ ಕಾಲ ಗಂಡನನ್ನು ಊರಿನ ಜೊತೆ, ಪ್ರವಾಸಿಗರ ಜೊತೆ ಮೆರೆಯಲು ಬಿಟ್ಟ ಔದಾರ್ಯ ಅಲ್ಲಿ ಕಾಣುತ್ತಿತ್ತು. ಸಾರ್ವಜನಿಕ ರಥೋತ್ಸವಕ್ಕೂ ಅವಳಿಗೂ ಬಿಲ್‌ಕುಲ್ ಸಂಬಂಧವಿರಲಿಲ್ಲ. ಅವಳ ನಂಟೇನಿದ್ದರೂ ಸಾರ್ವಜನಿಕ ಸಂಪರ್ಕದಿಂದ ಮುಕ್ತವಾಗಿ ಖಾಸಗಿಯಾಗಿ ನಿಂತಿರುವ ಆ ತೇರಿನ ಜೊತೆಗೆ ಅಷ್ಟೇ. ಈ ಕಾಯಕ್ಕ ನನ್ನ 'ಚಂದ್ರಶಾಲೆ' ಕಥೆಯಲ್ಲಿ ಬಂದು ನನ್ನನ್ನು ಅನುಗ್ರಹಿಸಿದ್ದಾಳೆ. ಊರ ಗಂಡಸರೆಲ್ಲ ಅವಳ ಕಣ್ಣು ತಪ್ಪಿಸಿ ನಡೆಯುತ್ತಿದ್ದರೆ ಹೆಂಗಸರು ಕರೆದು ಕರೆದು ಆಕೆಗೆ ಊಟ ಹಾಕುತ್ತಿದ್ದರು. ಹಳೆ ಸೀರೆ ಕೊಡುತ್ತಿದ್ದರು.

ದಯಾ ಅಂತ ಇನ್ನೊಬ್ಬನಿದ್ದ. ಮಕ್ಕಳನ್ನು ನಾಯಿಗಳು ಅಟ್ಟಿಸಿಕೊಂಡು ಬಂದರೆ, ಅದೆಲ್ಲಿಂದಲೋ ಹಠಾತ್ ಪ್ರತ್ಯಕ್ಷನಾಗಿ 'ಹಚಾ, ಹಚಾ' ಎಂದು ನಾಯಿಗಳನ್ನು ಓಡಿಸಿ ಮಕ್ಕಳು ಅಳುಮೋರೆಯಲ್ಲೂ ನಗುವಂತೆ ಮಾಡಿ ಬಚಾವು ಮಾಡುವ 'ಆಪದ್‌ಬಾಂಧವ'! ಈತ. ಗೋಕರ್ಣದಲ್ಲಿ ಗಂಜಿಗದ್ದೆ ಅಂತೊಂದು ಪ್ರದೇಶ ಇದೆ. ಅಲ್ಲಿಯೇ ಹೆಚ್ಚಿಗೆ ಸುತ್ತಾಡಿಕೊಂಡಿದ್ದ. ಅವನಿಗೆ ಮಾಸ್ತರರ ಬಗ್ಗೆ ಏನೋ ವಿಲಕ್ಷಣ ಸೆಳೆತ ಇತ್ತು. ಶಾಲಾ ಶಿಕ್ಷಕರು ಶಾಲೆ ಮುಗಿಸಿ ನಡೆದುಕೊಂಡೇ ಮನೆಗೆ ಮರಳುತ್ತಿದ್ದ ಕಾಲ ಅದು. ಜೊತೆಜೊತೆಯಾಗಿ ಮರಳುತ್ತಿದ್ದರು. ಆಗ ದಯಾ ಅಲ್ಲಿ ಇಲ್ಲಿ ಅಂಗಡಿ ಮುಂಗಟ್ಟುಗಳಿಂದ ಅಥವಾ ಯಾರ್‍ಯಾರದೋ ಮನೆ ಹಿತ್ತಲಿಂದ 'ಮಾಸ್ತರ್...ಏ....ಮಾಸ್ತರ್' ಎಂದು ನಾನಾ ಶೃತಿಯಲ್ಲಿ ಕೂಗಿ ಕರೆಯುತ್ತಿದ್ದ. ಆ ಕೂಗು ಕೇಳಿದ ತಕ್ಷಣ ಎಂಥ ಮಾಸ್ತರರ ನಡಿಗೆಯೂ ತುಸು ಚುರುಕಾಗಿಬಿಡುತ್ತಿತ್ತು. ನಾನು ಮಾಸ್ತರರ ಮಗನಾಗಿದ್ದರಿಂದ ಎಲ್ಲಾದರೂ ದಯಾ ಎದುರಾದರೆ ನನಗೊಂದು ವಿಶೇಷ ಹೆದರಿಕೆ ಇರುತ್ತಿತ್ತು. ಒಮ್ಮೆ ಆತ ಜೀವೋತ್ತಮ ಮಠದ ಎದುರಿನ ದೀಪಗೋಪುರದ (ಇದು ಗೋವಾ ಶೈಲಿಯ ದೀಪಸ್ತಂಭ, ಮಣ್ಣು ಇಟ್ಟಿಗೆಗಳಿಂದಲೇ ಮಾಡಿದ ತೇರಿನೆತ್ತರದ ಆಕೃತಿ) ಮೇಲಿನ ಒಂದು ಗೂಡಿನಲ್ಲಿ ಅದ್ಹೇಗೋ ನಿಂತು, ಕೆಳಗೆ ಆಡುತ್ತಿದ್ದ ಮಕ್ಕಳನ್ನು ಆಕರ್ಷಿಸತೊಡಗಿದ. ಮಕ್ಕಳು ಆಟ ಮರೆತು ತುಸು ಭೀತಿಯಿಂದಲೆ ಅವನನ್ನು ನೋಡುತ್ತ, ರಸ್ತೆಯಲ್ಲಿ ಹೋಗುತ್ತಿದ್ದ ಜನರನ್ನೂ ತಮಾಷೆ ನೋಡಲು ಕರೆಯತೊಡಗಿದರು. ತಮಾಷೆಗಿಂತ ಹೆಚ್ಚು ಆತಂಕ ಅಲ್ಲಿತ್ತು. ಏಕೆಂದರೆ ಅಪಾಯಕಾರಿ ಎತ್ತರದಲ್ಲಿ ದಯಾ ನಿಂತಿದ್ದ. ಅಲ್ಲಿಂದಲೇ ದಯಾ ಒಂದು ಘೋಷಣೆ ಮಾಡಿದ. "ನಾನು ಇಲ್ಲಿಂದ ಜಿಗಿಯುತ್ತೇನೆ. ವನ್...ಟೂ....ಥ್ರೀ....ಹೇಳ್ರೀ" ಎಂದವನು ಅಂದಿದ್ದೇ ಜನ ಹೌಹಾರಿದರು.


"ಮಾರಾಯಾ, ಸಾಯ್ವೆ! ನಿಲ್ಲು ನಿಲ್ಲು. ಹಾರಬೇಡಾ. ಕಟ್ಟೆ ಮೇಲಿಂದ ನಡಕೊಂಡು ಹಗೂರ ಹಿಂದಗಡೆ ಮೆಟ್ಟಿಲ ಹತ್ರ ಬಾ. ಸಾವ್‌ಕಾಶಾ ಸಾವ್‌ಕಾಶಾ..." ಎಂದು ಎಲ್ಲರೂ ಎಚ್ಚರಿಕೆ ಕೊಡುತ್ತಿರುವಾಗ, ಹುಡುಗನೊಬ್ಬ 'ವನ್, ಟೂ, ಥ್ರೀ..." ಎಂದು ಒಂದೇ ಉಸುರಿನಲ್ಲಿ ಕೂಗಿಬಿಟ್ಟ. ಕಣ್ಣುಚ್ಚಿ ತೆಗೆಯುವುದರ ಒಳಗೆ ದಯಾ ಜಿಗಿದು ಕೆಳಗೆ ಬಿದ್ದು ಪ್ರಾಣವೇ ಹೋದಂತೆ – "ಆಯೀ...ಆಯೀ..." ಎಂದು ರೋದಿಸತೊಡಗಿದ. ಮಕ್ಕಳು ಹೆದರಿ ಓಡಿಹೋದರು. ಇಬ್ಬರು ಅವನನ್ನು ಸೈಕಲ್ ಮೇಲೆ ಕೂರಿಸಿ ಆಸ್ಪತ್ರೆಗೆ ಸಾಗಿಸಿದರು. ಅವನು "ಆಯೀ.." ಎಂದು ರೋದಿಸಿದ್ದು ಅವನ ಆಯಿಗೆ ಎಂದು ತಲುಪಿತೋ ಅಥವಾ ಇಲ್ಲವೋ ಗೊತ್ತಿಲ್ಲ. ನಂತರ ಎರಡೂ ಕಾಲಿಗೂ ಪ್ಲಾಸ್ಟರ್ ಹಾಕಿಸಿಕೊಂಡು ಅವನು ಮೂರು ತಿಂಗಳು ಮನೇಲೇ ಇದ್ದನಂತೆ. ಅವನನ್ನು ನೋಡಲು ಹೋದವರಿಗೆಲ್ಲ ಅವನ ಆಯಿ "ದೇವರು ದೊಡ್ಡವನು. ಈ ರೀತಿಯಲ್ಲಾದರೂ ಇವನು ಮನೇಲಿದ್ದಾನೆ. ಇಲ್ಲಾಂದ್ರೆ ಪ್ರತೀ ಸಂಜೆ ಇವನನ್ನು ಊರೆಲ್ಲಾ ಹುಡುಕಿ ಹುಡುಕಿ ಕರಕೊಂಡು ಬಂದು ಜೀವ ಹಣ್ಣಾಗಿ ಹೋಗ್ತಿತ್ತು" ಎನ್ನುತ್ತಿದ್ದರಂತೆ.

ನಾನು ಹೈಸ್ಕೂಲಿಗೆ ಹೋಗುವಾಗ ಕಾವಿಯ ಕುರ್ತಾ ಮತ್ತು ಪಾಯಜಾಮಾ ಹಾಕಿದ ಉತ್ತರ ಭಾರತದ ಸಾಧ್ವಿಯೊಬ್ಬರ ಆಗಮನವಾಯಿತು. ಅವರ ಹೆಸರೋ ಅಥವಾ ಊರಿನ ಹೆಸರೋ ಗೊತ್ತಿಲ್ಲ ಎಲ್ಲರೂ ಆಕೆಯನ್ನು ಬದರೀಬಾಯಿ ಎಂದೇ ಕರೆಯುತ್ತಿದ್ದರು. ಭಕ್ತಿಯ ಪರಾಕಾಷ್ಠೆಯನ್ನು ಮೀರಿ ಆಕೆ ವಿಕ್ಷಿಪ್ತವಾಗಿ ವರ್ತಿಸುವುದು ಶುರುವಾಯಿತು. ಊರಿನವರಿಗೆ ಅದು ಬರೀ ಭಕ್ತಿಯಲ್ಲ ಅಂತ ಮನವರಿಕೆ ಆಗಿದ್ದು ಊರಿನ ಹವ್ಯಾಸಿ ಯಕ್ಷಗಾನದ ಆಟಗಳು ನಡೆದಾಗ. ರಥಬೀದಿಯಲ್ಲಿ ನಾಲ್ಕು ಬಿದಿರಿನ ಗಳ ನೆಟ್ಟು ತೋರಣ ಕಟ್ಟಿ ತಯಾರಿಸಲಾದ ಮುದ್ದಾದ ರಂಗದಿಂದ ಒಂದಿಷ್ಟು ದೂರವೇ ಕೂತು ತನ್ಮಯಳಾಗಿ ನೋಡುತ್ತಿದ್ದ ಆಕೆಗೆ ಯಕ್ಷಗಾನದ ಪಾತ್ರಗಳೆಲ್ಲ ಥೇಟು ದೇವದೇವತೆಗಳೆ ರೂಪತಳೆದು ಎದುರು ಬಂದು ಕೂಗಿದಂತೆ ಅನಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಯಕ್ಷಗಾನದ ಆಕರ್ಷಣೆಯೇ ಅದು. ಆದರೆ ಆಕೆಗೆ ಕೃಷ್ಣನ ಪಾತ್ರ ಬಂದಾಗ ಮಾತ್ರ ಪಾಪ ತನ್ನನ್ನು ಅಂಕೆಯಲ್ಲಿಟ್ಟುಕೊಳ್ಳಲು ಆಗುತ್ತಲೇ ಇರಲಿಲ್ಲ. ಎದ್ದು ಕುಣಿಯುತ್ತ ರಂಗಸ್ಥಳಕ್ಕೆ ಧಾವಿಸಿ ಕೃಷ್ಣನ ಕಾಲಿಗೆ ಬಿದ್ದು ಎದ್ದು ಆ ಪಾತ್ರವನ್ನು ಆಲಂಗಿಸಿ ಕುಣಿತ ಮುಂದುವರೆಸಿ ಹಗರಣ ಮಾಡಿಬಿಡುತ್ತಿದ್ದಳು. ಹಿಮ್ಮೇಳ ಮುಮ್ಮೇಳ ಎಲ್ಲವನ್ನೂ ಬರಖಾಸ್ತು ಮಾಡಿಯೇ ಆಕೆಯನ್ನು ಬಿಡಿಸಬೇಕಾಗುತ್ತಿತ್ತು. ಅದು ಅಲ್ಲಿಗೇ ನಿಲ್ಲದೆ ಆಕೆ ಕೃಷ್ಣ ಪಾತ್ರಧಾರಿಗಳ ಮನೆಯನ್ನೂ ಹಗಲಲ್ಲಿ ಅರಸಿ ಹೋಗತೊಡಗಿದಳು. ಬ್ರಿಜಭಾಷೆಯಲ್ಲಿ ಅವಳು ಸ್ತುತಿಸುತ್ತಿದ್ದಾಳೋ ಅಥವಾ ಬೈಯುತ್ತಿದ್ದಾಳೋ ಅಂತ ಗೊತ್ತಾಗುತ್ತಿರಲಿಲ್ಲ. ಕೃಷ್ಣ ಪಾತ್ರಧಾರಿಗಳೆಲ್ಲ ರಾಜಕೀಯ ಸಂತ್ರಸ್ತರಂತೆ ತಾತ್ಕಾಲಿಕವಾಗಿ ಭೂಗತರಾಗಬೇಕಾದ ತುರ್ತು ಪರಿಸ್ಥಿತಿ ಉಂಟಾಯಿತು.

ಗೋಕರ್ಣದ ರಥಬೀದಿಯ ಇನ್ನೊಂದು ತುದಿಯಲ್ಲಿ ಸುಭಾಷ್ ಚೌಕ ಎಂಬಲ್ಲಿ ಪುಟ್ಟ ವೇದಿಕೆಯಿತ್ತು. ಅಲ್ಲಿ ಸಾಮಾನ್ಯವಾಗಿ ಯಕ್ಷಗಾನ, ಸಭೆ, ಭಾಷಣ ಇತ್ಯಾದಿ ನಡೆಯುತ್ತಿದ್ದವು. ಬುರ್ಡೆ ಅಂತೊಬ್ಬ ಭ್ರಮಿತ ಜೀವಿ ರಾತ್ರಿ ಅಲ್ಲಿ ಹೋಗಿ ಚೀಲ ಹಾಸಿಕೊಂಡು ಮಲಗುತ್ತಿದ್ದ. ದಿನವಿಡೀ ಆತ ತನ್ನಷ್ಟಕ್ಕೆ ಗೊಣಗಿಕೊಳ್ಳುತ್ತ ರಸ್ತೆಯಲ್ಲಿ ಬಿದ್ದಿದ್ದ ಕಲ್ಲುಗಳನ್ನು ಎತ್ತಿ ಬದಿಗೆ ಹಾಕುತ್ತಿದ್ದ. ಊರಿಡೀ ಅವನತಮುಖನಾಗಿ ಅಲೆಯುತ್ತ ಕಲ್ಲುಗಳನ್ನು ಹುಡುಕುತ್ತಿದ್ದ. ಒಮ್ಮೊಮ್ಮೆ ಅವನು ಸಮುದ್ರ ತೀರದಲ್ಲಿ ಬೇರೂರಿ ಸ್ಥಿರವಾಗಿ ನಿಂತಿದ್ದ ದೊಡ್ಡ ದೊಡ್ಡ ಶಿಲೆಗಳನ್ನು ತಳ್ಳುವುದೂ ಇತ್ತು. ತಿಣುಕಿ ತಿಣುಕಿ ಒದ್ದಾಡಿ ಇನ್ನೇನು ಅವು ಅಲುಗುವುದಿಲ್ಲ ಎಂದು ತಿಳಿದಮೇಲೂ "ಇರಿ, ನಾಳೆ ಬರ್ತೇನೆ" –ಎಂದು ಅವುಗಳ ಜೊತೆ ಹೇಳಿದಂತೆ ಮಾಡಿ ತನ್ನ ಉದ್ದ ಕೂದಲನ್ನು ಕೊಡವಿಕೊಂಡು ಹೊರಟುಬಿಡುತ್ತಿದ್ದ. ಅವನು ತೀರದ ಸಮೀಪದ ಸಂಕವನ್ನು ತಳ್ಳಿ ತಳ್ಳಿ ನಿರಾಸೆ ಹೊಂದಿ ಹೊರಟಿದ್ದನ್ನೂ ನಾನು ನೋಡಿದ್ದೇನೆ. ಒಟ್ಟಾರೆ ಸ್ಥಾವರ ಸಂಗತಿಗಳು ಕಂಡರೆ ಸಾಕು ಅವುಗಳನ್ನು ಜಂಗಮಗೊಳಿಸುವ ತಪಸ್ಸು ಅವನದು. ಅವನು ಒಂದು ರಾತ್ರಿ ಸುಭಾಷ್ ಚೌಕದಲ್ಲಿ ಗೋಣಿಚೀಲದ ಮೇಲೆ ಮಲಗಿದ್ದವನು ನಿದ್ರೆಯಲ್ಲೇ ತೀರಿಕೊಂಡ. ಅವನನ್ನು ಅಲ್ಲಿಂದ ಎತ್ತಿದಾಗ ಅವನ ಗೋಣಿಚೀಲದಲ್ಲಿ ಆ ಕಾಲಕ್ಕೆ ನೂರಾರು ನೋಟುಗಳು ಇದ್ದವಂತೆ. ಅವನು ಅದನ್ನು ಬಳಸಿಯೇ ಇರಲಿಲ್ಲ. ಇದಾದ ಎಷ್ಟೋ ವರುಷಗಳ ನಂತರ ಕಮಲ ಹಾಸನನ 'ಪುಷ್ಪಕವಿಮಾನ' ಚಿತ್ರದಲ್ಲಿ ಒಬ್ಬ ಭಿಕ್ಷುಕನ ಪಾತ್ರದ ಸನ್ನಿವೇಶವೂ ಇಂಥದೇ ಇತ್ತು. ನಮ್ಮ ಬುರ್ಡೆಯ ಕತೆ ಅವರಿಗೆ ಹೇಗೆ ತಿಳಿಯಿತು ಎಂದು ನಮಗೆಲ್ಲ ಅಚ್ಚರಿ.

ಇದೇ ಸುಭಾಷ್ ಚೌಕದಲ್ಲಿ ದಯಾ ಒಮ್ಮೆ ನಿಂತು ರಾಜಕಾರಣಿಯ ವರಸೆಯಲ್ಲಿ ಭಾಷಣ ಮಾಡತೊಡಗಿದ. "ಮಹನೀಯರೆ, ಮಹಿಳೆಯರೆ, ನಮ್ಮ ಈ ಊರಿಗೆ ಕುಮಟಾಕ್ಕಿಂತ ಹೊನ್ನಾವರ ಹತ್ತಿರ!" ಎಂದ. ಅವನು ಹೇಳಿದ್ದು ತಿರುವುಮುರುವಾಗಿತ್ತು. ಅಲ್ಲೇ ಇದ್ದ ಚಾಣಾಕ್ಷನೊಬ್ಬ "ಅಲ್ವೋ ದಯಾ, ಗೋಕರ್ಣಕ್ಕೆ ಕುಮಟಾನೇ ಹತ್ತಿರ. ಹೊನ್ನಾವರ ಹೇಗೆ ಹತ್ತಿರವಾಗ್ತದೆ?" ಎಂದು ಪ್ರಶ್ನೆ ಹಾಕಿದ. ಅದಕ್ಕೆ ದಯಾ ತಕ್ಷಣ–"ಮಹನೀಯರೆ, ನಾನು ಭಟಕಳದಲ್ಲಿ ನಿಂತು ಮಾತನಾಡುತ್ತಿದ್ದೇನೆ" ಎಂದನಂತೆ.! ನಸ್ಯಪ್ರಿಯನಾಗಿದ್ದ ಆತ ಚಿಟಿಕೆ ನಸ್ಯ ಕೊಟ್ಟವರ ಜೊತೆ ಖಾಯಂ ವಿನೀತನಾಗಿ ಇರುತ್ತಿದ್ದ.

ಅವರಿಗೆಲ್ಲ ಎಂಥ ನೋವಿತ್ತೋ, ಎಂಥ ಸಂಕಟವಿತ್ತೋ, ಎಂಥ ಸಂಭ್ರಮವಿತ್ತೋ....ಅವರವರ ತಾಯ್ತಂದೆ ಕುಟುಂಬಗಳ ನೋವು ಅದೆಂಥದಿತ್ತೋ....ಒಂದಂತೂ ನಿಜ.....ಊರು ಅವರೆಲ್ಲರನ್ನು ಹೊಟ್ಟೆಯ ಮಕ್ಕಳಂತೆ ತನ್ನ ಮೈತುಂಬ ಆಡಲು ಬಿಟ್ಟಿತು, ನೋಡಿಕೊಂಡಿತು. ನಮ್ಮೆಲ್ಲರನ್ನು ಒರೆಗೆ ಹಚ್ಚಿ ನೋಡಲೆಂದೇ ಬಂದು ಊರ ತುಂಬ ಓಡಾಡಿ ಹೋದ ಮಾರುವೇಷದ ದೇವತೆಗಳು ಅವರು. ಯಾರ ಮನೆಯೊಳಗೂ ಎಂದೂ ಬಾರದ ಈ ಅವಧೂತರು ಎಲ್ಲರ ಅಂತರಂಗದ ಭಾಗವಾಗಿರುವರು.



**(ಜಯಂತ ಕಾಯ್ಕಿಣಿ ಕನ್ನಡದ ಖ್ಯಾತ ಕಥೆಗಾರ, ಕವಿ, ಲಲಿತ ಪ್ರಬಂಧಕಾರ ಹಾಗೂ ಚಲಚಿತ್ರ ಗೀತ ರಚನಾಕಾರ)**

---

**೧೧ನೇ ಪುಟದಿಂದ)**

ಮಾಡಿದ್ದಾರೆ. ಆದರೆ ಜನತೆಯಲ್ಲಿ ತನ್ನ ನಾಯಕ ಎಲ್ಲರ ನಾಯಕನಾಗಿಲ್ಲ ಎಂಬ ಭಾವನೆ ಒಮ್ಮೆ ಮೂಡಿತೆಂದರೆ, ಅವನ ಎಲ್ಲ ಕೆಲಸಗಳೂ ಅನುಮಾನಾಸ್ಪದವಾಗಿ ಕಾಣತೊಡಗಿ ವಿಶ್ವಾಸಾರ್ಹತೆ ಕಳೆದುಕೊಳ್ಳುತ್ತವೆ. ಸಿದ್ಧರಾಮಯ್ಯನವರ ದುರಂತವೂ ಇದೆ.

ಇದು ನಮ್ಮ ಹೊಸ ಮುಖ್ಯಮಂತ್ರಿ ಕುಮಾರಸ್ವಾಮಿಯವರಿಗೆ ಒಂದು ಮುಖ್ಯ ಪಾಠವಾಗಬೇಕು. ಅವರು ಮುಖ್ಯಮಂತ್ರಿಯಾದ ಬಗೆಯ ಬಗ್ಗೆ ಇಂದು ಹಲವಾರು ವಾರೆನೋಟಗಳ ಚರ್ಚೆಗಳಿಗೆ ಆಸ್ಪದವಾಗಿದೆಯಾಗಿದ್ದರೂ, ಅವರು ಎಲ್ಲರ ನಾಯಕರಂತೆ ವರ್ತಿಸಿ ಜನಹಿತದ ಕಾರ್ಯಕ್ರಮಗಳನ್ನು ಮಾಡತೊಡಗಿದರೆ ಈ ಚರ್ಚೆಗಳೆಲ್ಲ ಹಿನ್ನೆಲೆಗೆ ಸರಿಯುತ್ತವೆ..

ನಿಜ, ಅವರಿಗೆ ಯಾವುದೇ ಒಂದು ನಿರ್ದಿಷ್ಟ ರಾಜಕೀಯ ಸಿದ್ಧಾಂತವಿಲ್ಲ. ಅವರ ಮುಂದಿರುವುದು ಕೆಲವು ತತ್ಕಾಲೀನ ಜನಹಿತದ ಜನಪ್ರಿಯ ಕಾರ್ಯಕ್ರಮಗಳು. ಮುಖ್ಯಮಂತ್ರಿಯಾದವರೊಬ್ಬರಿಗೆ ರಾಜ್ಯದ ದೀರ್ಘಕಾಲೀನ ಮುನ್ನಡೆಯ ಸ್ವರೂಪದ ಬಗ್ಗೆ ಒಂದು ಕನಸೂ ಇರಬೇಕು. ಈ ಕಾರ್ಯಕ್ರಮಗಳು ಅದರ ಭಾಗವಾಗಿರಬೇಕು. ಆದರೆ ಆಳದ ಬದ್ಧತೆಯ ಸದಾಶಯಗಳಿದ್ದಲ್ಲಿ ಇದೆಲ್ಲ ಅವರಿಗೆ ಸಮಸ್ಯೆಯಾಗಬಾರದು. ಆದರೆ ಅವರಿಗೆ ಸಮಸ್ಯೆಯಾಗುವಂತೆ ತೋರುವುದು ಅವರು ತಾವು ಸದ್ಯಕ್ಕೆ ಮುಖ್ಯಮಂತ್ರಿಯಾಗುವ ನಿರೀಕ್ಷೆಯೇ ಇಲ್ಲದ ನಿರಾಳತೆಯಲ್ಲಿ ನೀಡಿದ ಭರವಸೆಗಳು. ಸಮ್ಮಿಶ್ರ ಸರ್ಕಾರದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಇವುಗಳಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಅಳವಡಿಸಿಕೊಂಡು ಮತ್ತು ಮಿತ್ರ ಪಕ್ಷದ ಉದಾರತೆಗೆ ಸರಿದೂಗುವಂತಹ ಉದಾರತೆಯನ್ನು ತೋರುವ ಮೂಲಕ ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳಬಹುದು. ಮುಖ್ಯವಾಗಿ ಅವರು ಎಚ್ಚರಿಕೆಯಿಂದಿರಬೇಕಾದದ್ದು, ತಮಗೆ ಸಲಹಾಕಾರರಾಗಿ ಬರಲು ಮುಗಿಬೀಳುವ ಜನರ ಬಗ್ಗೆ. ವಿಶೇಷವಾಗಿ ಜಾತಿವಂತ 'ಸಾಂಸ್ಕೃತಿಕ' ನಾಯಕರ ಬಗ್ಗೆ.



ಇನ್ನು ಯಡಿಯೂರಪ್ಪನವರ ಸ್ಥಿತಿಯ ಬಗ್ಗೆ ಹೇಳುವುದಾದದರೆ, ಕೈಗೆ ಬಂದ ತುತ್ತು ಬಾಯಿಗೆ ಬರದ ಹತಾಶೆಯಲ್ಲಿ ಅವರು ಬುದ್ಧಿಭ್ರಮಣೆಗೆ ಒಳಗಾದಂತೆ ವರ್ತಿಸುತ್ತಿರುವುದನ್ನು ನೋಡಿದರೆ ಬೇಸರವಾಗುತ್ತದೆ. ಅವರು ಮೊನ್ನೆ ಕುಮಾರಸ್ವಾಮಿಯವರ ಮತ ಯಾಚನೆ ಸಂದರ್ಭದ ಅಧಿವೇಶನದಲ್ಲಿ ಆಡಿದ ಸಭ್ಯತೆಯ ಎಲ್ಲೆ ಮೀರಿದ ಮಾತುಗಳು ಮತ್ತು ಆನಂತರ 'ಕರ್ನಾಟಕ ಬಂದ್'ನ ಬೆದರಿಕೆಯೊಡ್ಡಿ ತಮ್ಮ ಶಾಸಕರೊಂದಿಗೆ ಮಾಡಿದ ಸಭಾತ್ಯಾಗ ಪಲಾಯನವಾದಿ ರಾಜಕಾರಣದಂತೆ ಮಾತ್ರ ಕಂಡು ಜನರ ಸಹಾನುಭೂತಿಗೆ ಬದಲಾಗಿ ಜಿಗುಪ್ಸೆಗೆ ಕಾರಣರಾಗಿದ್ದಾರೆ. ಈ ಚುನಾವಣೆಯಲ್ಲಿ ಅವರ ಪಕ್ಷಕ್ಕೆ ಲಭ್ಯವಾದ ಜನ ಬೆಂಬಲ ನೋಡಿದರೆ ಅವರು ಈಗಾಗಲೇ ಭಾವಿಸಿರುವಂತೆ ಕಾಣುವ ಹಾಗೆ ಅವರಿಗೆ ಅವಕಾಶ ಇನ್ನೂ ಪೂರ್ಣ ತಪ್ಪಿಹೋದಂತೆನಿಸುವುದಿಲ್ಲ. ಅವರು ಇನ್ನೂ ಸ್ವಲ್ಪ ದಿನ ಕಾದು ನೋಡಬೇಕು. 'ಪರಿಸ್ಥಿತಿ' ಬದಲಾಗುವ ಸಾಧ್ಯತೆಗಳೂ ಇವೆ!

## ನವಿಲು ಗರಿ



### ನೀರಿನಂತೆ ಹರಿಯುವ ಮನುಷ್ಯನನ್ನು ಹುಡುಕುತ್ತಾ...

ಎಷ್ಟೊಂದು ನೋಡಿದ್ದೇನೆ ಜನರನ್ನ
ಅವರ ಮೈಬಣ್ಣವನ್ನ
ಬಸ್ಸಿನಲ್ಲಿ, ರೈಲಿನಲ್ಲಿ,ಸಭೆ ಸಮಾರಂಭಗಳಲ್ಲಿ
ಒತ್ತಿ ಕುಳಿತಿದ್ದೇನೆ, ಅವರ ಬಟ್ಟೆಯೇನು
ಹರಿದು ಹೋಗಿಲ್ಲ ಮತ್ತು ಷರಟಿನ ಬಣ್ಣವೇನು
ನನ್ನ ಮೈಗೆ ಅಂಟಿ ಕೊಂಡಿಲ್ಲ
ಕೈ ಕುಲುಕಿದ್ದೇನೆ ಅದೆಷ್ಟೋ ಗೆಳೆಯ
ಗೆಳತಿಯರೊಂದಿಗೆ, ಮೃದು ಹಸ್ತದ ಬೆರಳುಗಳು
ಕಿತ್ತು ಬಂದಿಲ್ಲ.



ಚಿತ್ರ: ರೂಪ ಹಾಸನ

ನಾನು ನೋಡಿದ್ದೇನೆ ಅವರನ್ನ, ಅವರು
ನೋಡಿದ್ದಾರೆ ನನ್ನನ್ನ
ಕಂದಿಲ್ಲ ನಮ್ಮ ಬಣ್ಣಗಳು
ಅವರ ಕಣ್ಣುಗಳಿಗೆ ಏನೂ ನೋವಾಗಿಲ್ಲ
ನನ್ನ ಕಣ್ಣುಗುಡ್ಡೆಗಳೇನು ಹೊರಬಂದಿಲ್ಲ

ಎಷ್ಟೊಂದು ಹೊಟೆಲ್ಲುಗಳು ಕಾಫಿ, ಟಿ, ನೀರು
ಬಾರ್‌ಗಳಲ್ಲಿ ವಿಸ್ಕಿ ನಾನು ಕುಡಿದ ಗ್ಲಾಸುಗಳಲ್ಲೇ
ಕುಡಿದಿದ್ದರೂ ಅವರ ತುಟಿಗಳೇನೂ ಹರಿದು ಹೋಗಿಲ್ಲ

ಎಷ್ಟು ಸುಟ್ಟರೂ ಬೇಯುವುದಿಲ್ಲ
ನಿಮ್ಮ ಕನ್ನಡಿಯೊಳಗಿನ ಬೆಂಕಿಯಲ್ಲಿ
ಆಲಪಾದಗಳು ನನ್ನವು
ಹರಳಯ್ಯ ಹಾಕಿದ ಕಣ್ಣೀರು ಜಾರಿದ ತೇವ
ನನ್ನ ಕೆನ್ನೆಯ ಮೇಲಿದೆ.

ಬಗೆ ಬಗೆಯ ಬಣ್ಣದ ಮನುಷ್ಯರನ್ನ
ನೀಲಾಕಾಶಕಿಟ್ಟು ನೋಡುತ್ತಿದ್ದೇನೆ.
ಬಣ್ಣವಿಲ್ಲದೆ ನೀರಿನಂತೆ ಹರಿಯುವ ಮನುಷ್ಯನೊಬ್ಬ ಸಿಗುತ್ತಿಲ್ಲವಲ್ಲ
ಇಷ್ಟು ಕೋಟಿಗಳಲ್ಲಿ; ಆತಂಕವಾಗುತ್ತಿದೆ ನನಗೆ
ಮುಟ್ಟಿಸಿಕೊಂಡವರ ನಡುವೆ ಎಷ್ಟೊಂದು ನಾಟಕ ಇಲ್ಲಿ.

ಇದೆಲ್ಲಾ ಹೇಳಿದ್ದೇ ಅಪರಾಧವೆಂಬಂತೆ
ನನ್ನ ಕೂದಲು ಕೀಳುತ್ತಿದ್ದಾರೆ

ಕಾರಣಗಳೇ ಇಲ್ಲದವನು ನಾನು
ಅವರಿಗೆ ಕಾರಣಗಳೇ ಬೇಕಾಗಿಲ್ಲ
ನನಗಾದ ಕಣ್ಣಗಾಯಕ್ಕೆ ಯಾರೂ ಜವಾಬ್ದಾರರಲ್ಲ
ಬರೆದುಕೊಡು ಎಂದು ಕೇಳುತ್ತಿದ್ದಾರೆ.



ನಾನು ಬಾಬಾ ಸಾಹೇಬರ
ಹೆಸರು ಹೇಳದೆ ಸುಮ್ಮನಿದ್ದೇನೆ.

ಎಲ್ಲವನ್ನೂ ತೋಯ್ಸುವಂತೆ ಮಳೆ ಬರುತ್ತಿದೆ ನಾಳೆ
ನಾವೆಲ್ಲರೂ ಸೇರಿ ಬೊಗಸೆಯಿಡಿದು
ನಮ್ಮೂರ ಕೆರೆಯ ತುಂಬಿಸೋಣ ಎಂದು ಕೇಳುವಾಸೆ

ಅದಕ್ಕವರು ನಮ್ಮ ದನ ಕರುಗಳು
ನೀರನ್ನು ಎಲ್ಲಿ ಕುಡಿಯಬೇಕೆಂದು ಕೇಳುತ್ತಿದ್ದಾರೆ.

ಅವರಿಗೆ ಕೈಮುಗಿದು
ಬೆಳದಿಂಗಳಿಗೆ ಸಹಿ ಹಾಕಿದವರ ಹುಡುಕುತ್ತಿದ್ದೆ.

**–ಸುಬ್ಬು ಹೊಲೆಯಾರ್**

### ಬೀದಿ ಗುಡಿಸೊ ಸದ್ದು

ಬಿಚ್ಚುಗೂದಲ ಮುಡಿಕಟ್ಟಿ
ಸೆರಗು ಸಿಕ್ಕಿಸಿ ದಾಟಿ ಹೊಸಲು
ಬರುವಳವಳು ಮಹಾತಾಯಿ
ಎಲೆ ಅಡಿಕೆಯ ಮೆಲ್ಲುಬಾಯಿ

ನಿತ್ಯ ನಸುಕು ಹರಿಯೋ ಮುನ್ನ
ಕಸಪೊರಕೆ ನೀಡುವನ್ನ
ಕವಳಗೆಂಪಿನಲ್ಲಿ ಕುದ್ದು
ಜೋಗುಳದ ಉಲಿವಂತೆ
ಬೀದಿ ಗುಡಿಸೋ ಸದ್ದು

ಒಟ್ಟು ಮಾಡಿ ಉರಿಯ ಹಚ್ಚಿ
ಸುಟ್ಟ ಬೂದಿ ತುಂಬಿ ಬುಟ್ಟಿ
ನಡು ನೆಟ್ಟಗೆ ಭರಿಸಲಾಗದೇ
ಪೊರೆವಳು ಎತ್ತಾಡಿಸಿ

ನಮ್ಮ ಬೀದಿ ಅವಳ ಕಂದ
ತೊಟ್ಟಿಲಲ್ಲಿ ತೂಗೋ ಅಂದ
ಉಯ್ಯಾಲೆಯ ಬೀಸೊ ಗಾಳಿ
ಉರಿ ಬಿಸಿಲ ಝಳಕೆ ನಡುಗಿ
ಬಿರುಕು ಬಂಧ ಮೂಲ ಮೂಲೆ
ಕಂಬಿ ತಂತಿ ಬೇಲಿ
ಚೌಕ ಚೌಕ ಮನಗಳಿಲ್ಲಿ
ಗೋಡೆ ಪರದೆ ಕಿಟಕಿ

ಮಣ್ಣ ಮಗಳ ಮಂತ್ರದಿಂದ
ಬೂದಿಯಲ್ಲಿ ಕಸಗಳರಳಿ
ಮರಳಿ ಪುನಃ ಬೀದಿಗೆ
ಕಸಕ್ಕೆಲ್ಲ ಮೂಡಿ ರೆಕ್ಕೆ
ನೆಗೆದವು ಆಂತರ್ಯಕ್ಕೆ
ಅವರವರ ಚೌಕದಲ್ಲಿ
ಅವರವರದೆ ಕಸಕಡ್ಡಿ

ಆಗಸದ ಚುಕ್ಕಿಗಳೇ
ಬಿದ್ದವದೋ ಬೀದಿಯಲ್ಲಿ
ಕಟ್ಟು ಬಿಚ್ಚಿ ಪೊರಕೆ ಕಡ್ಡಿ
ಎಲ್ಲ ಇಲ್ಲಿ ಚೆಲ್ಲಾಪಿಲ್ಲಿ



ಸಿಕ್ಕ ಸಿಕ್ಕ ಬಿಸಿಲು ಕೋಲ
ಕಟ್ಟಿ ಒಂದು ಗೂಡಿಸಿ
ಅರಸಿ ಅರಸಿ ಗುಡಿಸಿದಳು
ಬುಟ್ಟಿ ತುಂಬಿ ನಡೆದಳು
ಚುಕ್ಕಿ ಚೂರು ಚೂರು ಹೊತ್ತು
ಯಾರ ಬೀದಿ ಯಾರ ಸೊತ್ತು

**–ಸುನಂದಾ ಕಡಮೆ**

## ಸಾಹಿತ್ಯ–ಸಂಸ್ಕೃತಿ–ಪರಂಪರೆ ಇತ್ಯಾದಿ :

# ಎರಡು ಶ್ರದ್ಧಾಂಜಲಿಗಳು

### ಪ್ರಭುಶಂಕರ ಎಂಬ ಮಾಗಿದ ಹಣ್ಣು




ಇತ್ತೀಚಿನ ದಿನಗಳಲ್ಲಿ ಕನ್ನಡ ಸಾಹಿತ್ಯ–ಸಂಸ್ಕೃತಿ ಕ್ಷೇತ್ರ ತನ್ನ ಎರಡು ವಿಶಿಷ್ಟ ಪ್ರತಿಭೆಗಳನ್ನು ಕಳೆದುಕೊಂಡು ಬಡವಾಗಿದೆ. ಒಬ್ಬರು ಹಿರಿಯ ತಲೆಮಾರಿಗೆ ಸೇರಿದ ಪ್ರಭುಶಂಕರರಾದರೆ, ಇನ್ನೊಬ್ಬರು ಇವರಿಗೆ ಹೋಲಿಸಿದರೆ ಅಷ್ಟೇನೂ ಹಿರಿಯರಲ್ಲದ ಸದಾ ಚಿರ ಯೌವ್ವನಿಗರಂತೆಯೇ ಕಾಣುತ್ತಿದ್ದ ಗಿರಡ್ಡಿ ಗೋವಿಂದರಾಜ.

ಪ್ರಭುಶಂಕರ ಅವರನ್ನು ಕುವೆಂಪು ಪರಂಪರೆಯ ಕೊನೆಯ ಕೊಂಡಿ ಎಂದು ನೆನಪಿಸಿಕೊಳ್ಳಬಹುದು. ಪ್ರಭುಶಂಕರ–ಪ್ರಭುಪ್ರಸಾದ್–ಜಿಎಸ್ಸೆಸ್ ಕುವೆಂಪು ಪ್ರಭಾವದಲ್ಲಿ ಅರಳಿದ ಅಪ್ಪಟ ಜಾತ್ಯತೀತ ತ್ರಿವಳಿ ಎಂದೂ ಗುರುತಿಸಲಾಗುತ್ತದೆ. ಈ ತ್ರಿವಳಿಯಲ್ಲಿ ಕುವೆಂಪು ಅವರೊಂದಿಗೆ ಆಪ್ತತೆ ಪ್ರಭುಶಂಕರರದ್ದೇ ಹೆಚ್ಚು. ಇತರ ಶಿಷ್ಯರಂತೆ ಅವರು ತಮ್ಮ ಗುರುಗಳ ಪ್ರಭಾವಳಿಯಿಂದ ಮಂತ್ರಮುಗ್ಧರಾಗದೆ ತಮ್ಮ ಎಚ್ಚರದಲ್ಲಿ ತಾವಿರುತ್ತಿದ್ದರು. ಹಾಗಾಗಿಯೇ ಒಮ್ಮೆ ವಾಯುವಿಹಾರದ ಸಮಯದಲ್ಲಿ ಕುವೆಂಪು ಮಲೆಮಹದೇಶ್ವರನ ಜಾತ್ರೆಗೆ ಹೊರಟಿದ್ದ ಭಕ್ತರ ಸಾಲನ್ನು ನೋಡಿ ತಮ್ಮ ವೈಚಾರಿಕತೆಯ ಕಟುನುಡಿಗಳ ಬಾಣ ಬಿಟ್ಟಾಗ ಪ್ರಭುಶಂಕರ 'ಭಕ್ತರ ಶ್ರದ್ಧೆಗೆ ಸ್ಪಂದಿಸಲಾಗದಷ್ಟು ನಿಮ್ಮ ವೈಚಾರಿಕತೆ ಜಡವಾಗಿರುವುದು ನನಗೆ ದುಃಖ ತರುತ್ತಿದೆ' ಎಂದು ಕುವೆಂಪು ಅವರ ಮುಖದ ಮೇಲೇ ಹೇಳಲು ಸಾಧ್ಯವಾದದ್ದು. ಹಾಗೇ ಕುವೆಂಪು ಒಮ್ಮೆ ಯಾರದ್ದೋ ಕುಮ್ಮಕ್ಕಿನಲ್ಲಿ ತಮ್ಮ 'ವಿಶ್ವಮಾನವ' ಸಂದೇಶದ ಸಾವಿರ ಪ್ರತಿಗಳನ್ನು ಪುನರ್‌ಮುದ್ರಿಸಿ ಹಂಚುವ ಉತ್ಸಾಹ ತೋರಿದಾಗ, 'ಅಯ್ಯೋ ಸುಮ್ಮನಿರಿ! ನಾನು ಪ್ರಸಾರಾಂಗದ ನಿರ್ದೇಶಕನಾಗಿದ್ದಾಗ ನಿಮ್ಮ ಕುಲಪತಿ ಶಿಷ್ಯನ ನಿರ್ದೇಶನದ ಮೇರೆಗೆ ಮುದ್ರಿಸಿದ ಕಂತೆಗಟ್ಟಲೆ ಪ್ರತಿಗಳನ್ನು ನಾನು ಮೊನ್ನೆ ತಾನೆ ತೂಕಕ್ಕೆ ಹಾಕಿಸಿ ಅದನ್ನು 'ತೂಕದ ಸಾಹಿತ್ಯ'ವಾಗಿ ಮಾರ್ಪಡಿಸಿ ಸಾರ್ವಜನಿಕರ ಉಪಯೋಗಕ್ಕೆ ಬಿಡುಗಡೆ ಮಾಡಿದ್ದೇನೆ' ಎಂದು ಹೇಳಿ ಅವರಲ್ಲಿ ನಗೆ ಉಕ್ಕಿಸಲು ಸಾಧ್ಯವಾಗಿದ್ದು.

ತಮ್ಮ ಗುರು ಮತ್ತು ಇತರಿಬ್ಬರು ಗೆಳೆಯರಂತೆ ಪ್ರಭುಶಂಕರರು ರಾಮಕೃಷ್ಣ ಪರಮಹಂಸರ ಅನುಯಾಯಿಯಾಗಿದ್ದರೂ ಗುರು ಮತ್ತು ಗೆಳೆಯರಿಗಿಲ್ಲದ ಆಪ್ತ ಸಂಬಂಧವನ್ನು ರಾಮಕೃಷ್ಣಾಶ್ರಮದೊಂದಿಗೆ ಇರಿಸಿಕೊಂಡು ಕೊನೆವರೆಗೂ ಅದನ್ನು ಕಾಪಾಡಿಕೊಂಡಿದ್ದರು. ಆ ಕಾರಣದಿಂದಾಗಿಯೋ ಏನೋ ಅವರ ಪ್ರತಿಭೆ ಸೃಜನಶೀಲ ಸಾಹಿತ್ಯ ಪ್ರಕಾರಗಳಲ್ಲಿ ಅಷ್ಟಾಗಿ ಬೆಳೆಯಲಿಲ್ಲವೇನೋ. ನನಗೆ ತಿಳಿದಮಟ್ಟಿಗೆ ಶರಣ ಕ್ರಾಂತಿಯನ್ನು ಕುರಿತ 'ಬೆರಗು'ವೊಂದೇ ಈ ಪ್ರಕಾರದಲ್ಲಿ ಗಮನ ಸೆಳೆಯುವಂತಹ ಪುಸ್ತಕ. ಆದರೆ ಅನುವಾದ ಕ್ಷೇತ್ರದಲ್ಲಿ ಅವರು ಮಾಡಿರುವ ಸಾಧನೆ ಅನುಪಮವಾದದ್ದು. ಕನ್ನಡದ್ದೇ ಕೃತಿಗಳಂತೆಯೇ ಓದಿಸಿಕೊಂಡು ಹೋಗುವ ಅವರ ಅನುವಾದಗಳಲ್ಲಿ 'ಉಪನಿಷತ್ತುಗಳ ಸಂದೇಶ' ಮತ್ತು 'ಖಲೀಲ್ ಗಿಬ್ರಾನ್ ಕನ್ನಡದ ಅಧ್ಯಾತ್ಮಿಕ ಸಾಹಿತ್ಯಕ್ಕೆ ಸಂದ ಅಮೂಲ್ಯ ಕೊಡುಗೆಗಳು.

ಕನ್ನಡ ಸಾಹಿತ್ಯ ಕುರಿತ ಮೊದಲ ಪಿಎಚ್‌ಡಿ ಮಹಾಪ್ರಬಂಧ ಬರೆದ ಹೆಗ್ಗಳಿಕೆಗೂ ಪಾತ್ರರಾದ ಪ್ರಭುಶಂಕರ ಅವರ ವ್ಯಕ್ತಿತ್ವದ ಆಳದಲ್ಲಿ ಅಧ್ಯಾತ್ಮ ಎಷ್ಟು ದಟ್ಟವಾಗಿತ್ತೋ ಅಷ್ಟೇ ದಟ್ಟವಾದ ಹಾಸ್ಯ ಪ್ರವೃತ್ತಿ ಅವರ ಬಾಹ್ಯ ಜೀವನದಲ್ಲಿ ಹಾಸುಹೊಕ್ಕಾಗಿತ್ತು. ವಿದ್ವತ್ತಿನಷ್ಟೇ ವಿಕಟಹಾಸ್ಯಕ್ಕೂ ಕುಪ್ರಸಿದ್ಧರೂ ಸುಪ್ರಸಿದ್ಧರೂ ಆಗಿದ್ದ ಅವರು ಬಹು ತಣ್ಣಗೆ ಹೇಳಿ ಕೇಳಿದವರ ಹೊಟ್ಟೆಯಲ್ಲಿ ನಗೆಯ ಬಿರುಗಾಳಿಯನ್ನೇ ಎಬ್ಬಿಸುತ್ತಿದ್ದ ಹಾಸ್ಯ ಪ್ರಸಂಗಗಳ ಒಂದು ಬೃಹತ್ ಭಂಡಾರವೇ ಅವರ ಶಿಷ್ಯಗಣದ ಬಳಿ ಇದೆ. ಅವರು ತಮ್ಮ ಶಿಷ್ಯಗಣದ ಬಗ್ಗೆ ಮಾಡಿದ ಅವರದೇ ಹಾಸ್ಯ ವಿಶೇಷತೆಯ ಛಾಪಿರುವ ಒಂದು ಕಾಮೆಂಟ್‌ನಿಂದ ನಾನು ಈ ಶಿಷ್ಯವತ್ಸಲರಾದ ಮೇಷ್ಟರನ್ನು ಕುರಿತ ಶ್ರದ್ಧಾಂಜಲಿ ಬರಹವನ್ನು ಮುಗಿಸುವುದು ಉಚಿತ. ಜಗಳಗಂಟ ವಿಚಾರವಾದಿಯೆಂದೇ (ಕು)ಪ್ರಸಿದ್ಧರಾಗಿದ್ದ ತಮ್ಮ ಶಿಷ್ಯ ಕೆ. ರಾಮದಾಸ್ ಅವರ ನೆನಪಿನ ಕಾರ್ಯಕ್ರಮದಲ್ಲಿ ಅವರು ಹೇಳಿದ್ದು : 'ಈ ರಾಮದಾಸ್, ತೇಜಸ್ವಿ, ಶಾಮಣ್ಣ ಇವರೆಲ್ಲ ನನ್ನ ಶಿಷ್ಯರೆಂದೇ ಹೇಳಲಾಗುತ್ತದೆ. ಆದರೆ ಇವರಲ್ಲಿ ಯಾರನ್ನೂ ನಾನು ಎಂದೂ ತರಗತಿಗಳಲ್ಲಿ ನೋಡಿದ ನೆನಪೇ ಇಲ್ಲ! ಶಿಷ್ಯಶ್ರೇಷ್ಠರೆನಿಸಿದವರೆಲ್ಲ ಸೃಷ್ಟಿಯಾಗುವುದು ಹೀಗೇ ಏನೋ!'

### ಚಿರ ಯುವಕ ಗಿರಡ್ಡಿ ಗೋವಿಂದರಾಜ



ಇನ್ನು ಗಿರಡ್ಡಿ ಗೋವಿಂದರಾಜ ಅವರ ನಿರ್ಗಮನ ನಂಬಲಾಗದಷ್ಟು ಅನಿರೀಕ್ಷಿತವಾಗಿದೆ. ಕಳೆದ ಐವತ್ತಕ್ಕೂ ಹೆಚ್ಚು ವರ್ಷಗಳಿಂದ ಕನ್ನಡ ಸಾಹಿತ್ಯ–ಸಂಸ್ಕೃತಿ ಕ್ಷೇತ್ರದಲ್ಲಿ ಸಾಮಾನ್ಯರಂತೆ ಸಾಮಾನ್ಯರಾಗಿ ಎಲ್ಲರೊಡನೆ ಆತ್ಮೀಯತೆಯಿಂದ ಒಡನಾಡುತ್ತಿದ್ದ ಅವರ ಹಠಾತ್ ಸಾವು ಬಹಳ ಕಾಲ ಅನುಭವಕ್ಕೆ ಬಾರದಷ್ಟು ನಮ್ಮ ನಡುವೆ ಅವರ ಉಪಸ್ಥಿತಿ ಜೀವಂತವಾಗಿದೆ.

ನಮ್ಮ ತಲೆಮಾರಿನ ತಲೆಗಳಿಗೆ ಸಾಹಿತ್ಯದ 'ಹುಚ್ಚು' ಹತ್ತತೊಡಗಿದ್ದಾಗ ಹತ್ತಿರದಿಂದ ನಮ್ಮ ಕುತೂಹಲವನ್ನು ಕೆರಳಿಸಿದವರು ಲಂಕೇಶ್–ತೇಜಸ್ವಿ–ಅನಂತಮೂರ್ತಿ ಎಂಬ ತ್ರಿವಳಿಯಾದರೆ ದೂರದ ಧಾರವಾಡದ ಕಡೆಯಿದ ನಮ್ಮ ಕುತೂಹಲವನ್ನು ಕೆರಳಿಸಿದವರು ಚಂಪಾ–ಗಿರಡ್ಡಿ–ಪಟ್ಟಣಶೆಟ್ಟಿ ಎಂಬ ತ್ರಿವಳಿ. ಅಡಿಗರ ಸಂಪಾದಕತ್ವದ 'ಸಾಕ್ಷಿ'ಯ ಬೌದ್ಧಿಕ ಎತ್ತರಗಳನ್ನು ಎಟುಕಿಸಿಕೊಳ್ಳಲಾಗದಿದ್ದ ನಮ್ಮನ್ನು ಈ ತ್ರಿವಳಿಯ ಸಂಪಾದಕತ್ವದ 'ಸಂಕ್ರಮಣ' ತನ್ನ ನವ ಯೌವ್ವನದ ಉತ್ಸಾಹದ ಮೂಲಕ ಸೆಳೆದಿತ್ತು. ನಂತರದ ದಿನಗಳಲ್ಲಿ ಈ ತ್ರಿವಳಿ ಒಡೆದು ಹೋಗಿ ಪತ್ರಿಕೆ ಹಾದಿ ತಪ್ಪಿ ಕೊನೆಗೆ ಅದು ಚಂಪಾರ ಎಲ್ಲ ತರಲೆ–ತಾಪ–ತ್ರಯಗಳ ಮುಖವಾಣಿಯಾಗಿ ಅವನತಿಗೊಂಡದ್ದು ಬೇರೆ ವಿಷಯ. ಆದರೆ ಆಗತಾನೇ ಕನ್ನಡ ಸಾಹಿತ್ಯದಲ್ಲಿ ವಿಮರ್ಶೆ ಎನ್ನುವುದು ಒಂದು ಅಧ್ಯಯನ ಶಿಸ್ತಾಗಿ ವಿಕಾಸಗೊಳ್ಳುತ್ತಿದ್ದ ಸಂದರ್ಭದಲ್ಲಿ 'ಸಂಕ್ರಮಣ'ದ ಸಂಪಾದಕತ್ವದ ಹೊಣೆ ಗಿರಡ್ಡಿಯವರನ್ನು ಕನ್ನಡದ ಓರ್ವ ಗಂಭೀರ ವಿಮರ್ಶಕರನ್ನಾಗಿ ರೂಪಿಸಿತು.. ಅವರೇ ಹೇಳಿಕೊಂಡಂತೆ ಆ ಪತ್ರಿಕೆಯ ಪುಟಗಳನ್ನು ತುಂಬಲು ಅವರು ವಿಮರ್ಶೆ ಬರೆಯತೊಡಗಿದರು.

ಹಾಗೆ ನೋಡಿದರೆ ಆಗ ಅವರ ಮೂಲ ಆಸಕ್ತಿ ಕಾವ್ಯ ಮತ್ತು ಕಥೆಗಾರಿಕೆಯಾಗಿತ್ತು. ಎರಡು–ಮೂರು ಕವನ ಸಂಕಲನಗಳನ್ನೂ ಹೊರತಂದಿದ್ದರು. ಒಂದೆರೆಡು ಕಥೆಗಳನ್ನೂ ಬರೆದಿದ್ದರು. ಆದರೆ 'ಹಂಗು' ಮತ್ತು 'ಮಣ್ಣು' ಎಂಬೆರೆಡು ಕಥೆಗಳ ಹೊರತಾಗಿ ಮತ್ತಾವ ಸೃಜನಾತ್ಮಕ ಕೃತಿಯೂ ಓದುಗರ ಗಮನ ಸೆಳೆದಂತಿಲ್ಲ. ಆದರೆ ಅವರ 'ನವ್ಯ ವಿಮರ್ಶೆ', 'ಸಾಹಿತ್ಯ ಮತ್ತು ಪರಂಪರೆ' ಮತ್ತು 'ವಚನ ವಿನ್ಯಾಸ' ಗಿರಡ್ಡಿಯವರ ವಿಶಿಷ್ಟ ಪಾಂಡಿತ್ಯ–ಪ್ರತಿಭೆಗೆ ಸಾಕ್ಷಿಗಳಾಗಿವೆ.

ನಿಜ, ಅವರ ಸಾಹಿತ್ಯ ಗ್ರಹಿಕೆಗಳು ನವ್ಯ ಸಂಪ್ರದಾಯದ ಬೌದ್ಧಿಕ ರಚನೆಗಳಲ್ಲೇ ಬಲವಾಗಿ ಊರಿಕೊಂಡುಬಿಟ್ಟಿದ್ದವು, ಅದೇ ಅವರ ವಿಮರ್ಶೆಯ ಮಿತಿಗಳೂ ಆಗಿದ್ದವು ಎಂಬ ಟೀಕೆ ಇದೆ. ಆದರೆ ಈ ಮಿತಿಗಳನ್ನು ಮೀರುವ ಪ್ರಯತ್ನಗಳನ್ನು ನಾವು ಅವರ ಶಿವರಾಮ ಕಾರಂತರ ಕಾದಂಬರಿಗಳು, ಮಾಸ್ತಿಯವರ ಕಥೆಗಳು ಬೇಂದ್ರೆಯವರ ಕವನಗಳು ಮತ್ತು ಜನ್ನನ 'ಯಶೋಧರೆ ಚರಿತೆ' ಕುರಿತ ಹೊಸ ಒಳನೋಟಗಳುಳ್ಳ ಬರಹಗಳಲ್ಲಿ ನೋಡಬಹುದು. ಅದೇನೇ ಇರಲಿ, ಅವರ ವಿಮರ್ಶೆ ಎಂದೂ ಅಪ್ರಾಮಾಣಿಕವಾಗಿರಲಿಲ್ಲ ಎಂಬುದು ನಮಗೆ ಮುಖ್ಯವಾಗಬೇಕು.

ನಾನು ಚಿತ್ರದುರ್ಗದಲ್ಲಿದ್ದಾಗ ಗಿರಡ್ಡಿಯವರನ್ನು 'ಅಭಿರುಚಿ' ಎಂಬ ನಮ್ಮ ಸಾಹಿತ್ಯ ವೇದಿಕೆಗೆ ಕರೆಸಿದ್ದವು. ಆಗ ಅವರು ಸಾಹಿತ್ಯ ವೇದಿಕೆಗಳ ರಾಜಕಾರಣದ ಬಗ್ಗೆ ಸ್ವಾರಸ್ಯಕರವಾಗಿ ಮಾತನಾಡುತ್ತಾ ಉಪಕಥೆಯೊಂದನ್ನು ಹೇಳಿದ್ದರು :

ಗುಲ್ಬರ್ಗದಲ್ಲಿ ಇಂತಹುದೇ ಒಂದು ಸಾಹಿತ್ಯವೇದಿಕೆ ಇತ್ತು. ಚೆನ್ನಾಗೇ ನಡೀತಿತ್ತು. ಆದರೆ ಸ್ವಲ್ಪ ಕಾಲಕ್ಕೆ ಈ ವೇದಿಕೆಯ ಹಿಂದೆ ಬ್ರಾಹ್ಮಣರ ರಾಜಕಾರಣವಿದೆ ಎಂದು ಕೆಲ ಲಿಂಗಾಯತ ಸಾಹಿತ್ಯಾಭಿಮಾನಿಗಳಿಗೆ ಗುಮಾನಿ ಶುರುವಾಗಿ ಅವರೆಲ್ಲ ಸೇರಿ ಇನ್ನೊಂದು ಸಾಹಿತ್ಯ ವೇದಿಕೆಯನ್ನು ಆರಂಭಿಸಿದರು. ಅದು ಯಾವ ಕಾರಣಕ್ಕೆ ಸ್ಥಾಪಿತವಾಯಿತೋ ಆ ಕಾರಣದಿಂದಲೇ ಜನರನ್ನು ಆಕರ್ಷಿಸಿ ಚೆನ್ನಾಗಿ ನಡೆಯಲಾರಂಭಿಸಿತು. ಇದನ್ನು ನೋಡಿ ಮೊದಲ ವೇದಿಕೆಯವರು ಹೇಗೂ ಈ ವೇದಿಕೆ ಚೆನ್ನಾಗಿ ನಡೆಯುತ್ತಿದೆಯಲ್ಲ, ಒಂದು ಊರಿಗೆ ಎರಡು ಸಾಹಿತ್ಯ ವೇದಿಕೆಗಳು ಏಕೆಂದು ತಮ್ಮದನ್ನು ನಿಲ್ಲಿಸಿದರು. ಇದನ್ನು ಗಮನಿಸಿದ ಎರಡನೇ ವೇದಿಕೆಯವರು ಅವರು ನಿಲ್ಲಿಸಿದ ಮೇಲೆ ತಮ್ಮದೇನು ಕೆಲಸವೆಂದು ತಮ್ಮದನ್ನೂ ಮುಚ್ಚಿದರು!

ಈ ಉಪಕಥೆ ಗಿರಡ್ಡಿಯವರ ಸಾಹಿತ್ಯ ಚಿಂತನೆಯ ರೂಹನ್ನೂ ಪರಿಚಯಿಸುವಂತಿದೆ ಎಂದು ನಾನು ಭಾವಿಸಿದ್ದೇನೆ.

**–ಡಿಎಸ್ಸೆನ್**

# ಜೈನ ಕಥಾ ಸರಿತ್ಸಾಗರ

ಧರ್ಮ ವಿಚಾರ



‘ಯೊಂಗ್‌ನಂತಹ ಮಹಾನ್ ಆಧುನಿಕ ಮನೋವಿಜ್ಞಾನಿಯ ಕುತೂಹಲವನ್ನು ಕೆರಳಿಸಿ ಅವನಿಂದ ವಿಶ್ಲೇಷಣೆಗೊಳಗಾಗಿರುವ’ ಜೈನ ಕಥೆಗಳು ತಾವು ಸ್ಫೂರ್ತಿ ಪಡೆದ ಧರ್ಮದ ಸಂಕೀರ್ಣ ಅರಿವನ್ನು ಸೂಚಿಸುವಂತೆಯೇ ಇವೆ. ಮನುಷ್ಯನು ಅಮೃತಪುತ್ರ ಎಂಬ ವೇದಗಳ ಮಾತನ್ನು ಒಪ್ಪದ ಜೈನ ಧರ್ಮ ಮನುಷ್ಯನಲ್ಲಿ ದಿವ್ಯತೆಯಂತೆ ಕೇಡೂ ಇರುವುದರಿಂದ ಅವನು ಜನ್ಮಾಂತರಗಳಲ್ಲಿ ಏಳು ಬೀಳುಗಳೆರಡನ್ನೂ ಕಾಣುತ್ತಾ ಕೇಡನ್ನು ದಾಟಲು ತೊಳಲಾಡುತ್ತಿರುತ್ತಾನೆ. ಈ ತೊಳಲಾಟದ ಹಲವು ಚಲನೆಗಳನ್ನು ಈ ಕಥೆಗಳು ಕಟ್ಟಿಕೊಡುತ್ತವೆ. ಕಥೆಗಳ ಸ್ವಾರಸ್ಯ ಹೆಚ್ಚಿಸಲು ಕೆಲವೆಡೆ ನಿರೂಪಣೆಯಲ್ಲಿ ಸಣ್ಣ ಬದಲಾವಣೆಗಳನ್ನು ಮಾಡಿಕೊಳ್ಳಲಾಗಿದೆ.–**ಸಂ.**

### ಸ್ವಾರ್ಥ

**ಸಾ**ನಂದಗಿರಿಪುರದ ಪುಳಿಂದ ಅಮಿತ, ದೈತ್ಯವನ ಎಂಬ ಅಡವಿಯಲ್ಲಿ ಅಲೆದಾಡುತ್ತಿದ್ದಾಗ ದಾಹದಿಂದ ಬಳಲಿ ಕುಸಿದ. ಅವನ ಸ್ಥಿತಿಯನ್ನು ನೋಡಿ ಮರುಗಿದ ಕೋತಿಯೊಂದು ಅವನಿಗೆ ನೀರಿನ ತಾಣವನ್ನು ತೋರಿಸಿತು. ನೀರು ಕುಡಿದು ದಾಹ ತಣಿಸಿಕೊಂಡ ಅವನು ಮುಂದೆ ದಾರಿಯಲ್ಲಿ ನೀರು ಸಿಗುವುದೋ ಇಲ್ಲವೋ ಎಂಬ ಆತಂಕಕ್ಕೆ ಸಿಕ್ಕಿ ಆ ಕೋತಿಯನ್ನು ಹಿಡಿದು ಕೊಂದು ಅದರ ಚರ್ಮದಿಂದ ಚೀಲವೊಂದನ್ನು ಮಾಡಿಕೊಂಡು ಅದರಲ್ಲಿ ನೀರು ತುಂಬಿಕೊಂಡು ಮುಂದೆ ಸಾಗಿದ.

### ಮರೆವು

ಅವನಿಭೂಷಣ ಪುರದ ಬಡಗಿ ವಿದ್ಯಾಚಲಕ್ಕೆ ಬಂದು ತನಗೆ ಬೇಕಾದ ಮರವನ್ನು ಅರಸುತ್ತಿದ್ದಾಗ ಮದಗಜ ಅಟ್ಟಿಸಿಕೊಂಡು ಬಂದಿತು. ಆಗ ಒಂದು ಹೆಮ್ಮರವನ್ನೇರಿ ಉಪಾಯದಿಂದ ಪಾರಾದ. ಆ ಮದಗಜ ಅಲ್ಲಿಂದ ತೆರಳಿದ ನಂತರ ನಿಟ್ಟುಸಿರಿಟ್ಟು ಮರದಿಂದ ಕೆಳಗಿಳಿದ. ಅವನು ಒಮ್ಮೆ ತಲೆಯೆತ್ತಿ ಆ ಮರವನ್ನೊಮ್ಮೆ ನೋಡಿದ. ಕೂಡಲೇ ಅವನ ಬಡಗಿ ಮನಸ್ಸು ಜಾಗೃತವಾಗಿ ಇಂತಹ ಬೆಲೆ ಬಾಳುವ ಮರವನ್ನು ಬಿಟ್ಟರುವರುಂಟೆ! ಎಂದು ಆಲೋಚಿಸಿ ಆ ಮರವನ್ನು ಕಡಿದು ತನ್ನ ಮನೆಗೆ ಸಾಗಿಸಿದ.

### ಮರ್ಕಟ ಮನ!

ಒಂದು ಮರದ ಮೇಲೆ ಒಂದು ಕೋತಿಯೂ ಗೀಜಗ ಹಕ್ಕಿಯೂ ಇದ್ದಾಗ ವಿಪರೀತ ಮಳೆ ಶುರುವಾಯಿತು. ಮಳೆ ಭಾರಿಯಾಗಿ ಸುರಿಯತೊಡಗಿದಾಗ ಕೋತಿಗೆ ಮರದ ಮೇಲೆ ಎಲ್ಲೂ ಪೂರ್ತಿ ಆಶ್ರಯ ಸಿಗದೆ ಮಳೆಯಲ್ಲಿ ಪೂರ್ತಿ ನೆನೆದು ಶೀತದಿಂದ ಕಿರುಚಾಡತೊಡಗಿತು. ಇದನ್ನು ಕೇಳಿಸಿಕೊಂಡ ಗೀಜಗನ ಹಕ್ಕಿ ಗೂಡಿನಿಂದ ಹಣಕಿ ಕೈಕಾಲುಗಳಿರುವ ನೀನು ಗೂಡೊಂದನ್ನು ಕಟ್ಟಿಕೊಳ್ಳಲಾಗಲಿಲ್ಲವೇ, ಮಳೆ ನಿಂತಾದ ಮೇಲಾದರೂ ಅದನ್ನು ಮಾಡಿಕೋ ಎಂದು ಬುದ್ಧಿ ಹೇಳಿತು. ಇದರಿಂದ ರೇಗಿ ಹೋದ ಕೋತಿ ನನ್ನ ಕೈಕಾಲುಗಳು ಏಕಿವೆ ಈಗ ನೋಡು’ ಎಂದು ಗೀಜಗನ ಗೂಡನ್ನು ಕಿತ್ತು ಬಿಸಾಡಿತು!

### ಜೀವ ದಾಹದ ಮೃತ್ಯು ಬಲೆ!

ಅರಣ್ಯದಲ್ಲಿ ಅಲೆಯುತ್ತಿದ್ದ ಬೇಡನೊಬ್ಬ ಎದುರಾದ ಆನೆಯನ್ನು ನೋಡಿ ಗಾಬರಿಗೊಂಡು ಮರವೊಂದರ ಮರೆಗೆ ಬಂದು ಅದಕ್ಕೆ ತನ್ನ ಬಿಲ್ಲಿನಿಂದ ಬಾಣ ಬಿಟ್ಟನು. ನೋವು ತಿಂದ ಆನೆ ಕುಸಿದುಬಿತ್ತು. ಈ ಶಬ್ದ ಕೇಳಿ ಗಾಬರಿಯಾಗಿ ಮರದ ಪೊಟರೆಯಿಂದ ಹೊರಬಂದ ಹಾವೊಂದು ಆ ಬೇಡನನ್ನು ಕಚ್ಚಿತು. ಬೇಡ ಕೋಪದಿಂದ ಅದನ್ನು ಹೊಡೆದು ಕೊಂದು, ನಂತರ ವಿಷವೇರಿ ತಾನೂ ಸತ್ತು ಬಿದ್ದನು. ಇದನ್ನೆಲ್ಲ ಮರೆಯಲ್ಲಿ ನಿಂತು ನೋಡುತ್ತಿದ್ದ ನರಿಯೊಂದು ಒಳ್ಳೆಯ ಮಾಂಸದ ಭೋಜನದ ಆಸೆಯಲ್ಲಿ ಹತ್ತಿರ ಬಂದು ಆತುರದಿಂದ ಮೊದಲು ಅಲ್ಲಿ ಬಿದ್ದಿದ್ದ ಚರ್ಮದಿಂದ ಮಾಡಿದ ಬಿಲ್ಲಿನ ಹುರಿಗೆ ಬಾಯಿ ಹಾಕಿತು. ಹುರಿ ಹರಿದ ಏಟಿಗೆ ನರಿಗೆ ತೀವ್ರವಾದ ಪೆಟ್ಟು ಬಿದ್ದು ಅದೂ ಸತ್ತಿತು.

### ಅಹಿಂಸೆಯ ಅಂತರಾಳ

ಕೃಷ್ಣ ಪಕ್ಷದ ಚತುರ್ದಶಿಯ ದಿನ ಶ್ವೇತವರ್ಣದ ಕುರಿಯನ್ನು ಯಾರೂ ನೋಡದ ಜಾಗದಲ್ಲಿ ಕೊಲ್ಲಬೇಕು. ಪುನಃ ಅದರ ಮಾಂಸವನ್ನು ಬೇಯಿಸಿ ತಿನ್ನಬೇಕು. ಅಂತಹವರು ಮಾತ್ರ ತನ್ನಲ್ಲಿ ವಿದ್ಯೆ ಕಲಿಯಲು ಅರ್ಹರು ಎಂದ ಗುರುಗಳ ಮಾತನ್ನು ಕೇಳಿದ ಶಿಕ್ಷಾರ್ಥಿಯೊಬ್ಬ ಹಾಗೇ ಮಾಡಿದ. ಗುರು ಆತನಿಗೆ ತನ್ನ ಮಾತು ಪಾಲನೆಯಾಗಿಲ್ಲ ಎಂದು ತಿರಸ್ಕರಿಸಿದರು. ಇನ್ನೊಬ್ಬ ಶಿಷ್ಯ ಬಂದು ಗುರುಗಳಿಗೆ ಹೀಗೆ ಹೇಳಿದ: ‘ನನಗೆ ಕೊಲ್ಲಲು ಆಗುತ್ತಿಲ್ಲ. ಏಕೆಂದರೆ, ಕತ್ತಲೆಯ ಬಯಲಿಗೆ ಹೋದರೆ ನಕ್ಷತ್ರಗಳು ನೋಡುತ್ತವೆ ಎನಿಸುತ್ತದೆ. ಗುಡಿ ಹೊಕ್ಕರೆ ವಿಗ್ರಹ ನೋಡುತ್ತಿದೆ ಎಂಬ ಆತಂಕವಾಗುತ್ತದೆ. ಶೂನ್ಯ ಗೃಹಕ್ಕೆ ಹೋದರೆ ಅಲ್ಲಿ ನಾನು ಸ್ವಯಂ ನೋಡುತ್ತಿದ್ದೇನೆ. ಈ ಕುರಿಯೂ ನನ್ನನ್ನು ನೋಡುತ್ತಿದೆ. ಅಂತರ್ಜ್ಞಾನಿ ಪುರುಷರಿದ್ದರೆ, ಅವರೂ ನೋಡುತ್ತಿರುತ್ತಾರೆ ಎನಿಸುತ್ತದೆ. ಇದರಿಂದ ನನಗೆ ಹಿಂಸೆಯಾಗುತ್ತಿದೆ.’ ಗುರುಗಳು ಅವನನ್ನು ಶಿಷ್ಯನನ್ನಾಗಿ ಸ್ವೀಕರಿಸಿ ಅಹಿಂಸೆಯ ಅಂತರಾಳದ ತತ್ವವನ್ನು ಬೋಧಿಸಿದರು.

### ಸಮೃದ್ಧಿ–ಸಂಭ್ರಮ ಎಂದರೆ...

ಒಮ್ಮೆ ನಗ್ನಜಿತ್ ರಾಜನು ತನ್ನ ಪರಿವಾರದೊಂದಿಗೆ ಪ್ರವಾಸ ಹೊರಟನು. ದಾರಿಯಲ್ಲಿ ಎದುರಾದ ವನವೊಂದರಲ್ಲಿ ಮಾವಿನ ಮರ ಪಲ್ಲವಿಸಿ ಹೂಗಳಿಂದ ಸಂಭ್ರಮಿಸುತ್ತಿತ್ತು. ಅದನ್ನು ನೋಡಿ ರಾಜನು ಮರದ ಒಂದು ಪುಷ್ಪಮಂಜರಿಯನ್ನು ಕಿತ್ತು ಮೂಸಿ ಆನಂದಿಸುತ್ತಾ ಮುನ್ನಡೆದನು. ಅವನ ಹಿಂದೆ ಬರುತ್ತಿದ್ದ ಪರಿವಾರವದ ಪ್ರತಿಯೊಬ್ಬರೂ ಯಥಾ ರಾಜಾ ತಥಾ ಪ್ರಜೆ ಎಂಬಂತೆ ತಾವೂ ಒಂದೊಂದು ಹೂಗೊಂಚನ್ನು ಕಿತ್ತು ಮೂಸುತ್ತಾ ನಡೆದರು.

ಪ್ರವಾಸದಿಂದ ಹಿಂದಿರುಗುತ್ತಿದ್ದ ಸಮಯದಲ್ಲಿ ನಗ್ನಜಿತ್ ರಾಜನು ಆ ಮರ ಈಗ ಬೋಳಾಗಿ ನಿಂತಿರುವುದನ್ನು ಕಂಡು ಆಶ್ಚರ್ಯಚಕಿತನಾಗಿ, ಇದು ಹೇಗೆ ಸಂಭವಿಸಿತೆಂದು ವಿಚಾರಿಸಿದಾಗ ಸತ್ಯ ತಿಳಿದು ಕೂಡಲೇ ರಾಜನಿಗೆ ಜ್ಞಾನೋದಯವಾಯಿತು. ಎಲ್ಲಿ ಸಮೃದ್ಧಿ ಸಂಭ್ರಮ ಇರುತ್ತದೋ ಅಲ್ಲಿ ವಿನಾಶ ಖಂಡಿತವೆಂದು ಅವನಿಗೆ ಬೋಧೆಯಾಗಿ ವೈರಾಗ್ಯ ತಾಳಿ ಅರಮನೆ ಬಿಟ್ಟು ಕಾಡಿನತ್ತ ತೆರಳಿದನು.

### ಸಾವಿರ ಹೆಂಡಿರ ಸಹವಾಸ!

ಹದಿನಾರು ಸಾವಿರ ಮಡದಿಯರ ಚೇಟ ರಾಜ ಒಮ್ಮೆ ಆಕಾಶದಲ್ಲಿ ಮಾಂಸದ ತುಂಡೊಂದಕ್ಕಾಗಿ ಕಚ್ಚಾಡಿ ನೆಲಕ್ಕೆ ಸತ್ತು ಬೀಳುತ್ತಿದ್ದ ಹಕ್ಕಿಗಳ ಹಿಂಡೊಂದನ್ನು ನೋಡಿ ಸತ್ಯದ ಸಾಕ್ಷಾತ್ಕಾರವಾಗಿ, ಎಲ್ಲ ಬಿಟ್ಟು ಕಾಡು ಸೇರಿಕೊಂಡನು.

### ಕಳ್ಳನಿಗೆ ಲಭಿಸಿದ ವೈರಾಗ್ಯಭಾಗ್ಯ!

ಸತ್ಯಕೀರ್ತಿ ಎಂಬ ಗುಣಾಢ್ಯ ಶ್ರೀಮಂತನ ಮನೆಗೆ ಕುಂಭ ಎಂಬ ಕಳ್ಳ ಪ್ರವೇಶಿಸಿದನು. ಅವನ್ನು ನೋಡಿದ ಸತ್ಯಕೀರ್ತಿಯ ಹೆಂಡತಿಯು ಕುಂಭನಲ್ಲಿ ಮೋಹಗೊಂಡು ಒಟ್ಟಿಗೆ ಓಡಿಹೋಗುವ ಸಲಹೆಯನ್ನಿತ್ತಳು. ಇದರಿಂದ ಆಳದ ಚಿಂತೆಗೆ ಬಿದ್ದ ಕುಂಭನಲ್ಲಿ ವೈರಾಗ್ಯ ಉದಿಸಿ ಅವನು ಸಂನ್ಯಾಸ ಸ್ವೀಕರಿಸಿದನು.

### ವಿಜಯದ ಆಯಾಸ...

ಯುದ್ಧವೊಂದನ್ನು ಗೆದ್ದು ಬಂದ ರತ್ನಸೇನ ಚಕ್ರವರ್ತಿಯನ್ನು ಅರಮನೆಯ ಬಾಗಿಲಲ್ಲಿ ಆರತಿ ಎತ್ತಿ ಬರಮಾಡಿಕೊಳ್ಳಲಾಯಿತು. ಯುದ್ಧದಲ್ಲಿ ಹೋರಾಡಿ ಬಳಲಿದ್ದ ಚಕ್ರವತಿ ಒಳಗೆ ಬಂದು ಒಂದು ಮೆತ್ತೆಯ ಮೇಲೆ ಕೂತನು. ಸ್ವಲ್ಪ ನೆಮ್ಮದಿಯೆನಿಸಿತು. ನಂತರ ಸೇವಕನು ಬಂದು ಅವನ ಕೈಯಲ್ಲಿದ್ದ ಖಡ್ಗ ತೆಗೆದು ಬದಿಗಿಟ್ಟನು ಚಕ್ರವರ್ತಿಯ ಜೀವಕ್ಕೆ ಮತ್ತಷ್ಟು ನೆಮ್ಮದಿ ಎನಿಸಿತು. ಸೇವಕ ಅವನ ಶಿರಸ್ತ್ರಾಣವನ್ನು ತೆಗೆದನು. ಚಕ್ರವರ್ತಿಗೆ ಮಗದಷ್ಟು ನೆಮ್ಮದಿ ಎನಿಸಿತು. ನಂತರ ಭುಜಕೀರ್ತಿ, ಎದೆ ಕವಚ, ಪಾದರಕ್ಷೆ ಹೀಗೆ ಒಂದೊಂದನ್ನೇ ಸೇವಕ ಚಕ್ರವರ್ತಿಯ ಮೈಮೇಲಿಂದ ತೆಗೆಯುತ್ತಾ ಹೋದಂತೆ ಹಂತಹಂತವಾಗಿ ಚಕ್ರವರ್ತಿಯ ಮನಸ್ಸು ನಿರಾಳವಾಗುತ್ತಾ ಹೋಗಿ ಅವನ ಮನಸ್ಸು ಆತ್ಯಂತಿಕ ನೆಮ್ಮದಿಗಾಗಿ ತುಡಿಯುತ್ತಾ ಚಕ್ರವರ್ತಿಯು ಎದ್ದು ನಿಧಾನವಾಗಿ ಅರಮನೆಯನ್ನು ಬಿಟ್ಟು ವಿಜಯೋತ್ಸವ ಆಚರಿಸುತ್ತಿದ್ದ ಜನರ ಮಧ್ಯೆ ಹಾದು ಊರ ಬಾಗಿಲು ದಾಟಿ ಅರಣ್ಯದತ್ತ ಹೆಜ್ಜೆಗಳನ್ನಿಟ್ಟನು.

### ಸಂಸಾರ ಸುಖ!


ಅರಣ್ಯದಲ್ಲಿ ಎದುರಾದ ಮದಗಜದಿಂದ ತಪ್ಪಿಸಿಕೊಳ್ಳಲು ಕಂದಕವೊಂದರ ಬುಡದಲ್ಲಿದ್ದ ಮರವೊಂದರ ಸಣ್ಣ ಟೊಂಗೆ ಹಿಡಿದು ನೇತಾಡತೊಡಗಿದ ಮನುಷ್ಯನೊಬ್ಬ ಕೆಳಗೆ ನೋಡಿದರೆ ಹೆಡೆಯಾಡುಸುತ್ತಿರುವ ಸರ್ಪ, ಮೇಲೆ ನೋಡಿದರೆ ಹಿಡಿದ ಟೊಂಗೆಯನ್ನು ಇಲಿಗಳು ತಿಂದು ಕತ್ತರಿಸುತ್ತಿವೆ!! ಈ ಮಧ್ಯೆ ಆನೆ ಬಂದು ಮರವನ್ನು ಅಲ್ಲಾಡಿಸುತ್ತಿದೆ! ಇದರಿಂದ ಮರದಲ್ಲಿದ್ದ ಜೇನುಗೂಡು ಕದಡಿ ಜೇನುಹುಳುಗಳು ದೇಹವನ್ನೆಲ್ಲ ಮುತ್ತಿ ಕಚ್ಚುತ್ತಿವೆ. ಇದರ ಮಧ್ಯೆ ಜೇನುಗೂಡಿನಿಂದ ಜೇನು ಹನಿಯೊಂದು ಒಸರಿ ಅವನ ಬಾಯನ್ನು ಸವಿ ಮಾಡಿದೆ! ಇನ್ನೊಂದು, ಮತ್ತೊಂದು ಹನಿಗಾಗಿ ಅವನು ತಹತಹಿಸುತ್ತಿದ್ದಾನೆ!!

(ಸಂಗ್ರಹ : **ಡಿಎಸ್ಸೆನ್** ಮತ್ತು **ಪ್ರೊ. ಬಿ.ಪಿ. ವೀರೇಂದ್ರ ಕುಮಾರ್**)

## ಪುಸ್ತಕಾವಲೋಕನ

ಪು : **ಕಾಲಕ್ರಮ** ಲೇ : **ಡಿ.ಎಸ್. ನಾಗಭೂಷಣ** ಪ್ರ : **ರೂಪ ಪ್ರಕಾಶನ,** ಮೈಸೂರು ಪು : **೪೮೪** ಬೆಲೆ : **ರೂ. ೩೭೦/–**

# ಸಮುದಾಯದ ಅಂತರಂಗದ ಒಳತೋಟಗಳು




**ಡಿ**.ಎಸ್. ನಾಗಭೂಷಣರ ಕಾಲಕ್ರಮ ಕೃತಿಯನ್ನು ಓದಿ ಮುಗಿಸಿದ ಈ ಸಂದರ್ಭವು ಹೀಗಿರುತ್ತದೆ ಎಂದು ಊಹಿಸಿರಲಿಲ್ಲ. ಇತ್ತೀಚಿನ ಚುನಾವಣೆಗಳ ಫಲಿತಾಂಶಗಳ ದಿನದಿಂದ ಆರಂಭಿಸಿ ಇದೀಗ ಎಡ್ಯೂರಪ್ಪನವರ ರಾಜೀನಾಮೆ–ಯವರೆಗೆ ಈ ಕೃತಿಯ ಲೇಖನಗಳನ್ನು ಮತ್ತೆ ಓದಿ ಮುಗಿಸಿದೆ. ಇದನ್ನು ಯಾಕೆ ಹೇಳುತ್ತಿದ್ದೇನೆಂದರೆ ಈ ಕೃತಿಯು ನಮ್ಮ ದೇಶದ ಇತ್ತೀಚಿನ ಬದುಕಿನಲ್ಲಿಯೇ ಅತ್ಯಂತ ಪ್ರಕ್ಷುಬ್ಧವಾದ, ಅಪಾಯಕಾರಿ ಭವಿಷ್ಯದ ಬುನಾದಿಯು ರಚಿತವಾದ, ಗಾಢ ವಿಷಾದ ಹುಟ್ಟಿಸುವ ಸೋಲುಗಳು ಹಾಗೂ ತಪ್ಪುಗಳ ಕಾಲವೊಂದರ ಅತ್ಯಂತ ಪ್ರಾಮಾಣಿಕವಾದ, ಅನೇಕ ಕಡೆಗೆ ಪ್ರವಾದಿ ಗುಣವುಳ್ಳ ಕೃತಿಯಾಗಿದೆ. 'ಹೊಸ ಮನುಷ್ಯ' ಪತ್ರಿಕೆಗಾಗಿ ಅದರ ಆರಂಭದ ಆರು ವರ್ಷಗಳ ಕಾಲ ಬರೆದ ಈ ಸಂಪಾದಕೀಯ ಈ ಲೇಖನಗಳು ಸಂಪಾದಕರ ಡೈರಿ ಆಗುವ ಬದಲು ನಮ್ಮ ನಾಗರೀಕ ಸಮುದಾಯದ ಅಂತರಂಗದ ಒಳತೋಟಗಳ ಸೂಕ್ಷ್ಮವೂ ನೈತಿಕವಾಗಿ ಶುದ್ಧವೂ ಆಗಿರುವ ಅಭಿವ್ಯಕ್ತಿಯಾಗಿವೆ. ಉದಾಹರಣೆಗೆ ಈ ಒಂದೆರಡು ದಿನಗಳಲ್ಲಿ ನಡೆದ ಹೀನವಾದ ರಾಜಕೀಯ ಕಸರತ್ತುಗಳು ಈ ಹಿಂದೆಯೂ ನಡೆದಿದ್ದವು– ಇದೇ ಅವಧಿಯಲ್ಲಿ. ಅದರಲ್ಲಿ ಭಾಗವಹಿಸಿದ ಪಾತ್ರಧಾರಿಗಳು ಕೆಲವರು ಅವರೇ ಆಗಿದ್ದರು. ಇಂಥ ಘಟನೆಗಳು ನಮ್ಮ ರಾಜಕೀಯದ ಜೊತೆಗೆ ನಮ್ಮ ಸಾರ್ವಜನಿಕ ನೈತಿಕತೆಯನ್ನು ಯಾವ ಅಧಃಪತನದ ಕಡೆಗೆ ಕರೆದೊಯ್ಯುತ್ತವೆಯೆಂದು ಡಿ.ಎಸ್.ಎನ್. ತಮ್ಮ ಅನೇಕ ಸಮಕಾಲೀನ ಟಿಪ್ಪಣಿಗಳಲ್ಲಿ ಕರಾರುವಾಕ್ಕಾಗಿ ಹೇಳಿದ್ದರು. ಮೋದಿ ಅಧಿಕಾರಕ್ಕೆ ಬಂದ ಒಂದು ತಿಂಗಳಲ್ಲಿ ಅವರು ಬದಲಾಗಿರುವುದರ ಸಾಧ್ಯತೆಗಳನ್ನು ಪರೀಶೀಲಿಸುತ್ತಾ ಆಗಿನ್ನೂ ಮೊಳಕೆಯ ರೂಪದಲ್ಲಿದ್ದ ಅವರ ಕೆಲವು ಕ್ರಿಯೆಗಳು ತರಬಹುದಾದ ಅಪಾಯಗಳನ್ನು ಸೂಚಿಸಿದ್ದರು. ಸಿದ್ಧರಾಮಯ್ಯನವರಿಗೆ ಅವರು ಒಂದು ವರ್ಷದ ಅಧಿಕಾರ ಮಾತ್ರ ಪೂರೈಸಿದ ಸಂದರ್ಭದಲ್ಲಿ ಎಚ್ಚರಿಕೆ ನೀಡಿ ಬರೆದ ಲೇಖನವನ್ನು ಇಂದು ಸಿದ್ಧರಾಮಯ್ಯ ಓದಿದರೆ ತಾವು ಏಕೆ ಸೋತರೆಂಬುದು ಎಲ್ಲಾ ಜನಾಭಿಪ್ರಾಯಗಳಿಗಿಂತ ಹೆಚ್ಚು ಖಚಿತವಾಗಿ ಗೊತ್ತಾಗುತ್ತದೆ. ಅದೇ ರೀತಿ ನರೇಂದ್ರ ಮೋದಿ ಕ್ರಮೇಣವಾಗಿ ಪ್ರಜಾಪ್ರಭುತ್ವದ ನೆಲೆಗಳನ್ನೇ ಅಸ್ಥಿರಗೊಳಿಸುತ್ತಾ ಬಂದಿರುವುದರ ದಾಖಲೆ ಅನೇಕ ಲೇಖನಗಳಲ್ಲಿದೆ.

ರಾಜಕೀಯ ವಿಮರ್ಶೆಯ ಮಾದರಿಯ ಬರಹದ ದೌರ್ಬಲ್ಯವೆಂದರೆ ಅವುಗಳಲ್ಲಿಯ ದನಿ ತಾನು ವ್ಯಾಖ್ಯಾನಿಸುವ ರಾಜಕೀಯದಿಂದ ದೂರದಲ್ಲಿರುವ 'ಸ್ಥಿತಪ್ರಜ್ಞ'ನ ದನಿಯಾಗಿರುತ್ತದೆ. ಡಿ.ಎಸ್.ಎನ್. ಅವರಿಗೆ ರಾಜಕೀಯ, ನೈತಿಕತೆ, ವೈಯಕ್ತಿಕ ಬದುಕು, ಒಳಿತು–ಕೆಡಕುಗಳ ಬಗೆಗಿನ ತಾತ್ವಿಕ ಚಿಂತನೆ, ಬದುಕನ್ನು ಹಸನುಗೊಳಿಸಬೇಕೆನ್ನುವ ತೀವ್ರ ಹಂಬಲ ಇವೆಲ್ಲ ಬಿಡಿ ಬಿಡಿ ಸಂಗತಿಗಳಲ್ಲ; ಲೌಕಿಕ–ಆಧ್ಯಾತ್ಮಿಕ ಆಸ್ಥೆಗಳು ಭಿನ್ನವಲ್ಲ. ಹೀಗಾಗಿ ರಾಜಕೀಯ ವಿದ್ಯಮಾನಗಳ ಬಗ್ಗೆ ಅವರು ವ್ಯಗ್ರರಾಗುತ್ತಾರೆ, ತಲ್ಲಣಗೊಳ್ಳುತ್ತಾರೆ, ಅಲ್ಲಲ್ಲಿ ಹತಾಶೆಗೊಳ್ಳುತ್ತಾರೆ ಕೂಡ. ಹೀಗಾಗಿ ಇಲ್ಲಿಯ ಲೇಖನಗಳಲ್ಲಿ ಚರ್ಚೆಯಾಗುವ ಸಂಗತಿಗಳು ಕೇವಲ ಸಾರ್ವಜನಿಕವಲ್ಲ; ಸೂಕ್ಷ್ಮವೂ, ಸಂಕೀರ್ಣವೂ ಮತ್ತು ಆದ್ದರಿಂದ ವ್ಯಗ್ರವೂ ಆಗಬಲ್ಲ ಮನಸ್ಸು ಈ ಸಂಗತಿಗಳನ್ನು ತೀವ್ರವಾಗಿ, ತನ್ನ ಅಂತರಂಗದ ಸಂಗತಿಗಳೇ ಎನ್ನುವ ಹಾಗೆ ಶೋಧಿಸುತ್ತದೆ. ಅದೇ ಹೊತ್ತಿಗೆ ಬರಹಗಳ ಉದ್ದಕ್ಕೂ ಸ್ಫುಟವಾಗಿ ಕಾಣುವ ಒಟ್ಟಂದದ, ಸಮಗ್ರೀಕರಣದ ಒಂದು ಚಿಂತನೆಯ ಮಾದರಿಯಿದೆ.

ಇದನ್ನು ಲೋಹಿಯಾ, ಗಾಂಧಿ, ಅಂಬೇಡ್ಕರ್‌ರ ಚಿಂತನೆಗಳಿಂದ ಪಡೆದಿರುವುದು ಎಂದು ಡಿ.ಎಸ್.ಎನ್. ಸೂಚಿಸಿದರೂ ಅದರ ಸಂಶ್ಲೇಷಣೆಯ ಸ್ವಭಾವ ಭಿನ್ನವೇ ಆಗಿದೆ. ಈ ಚಿಂತನೆಯ ಬಲದಿಂದ ಅವರು ಭರವಸೆ ಹುಟ್ಟಿಸುವ ವಿದ್ಯಮಾನಗಳನ್ನೂ ಹರಿತವಾದ ವಿಮರ್ಶೆಗೆ ಒಳಪಡಿಸಬಲ್ಲರು. ಉದಾಹರಣೆಗೆ ಪ್ರಸನ್ನರ ಬದನವಾಳು ಪ್ರಯೋಗವು ಒಂದು Event Management ಆಗಬಾರದು ಎಂದು ಟೀಕಿಸುತ್ತಲೇ, ಗಾಂಧಿ ಒಪ್ಪಿಕೊಂಡಿದ್ದ ಸ್ವಯಂಪ್ರೇರಿತ ಬಡತನವನ್ನು ಇಂದಿನ ಮಧ್ಯಮವರ್ಗವು ಒಪ್ಪುವುದು ಅಸಾಧ್ಯವೆನ್ನುವ ವಾದವನ್ನು ಮಂಡಿಸುತ್ತಾರೆ. ಹಾಗೆಯೇ ಅಣ್ಣಾ ಹಜಾರೆ ಅವರ ಭ್ರಷ್ಟಾಚಾರ ವಿರೋಧಿ ಚಳುವಳಿ "ಒಬ್ಬ ಪ್ರಾಮಾಣಿಕ ಹಳ್ಳಿಗನ ನೈತಿಕ ಶಕ್ತಿಯಿಂದ" ಇಂದಿನ ಜಡಸಮಾಜವನ್ನು ಎಚ್ಚರಿಸಬಲ್ಲದು ಎಂದು ಆಶಾದಾಯಕವಾಗಿ ಹೇಳುತ್ತಾ ಮುಂದೆ ಅದು ತೆಳುವಾಗಿ ತೆರೆಮರೆಗೆ ಸರಿದದ್ದನ್ನು ದಾಖಲಿಸುತ್ತಾರೆ. ಕೇಜ್ರಿವಾಲರ ಬಗ್ಗೆ ತುಂಬಾ ಆಶಾವಾದಿಯಾಗಿ ಬರೆದಿದ್ದ ಡಿ.ಎಸ್.ಎನ್., ಅವರೂ ಒಬ್ಬ ಸರ್ವಾಧಿಕಾರಿಯಾಗಿ ಬೆಳೆದದ್ದರ ಬಗ್ಗೆ ವಿಷಾದಪೂರ್ಣವಾಗಿ ಬರೆಯುತ್ತಾರೆ. ಈ ಲೇಖನಗಳನ್ನು ಓದುವಾಗ ನನಗೆ ಯಾಕೆ ನಮ್ಮ ಚಳುವಳಿಗಳಿಗೆ, ನೇತಾರರಿಗೆ ಆಳವಾದ, ಗಾಂಭೀರ್ಯವಿರುವ, ನೈತಿಕವಾಗಿ ಶುದ್ಧವಾದ ಕ್ರಿಯೆಗಳು ಸಾಧ್ಯವೇ ಆಗುವುದಿಲ್ಲವೆನ್ನುವ ಖಿನ್ನತೆ ಅನ್ನಿಸಿತು. ನಮ್ಮ ಸಮುದಾಯಿಕ ಜೀವನದಲ್ಲಿಯೇ ಕ್ರಿಯಾಶೀಲತೆ ಇಲ್ಲವಾಗಿಬಿಟ್ಟಂತೆ ಎನ್ನಿಸುತ್ತದೆ.


ಎಲ್ಲಾ ಸಮಸ್ಯೆಗಳಿಗೆ ಸಿದ್ಧಾಂತಗಳ ಮೂಲಕ ಅಥವಾ ತಕ್ಷಣದ ಕ್ರಿಯಾಶೀಲತೆಯ ಮೂಲಕವೇ ಪರಿಹಾರ ಹುಡುಕುವ ಧಾವಂತದಲ್ಲಿರುವ ಅನೇಕರಿಗೆ ಡಿ.ಎಸ್.ಎನ್. ಬರಹದಲ್ಲಿ ಕಾಣುವ ನೈತಿಕ ಹಟಮಾರಿತನದ ಧಾಟಿ ಕೆಲವೊಮ್ಮೆ ಅತಿ ಅನ್ನಿಸಬಹುದು. ಆದರೆ ಅವರು ತಮ್ಮ ಬರಹದ ಉದ್ದೇಶವನ್ನೇ critique ಎಂದಾಗಿ ನಿರೂಪಿಸಿಕೊಂಡಿದ್ದಾರೆ. ಅದನ್ನು ತಮ್ಮ ಜವಾಬ್ದಾರಿಯೆಂದು ಭಾವಿಸಿದ್ದಾರೆ. ಬಹುಪಾಲು ಲೇಖನಗಳಲ್ಲಿ ಇದನ್ನು ಸಮತೂಕದಿಂದ ನಿರ್ವಹಿಸಿದ್ದಾರೆ. ಹೀಗಾಗಿ ಅವರಿಗೆ ನಾವು ಬೆಳೆಸಿಕೊಂಡ ಅಭಿವೃದ್ಧಿಯೆಂಬ ಏಕದೇವೋಪಾಸನೆಯಿಂದಾಗಿ ಪರಿಸರವನ್ನೇ ನಾಶಮಾಡಿ ಸಾಮೂಹಿಕ ಆತ್ಮಹತ್ಯೆಗೆ ಸಿದ್ಧವಾಗುತ್ತಿರುವುದರ ಬಗ್ಗೆ ತೀವ್ರ ಆತಂಕಗಳಿವೆ. ಈ ಅಭಿವೃದ್ಧಿಯ ಅವಳಿ–ಜವಳಿಯೆಂದರೆ .ಉಪಭೋಗವೇ ಅಂತಿಮ ಮೌಲ್ಯವಾಗಿರುವ ಮಹಾ ಸಂಸ್ಕೃತಿ. ಈ ಸಂಬಂಧವಾಗಿ .ಉತ್ತರಾಖಂಡದಲ್ಲಿ ಸಂಭವಿಸಿದ 'ಜಲಪ್ರಳಯ'ದ ಬಗ್ಗೆ ಬರೆಯುತ್ತಾ ಪರಿಸರ ವಿಜ್ಞಾನವನ್ನು ಕಡೆಗಣಿಸಿ ಆತ್ಮವೇ ಇಲ್ಲದ ತಂತ್ರಜ್ಞಾನವನ್ನು ಆರಾಧಿಸುವುದರ ಬಗ್ಗೆ ಚರ್ಚಿಸುತ್ತಾರೆ. ಇದಕ್ಕೆ ತಳಕುಹಾಕಿಕೊಂಡ 'ಮಜಾ ಸಂಸ್ಕೃತಿ'ಯ ಬಗ್ಗೆ ಕೂಡ ಬರೆಯುತ್ತಾರೆ. ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಭೂಮಿಯ ಕೊನೆಕಾಲದ ಕ್ಷಣಗಣನೆ ಆರಂಭವಾಗುತ್ತದೆ. ಪ್ರಕೃತಿಯ ಆರಾಧನೆಯೇ ಮೂಲಸತ್ವವಾಗಿದ್ದ ನಮ್ಮ ಜಾನಪದ ಧರ್ಮ ಹಾಗೂ ನಂಬಿಕೆಗಳು ನಶಿಸಿಹೋಗಿ ಈಗ ಪರಿಸರವೆನ್ನುವುದು ಪರಿಸರವಾದಿಗಳ ಖಾತೆಯೆನ್ನುವಂತಾಗಿದೆ. ಡಿ.ಎಸ್.ಎನ್. ಬರಹವು ನಮ್ಮ ಪ್ರಜ್ಞೆಯನ್ನು ಪ್ರವೇಶಿಸಿ ಯಜಮಾನಿಕೆಯ ಸ್ಥಾನದಲ್ಲಿ ಕುಳಿತು, ಬಿಟ್ಟಿರುವ ಹಲವು ಸಂಕಥನಗಳ ಆತಂಕಿತವಾದ ಪರಿಶೀಲನೆಯಾಗಿದೆ.

ಈ ಲೇಖನಗಳನ್ನು ನಾನು ಕೇವಲ ಸಾಂದರ್ಭಿಕ ಅಥವಾ ಆ ಕ್ಷಣದ ಪ್ರತಿಕ್ರಿಯೆಗಳು ಎಂದು ನೋಡುವುದಿಲ್ಲ. ಇವು ನಮ್ಮ ಸದ್ಯದ ಅನೇಕ ಕಥನಗಳನ್ನು ಹಾಗೂ ಸಂಕಥನಗಳನ್ನು ಮುನ್ನೆಲೆಗೆ ತಂದು ಇಂಡಿಯಾದ ಚರಿತ್ರೆಯು ಸಾಗುತ್ತಿರುವ ದಿಕ್ಕು ದೆಸೆಗಳ ಬಗ್ಗೆ ವಿಸ್ತಾರವಾದ ಚರ್ಚೆಗೆ ವಸ್ತುವಾಗುತ್ತವೆ. ಮುಖ್ಯವಾಗಿ ಅಭಿವೃದ್ಧಿ, ರಾಷ್ಟ್ರ ಹಾಗೂ ರಾಷ್ಟ್ರೀಯತೆ, ಸೆಕ್ಯೂಲರ್‌ವಾದ, ಪ್ರಜಾಪ್ರಭುತ್ವ ಇವುಗಳು ಅನೇಕ ಲೇಖನಗಳಲ್ಲಿ ಮರುಕಳಿಸುತ್ತವೆ. ಇವು ಭಾರತೀಯ ವೈಚಾರಿಕತೆಯನ್ನು ಹಲವು ದಶಕಗಳಿಂದ ಪ್ರಚೋದಿಸಿ, ಜೀವಂತವಾಗಿರಿಸಿರುವ ವಿಷಯಗಳೇ ಆಗಿವೆ. ಇವುಗಳಲ್ಲಿ ಅನೇಕವು ಏಕೆ ಪ್ರಕ್ಷುಬ್ಧತೆ ಹಾಗೂ ಹಿಂಸೆಗಳಿಗೆ ಕಾರಣಗಳಾಗುತ್ತಿವೆ ಎನ್ನುವುದೇ ಇಂದಿನ ಪ್ರಧಾನ ಪ್ರಶ್ನೆಯಾಗಿದೆ. ದುರಂತವೆಂದರೆ ಇವುಗಳ ಬಗ್ಗೆ ಇಂಗ್ಲಿಷ್‌ನಲ್ಲಿ ಬರೆಯುವ ವಿದ್ವಾಂಸರ ಲೇಖನಗಳು ಮಾತ್ರ 'ರಾಷ್ಟ್ರೀಯ'ವೆನಿಸಿಕೊಂಡು ಪ್ರಭಾವ ಬೀರುತ್ತವೆ. ಡಿ.ಎಸ್.ಎನ್. ಅವರ ಹಾಗೆ ಅನೇಕ ಭಾರತೀಯ ಭಾಷೆಗಳಲ್ಲಿ ಬರೆಯುತ್ತಿರುವ ಲೇಖಕರು ನಿರಂತರವಾಗಿ ನಡೆಸುತ್ತಿರುವ ಸಂವಾದವು ನಮಗೆಲ್ಲಾ ಲಭ್ಯವಾಗುವ ಹಾಗಿದ್ದರೆ ವೈಚಾರಿಕ ವಸಾಹತುಶಾಹಿಯಿಂದ ಹೊರಬರಲು ಅನುಕೂಲವಾಗುತ್ತಿತ್ತು. ಇದು ಯಾಕೆ ಸಾಧ್ಯವಾಗುತ್ತಿಲ್ಲವೆನ್ನುವುದನ್ನು ಕನ್ನಡ ಮಾಧ್ಯಮದ ಬಗ್ಗೆ ಈ ಕೃತಿಯಲ್ಲಿರುವ ಲೇಖನಗಳು ಸಮಗ್ರವಾಗಿ ವಿವರಿಸುತ್ತವೆ.

**–ಡಾ. ರಾಜೇಂದ್ರ ಚೆನ್ನಿ**

# ಲಕ್ಷ್ಮೀಶ ತೋಳ್ಪಾಡಿಯವರ ಭಕ್ತಿ ಮೀಮಾಂಸೆ

ಪು : **ಮಹಾಯುದ್ಧಕ್ಕೆ ಮುನ್ನ...** ಲೇ: **ಲಕ್ಷ್ಮೀಶ ತೋಳ್ಪಾಡಿ** ಪ್ರ; **ಅಭಿನವ,** ಬೆಂಗಳೂರು ಪು :೫೬ ಬಲೆ : ರೂ. ೨೫/–





***ಮಹಾಯುದ್ಧಕ್ಕೆ ಮುನ್ನ*** ಮತ್ತು ***ಭಕ್ತಿಯ ನೆಪದಲ್ಲಿ*** – ಲಕ್ಷ್ಮೀಶ ತೋಳ್ಪಾಡಿಯವರ ಎರಡು ಪುಸ್ತಕಗಳು. 'ಮಹಾಯುದ್ಧಕ್ಕೆ ಮುನ್ನ' ೪೨ ಪುಟಗಳ ಪುಟ್ಟಕೃತಿ. ೧೯೮೦ರಲ್ಲಿ ಪ್ರಕಟಗೊಂಡು ಈಗ (೨೦೧೭) ಮರುಮುದ್ರಣಗೊಳ್ಳುತ್ತಿದೆ. 'ಭಕ್ತಿಯ ನೆಪದಲ್ಲಿ' ೯೧ ಪುಟಗಳ ಇನ್ನೊಂದು ಪುಸ್ತಕ.(೨೦೧೭) ಈ ಪುಸ್ತಕದಲ್ಲಿ ಭಕ್ತಿ ಮೀಮಾಂಸೆಯ ಜೊತೆಗೆ ತೋಳ್ಪಾಡಿಯವರ ಅಮೇರಿಕ ಪ್ರವಾಸದ ನೆನಪುಗಳ ನಿರೂಪಣೆಯೂ ಒಗ್ಗೂಡಿದೆ. ಈ ಎರಡೂ ಪುಸ್ತಕಗಳನ್ನು ಅಭಿನವ ಪ್ರಕಾಶನ ಪ್ರಕಟಿಸಿದೆ.

ಎರಡೂ ಕೃತಿಗಳು ಒಂದರ್ಥದಲ್ಲಿ ಒಂದೇ ಕೃತಿಯಾಗಿದೆ. ಯಾಕೆಂದರೆ ಈ ಎರಡೂ ಕೃತಿಗಳ ತಾತ್ವಿಕ ಭಿತ್ತಿ ಒಂದೇ ಆಗಿದ್ದು ಅದು ಭಕ್ತಿಯಾಗಿದೆ. ಹಾಗಾಗಿ ಇದನ್ನು ಪ್ರತ್ಯ–ಪ್ರತ್ಯೇಕವಾಗಿ ನೋಡದೆ ತೋಳ್ಪಾಡಿಯವರ ಇಂಗಿತದಲ್ಲೇ ಹೇಳುವುದಾದರೆ ಅದ್ವೈತವಾಗಿಯೇ ನೋಡಿ, ಇದನ್ನು ಪರಿಚಯಿಸುವ ಪ್ರಯತ್ನವನ್ನು ಈ ಪುಟ್ಟಟಿಪ್ಪಣಿಯಲ್ಲಿ ಮಾಡಲಾಗಿದೆ.

ಜನಪದ ಕಥೆಗಳಲ್ಲಿ ಬರುವ ರಾಕ್ಷಸನ ಪ್ರಾಣ ಏಳು ಸಮುದ್ರ ದಾಟಿ ಏಳು ಉಪ್ಪರಿಗೆಯ ಮೇಲಿರುವ ಪಂಚವರ್ಣದ ಗಿಳಿಯ ಕೊಕ್ಕಿನಲ್ಲಿರುವಂತೆ ತೋಳ್ಪಾಡಿಯವರ ಮಾತು ಮತ್ತು ಬರಹಗಳ ಪ್ರಾಣಶಕ್ತಿಯಿರುವುದು ನಾವು ಸೀದಾ–ಸಾದಾ ಎಂದು ಭಾವಿಸಿದ ಪದಗಳನ್ನು, ಘಟನೆಗಳನ್ನು ಒಡೆದು ಹೊಸದಾಗಿ ತೋರಿಸಿ ಅವುಗಳಲ್ಲಿರುವ ಅನೇಕ ಅರ್ಥಸಾಧ್ಯತೆಗಳನ್ನು ತಟ್ಟನೆ ಹೊಳೆಯಿಸುವುದರಲ್ಲಿ. ಇದು ಸಮಕಾಲೀನ ಕನ್ನಡ ವಾಙ್ಮಯದಲ್ಲಿ ಲಕ್ಷ್ಮೀಶರಿಗೇ ಒಲಿದಿರುವ ವಿಶಿಷ್ಟವಾದ ಶಕ್ತಿ. ಅಂದರೆ ತೋಳ್ಪಾಡಿಯವರು ಓದುಗನಲ್ಲೇ ಹೊಸಪ್ರಶ್ನೆಗಳು ಸ್ಫೋಟಗೊಳ್ಳುವಂತೆಯೂ ಹಾಗೂ ಹೊಸಅರ್ಥಗಳು ಸ್ಫುರಣೆಗೊಳ್ಳುವಂತೆಯೂ ಮಾಡಬಲ್ಲರು. ಈ ಮಾತಿಗೆ ಸೂಕ್ತವಾದ ನಿದರ್ಶನ 'ಭಕ್ತಿಯ ನೆಪದಲ್ಲಿ' ಪುಸ್ತಿಕೆಯಲ್ಲಿ ಬರುವ 'ತಾಳಮದ್ದಲೆ– ಭಕ್ತಿಯ ಅನುಸಂಧಾನ' ಎಂಬ ಲೇಖನದಲ್ಲೇ ಒದಗುತ್ತದೆ. ತಾಳಮದ್ದಲೆಯ ಬಗ್ಗೆ ಬರೆಯುತ್ತ ತೋಳ್ಪಾಡಿಯವರು ಸೇಡಿಯಾಪು ಅವರು ಈ ಕಲೆಯನ್ನು ವಿವರಿಸಲು ಬಳಸಿದ 'ಲುಪ್ತ ನಾಟ್ಯ' ಎಂಬ ವಿಮರ್ಶೆಯ ಮಾತನ್ನು ನೆನಪು ಮಾಡಿಕೊಳ್ಳುತ್ತಾರೆ. ಜೊತೆಗೆ ಈ 'ಲುಪ್ತ' ಎಂಬ ಒಂದು ಪದದಿಂದ ಭಾರತೀಯ ಯುಗಧರ್ಮದ ಕಲ್ಪನೆಗಳಿಗೆ ಜಿಗಿಯುತ್ತಾರೆ. ಕೃತಯುಗದಲ್ಲಿ ಧರ್ಮ ನಾಲ್ಕೂ ಪಾದಗಳನ್ನು ಆಧರಿಸಿ ನಿಂತಿರುವುದನ್ನು 'ನಿರುಮ್ಮಳ ಸ್ಥಿತಿ'ಎಂದು ಕರೆಯುವ ಲಕ್ಷ್ಮೀಶರು ತ್ರೇತಾಯುಗದಲ್ಲಿ ಒಂದು ಪಾದ ಕಳಚಿಹೋಗುವುದನ್ನು ಆಳವಾಗಿ ಧ್ಯಾನಿಸಿ ಕಳಚಿಕೊಳ್ಳುವುದೇ (ಲುಪ್ತವಾಗುವುದೇ) ಧರ್ಮವಲ್ಲವೇ ಎಂದು ಪರಿಭಾವಿಸಿ ಮರ್ಮಬೇಧಕವಾದ ಪ್ರಶ್ನೆಯನ್ನು ಎಸೆಯುತ್ತಾರೆ. ದ್ವಾಪರದಲ್ಲಿ ಎರಡು ಪಾದಗಳು ಕಳಚುವುದನ್ನು ದ್ವಂದ್ವ; ಧರ್ಮ–ಸಂಕಟ, ಸಂಕಟ; ವಿದ್ರೋಹ ಎಂದು ಕಾರಣೀಕದ ಮಾತುಗಳಂತೆ ನುಡಿಯುತ್ತ ಇದು ಎರಡು ಕಾಲಲ್ಲಿ ನಡೆಯುತ್ತ ತಾನು ಎದ್ದು ನಿಂತವನೆನ್ನುವ ಮನುಷ್ಯನ ಭ್ರಮೆಯ ಪಾಡೂ ಹೌದು ಎಂದೆನ್ನುತ್ತ ಭಗವದ್ಗೀತೆಯಿಂದ ತೊಡಗಿ ಮನುಷ್ಯ ತಾನು ಸ್ವತಂತ್ರ ಎಂದು ಆಧುನಿಕತೆಯ ಕಾಲದಲ್ಲಿ ಹುಸಿ ಭಾವಿಸಿ ತಾನೇ ಒಂದು ಬೃಹತ್ ಹುಸಿಯಾಗಿರುವಲ್ಲಿಯವರೆಗೆ ತನ್ನ ಚಿಂತನೆಯ ಮಿಂಚು ಹಾಯಿಸಬಲ್ಲರು. ಕಲಿಯುಗಕ್ಕೆ ಬರುತ್ತ ಧರ್ಮದ ಒಕ್ಕಾಲು ನಡಿಗೆಯನ್ನು ವಿವರಿಸುತ್ತ ಒಂದು ಕಾಲು ಹೊಂದಿರುವ ಅಂಗಹೀನನಾಗಿರುವ ಅ–ಸಹಾಯ ಮನುಷ್ಯನಿಗೆ ಒಂದು ಊರುಗೋಲಾದರೂ ಬೇಕು. ಈ ಲೋಕದಲ್ಲಿ ಅಂತಹ ಒಂದು ನೆರವು 'ಭಕ್ತಿ' ಎಂಬ ಊರುಗೋಲು ಎಂದು ಜನರ ನಿತ್ಯದ ಬವಣೆಗೆ ತಂಪನ್ನೆರೆಯುತ್ತಾರೆ.

ತೋಳ್ಪಾಡಿಯವರು ಈ ಎರಡೂ ಕೃತಿಗಳಲ್ಲಿ ಕುಂತಿ ಕೃಷ್ಣನನ್ನು ಸ್ತುತಿಸುವ

ಪು : **ಭಕ್ತಿಯ ನೆನಪದಲ್ಲಿ** ಲೇ: : **ಲಕ್ಷ್ಮೀಶ ತೋಳ್ಪಾಡಿ** ಪ್ರ :**ಅಭಿನವ,** ಬೆಂಗಳೂರು ಪು : ೧೦೮ ಬೆಲೆ : ರೂ. ೧೦೦/–




ಘಟನೆಯನ್ನು ಉದಾಹರಿಸುತ್ತ 'ಸಜ್ಜನರೆಂದರೆ ಭಗವಂತನ ಮಾತಿಗೆ ಒಂದು ರೂಪಾಂತರವನ್ನು ಒದಗಿಸುವವರು' ಎಂದೆನ್ನುತ್ತಾರೆ. ಇದೇ ಮಾತನ್ನು ಲಕ್ಷ್ಮೀಶ ತೋಳ್ಪಾಡಿಯವರನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಮೀಮಾಂಸಕರೆಂದರೆ ಲೋಕೋತ್ತರ ಘಟನೆಗಳಿಗೂ ಲೌಕಿಕಾಲೌಕಿಕ ವಿದ್ಯಮಾನಗಳಿಗೂ ಸಂಬಂಧವನ್ನೂ, ಅರ್ಥವಿದೂರವನ್ನೂ ಒದಗಿಸುವವರು ಎಂದು ನಾವು ಭಾವಿಸಬಹುದೇ..? ಈ ಅವಳಿ ಕೃತಿಗಳಲ್ಲಿ ಲಕ್ಷ್ಮೀಶರು ಮಾಡುವ ಚಿಂತನೆಯನ್ನು ಒಪ್ಪುವವರೂ ಇರಬಹುದು. ಒಪ್ಪದಿರುವವರೂ ಇರಬಹುದು. ಆದರೆ ಅವರು ಚಿಂತನೆಯನ್ನು ನಡೆಸುವ ರೀತಿಯನ್ನು ಯಾರೂ ನಿರಾಕರಿಸಲಾರರು. ದಿನನಿತ್ಯದ ಸಂಗತಿಗಳಿಗೆ ಫಿಲಾಸಫಿಕಲ್ ಸ್ಪರ್ಷ ಕೊಡುವುದೆಂದರೆ ಇದೇ ಅಲ್ಲವೇ..?

ತೋಳ್ಪಾಡಿಯವರ ಈ ಪುಸ್ತಕಗಳಲ್ಲಿ ಮತ್ತೆ ಮತ್ತೆ ಕಂಡು ಬರುವ ಕೆಲವು ತತ್ವಜ್ಞಾನೀಯ ಝಲಕ್‌ಗಳನ್ನು ಇಲ್ಲಿ ಮರುಮಂಡಿಸಿದ್ದೇನೆ. ಯಾಕೆಂದರೆ ತಮ್ಮ ಕೃತಿಗಳಲ್ಲಿ ಇಂತಹ ಅರ್ಥ ಚಮತ್ಕೃತಿಗಳನ್ನು ಮಾಡುವುದರಲ್ಲಿ ಅವರು ಪಾರಂಗತರು ಎಂಬ ಕಾರಣಕ್ಕಾಗಿ. ಕನ್ನಡದ 'ಹೊಳೆಯುವುದು' ಎಂಬ ಪದ ನಿಜಕ್ಕೂ ಫಳಫಳ ಹೊಳೆಯುವುದು ತೋಳ್ಪಾಡಿಯವರ ಇಂತಹ ಕಾಣ್ಕೆಗಳಿಂದ. ಕರ್ಣನ ಬಗ್ಗೆ ಬರೆಯುತ್ತ ಲಕ್ಷ್ಮೀಶ ತೋಳ್ಪಾಡಿಯವರು ನಿಡುಸುಯ್ಯುವುದು ಹೀಗೆ. "ಸೂರ್ಯಕಾಣದಿದ್ದರೆ, ಮೋಡ ಮುಸುಕಿದ್ದರೆ 'ದುರ್ದಿನ' ಎನ್ನುತ್ತಾರೆ. ಸೂರ್ಯ ಪ್ರಖರವಾಗಿ ಕಂಡ ದಿನವೇ ತಾಯಿ–ಮಗುವಿಗೆ ದುರ್ದಿನವಾಗಬೇಕೆ.? ಕರ್ಣನ ಬಳಿಗೆ ಕುಂತಿ ಕೃಷ್ಣನ ಸೂಚನೆಯಂತೆ ಬಂದು 'ತೊಟ್ಟಂಬನ್ನು ಮರಳಿ ತೊಡದಿರು ಮಗನೇ, ಇಟ್ಟಗುರಿಯನ್ನು ಮತ್ತೊಮ್ಮೆ ಬದಲಿಸದಿರು' ಎಂಬ ಬೇಡಿಕೆಗಳನ್ನು ಮುಂದಿಡುವ ಸಂದರ್ಭದಲ್ಲಿ ತೋಳ್ಪಾಡಿಯವರು ಹೇಳುವ "ನೀನು ನನ್ನ ಬಿಟ್ಟುಕೊಟ್ಟಲ್ಲಿಂದ, ಬಿಟ್ಟುಕೊಡುವುದು ನನಗೆ ಬೆನ್ನಿಗಂಟಿದೆ ತಾಯೇ" ಎಂಬ ಮಾತು ಹೃದಯವನ್ನು ಹಿಂಡಿ ಬಿಡುತ್ತದೆ. ಈ ಮಾತುಗಳನ್ನು ವ್ಯಾಸರ ಕರ್ಣ, ಪಂಪನ ಕರ್ಣ ಹೇಳಿದ್ದಾನೋ ಇಲ್ಲವೋ. ತೋಳ್ಪಾಡಿಯವರ ಕರ್ಣನಂತೂ ಇದನ್ನು ಹೇಳಿಬಿಟ್ಟು ಓದುಗರ ಎದೆಭಾರವನ್ನು ಇನ್ನಷ್ಟು ಹೆಚ್ಚಿಸುತ್ತಾನೆ.

ಜಗತ್ತಿನ ಕ್ಲಾಸಿಕ್‌ಗಳ ಇತಿಹಾಸದಲ್ಲಿ ಪ್ರಾಯಃ ಭರತಖಂಡದ ರಾಮಾಯಣ ಮತ್ತು ಮಹಾಭಾರತಗಳೆಂಬ ಕಾವ್ಯಗಳು ದೇವರನ್ನು ಮಾನವೀಕರಣಗೊಳಿಸಿದುದನ್ನು ತೋಳ್ಪಾಡಿಯವರು ಮಂಡಿಸುವ ಪರಿ ಅನನ್ಯವಾಗಿದೆ.

"ವ್ಯಾಸ–ವಾಲ್ಮೀಕಿ, ಬದುಕಿನ ಜಟಿಲ ನಡೆಗಳನ್ನು ಚಿತ್ರಿಸಿ, ಅದರ ನಡುವೆ ದೇವರನ್ನು ತಂದು ನಿಲ್ಲಿಸಿದ್ದಾರೆ. 'ಅವತಾರ'ವೆನ್ನಿಸಿದರೂ ದೇವರು ಮನುಷ್ಯನಾಗಬೇಕು. ಈ ಭವದಲ್ಲಿ; ಮನುಷ್ಯ ಪಡುವ ಎಲ್ಲ ಪರಿಭವಗಳನ್ನೂ ಅನುಭವಿಸಬೇಕು. ತನ್ನನ್ನು ಸ್ತುತಿ ಮಾಡುವ ದೇವತೆಗಳ ಮುಂದೆ, 'ನಾನು ರಾಮ; ನಾನು ಮನುಷ್ಯ; ನಾನು ದಶರಥನ ಮಗ' ಎನ್ನುವಷ್ಟರ ಮಟ್ಟಿಗೆ ಮನುಷ್ಯನಾಗಬೇಕು. ಆದರೂ ಅವನು ದೇವರು. ಅವನು ಕೇವಲ ಮನುಷ್ಯನಲ್ಲ. ಅವನಿಗೆ ಇನ್ನೊಂದು ಮುಖ ಇದ್ದೇಇದೆ. ಇವೆಲ್ಲವನ್ನೂ ನೋಡಿದರೆ 'ಭಕ್ತಿ' ಎಂದರೆ; ಮನುಷ್ಯನಾಗಿ ಇದೆಲ್ಲವನ್ನೂ ಅನುಭವಿಸುತ್ತಿರುವ ದೇವರ ಅವಸ್ಥೆ ಎನಿಸುತ್ತದೆ." ಈ ಮಾತಿನ ಮೂಲಕ ತೋಳ್ಪಾಡಿಯವರು ಗಹನವಾದ ಅದ್ವೈತವನ್ನು ಸರಳವಾದ ಮಾತುಗಳಲ್ಲಿ ವಿವರಿಸುತ್ತಾರೆ ಮತ್ತು ಭಕ್ತಿಯೇ ಜೀವ–ದೇವವನ್ನು ಜೋಡಿಸುವ ಸೂಕ್ಷ್ಮಾತಿಸೂಕ್ಷ್ಮ ತಂತು ಎಂಬುದನ್ನೂ ವಿಷದೀಕರಿಸುತ್ತಾರೆ.

ನಮ್ಮ ಈ ಜೀವಜಗತ್ತಿನಲ್ಲಿ ಹಲವನ್ನು ವಿವರಿಸಬಹುದು. ಇನ್ನು ಹಲವನ್ನು ಅನುಭವಿಸಬಹುದು. ಇನ್ನೂ ಹಲವನ್ನು ಅನುಭವಿಸಿ ವಿವರಿಸಲೂಬಹುದು. ಆದರೆ ತೋಳ್ಪಾಡಿಯವರ ಈ ಪುಸ್ತಕಗಳು ಮತ್ತು ಇವುಗಳ ಕೇಂದ್ರ ಸಂಗತಿಯಾಗಿರುವ 'ಭಕ್ತಿ' ಅನುಭವಿಸುವುದಕ್ಕಷ್ಟೇ ಇದೆ. ವಿವರಿಸುವುದಕ್ಕಲ್ಲ.

**–ಡಾ. ನಿತ್ಯಾನಂದ ಬಿ.ಶೆಟ್ಟಿ**

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



**–ಕೋಣಂದೂರು ಲಿಂಗಪ್ಪ**
ಮಾಜಿ ಶಾಸಕರು, ಶಿವಮೊಗ್ಗ

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



**–ಎಸ್.ಟಿ. ತಿಮ್ಮನಗೌಡ್ರ**
**ಮತ್ತು ಗೆಳೆಯರು**
ಕೊಪ್ಪಳ

‘ಹೊಸ ಮನುಷ್ಯ’ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು!



**ರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರ**
ಗೊಟ್ಟಿಗೆರೆ, ಬನ್ನೇರುಘಟ್ಟ ರಸ್ತೆ
**ಬೆಂಗಳೂರು**

## ತಿಂಗಳ ಸಾಲುಗಳು...



ಪೂರ್ವವೂ ಪಶ್ಚಿಮವೂ ಅಲ್ಲಾಹುವಿನವು. ನೀನೆತ್ತ ಕಡೆ ತಿರುಗಿದರೂ ಅತ್ತ ಕಡೆ ಇರುವುದು ಅಲ್ಲಾಹುವಿನ ಮುಖವೇ.

–ಕುರ್‍ರಾನ್

*ಶುಭಾಶಯಗಳೊಂದಿಗೆ,*

**ಆರ್. ಉಮೇಶ್ ಅಂಡ್ ಅಸೋಸಿಯೇಟ್ಸ್**
ಲೆಕ್ಕ ಪರಿಶೋಧಕರು, ಮೈಸೂರು
ಮೊಬೈಲ್ : ೯೪೪೮೦೮೪೭೯೩

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper** RNI No. KARKAN/2012/47568
Rgd No. KA/SK/SMG-1209/2016-18

ಇವರಿಗೆ \ To

If undelivered, please return to D.S. Nagabhushana, Editor,
‘Hosa Manushya’, ’HIG-5, ‘Nudi’, Kallahalli Extension,
Vinoba Nagara, Shivamogga -577204( Karnataka)